
ಕಲ್ಯಾಣ ಕಿರಣ

ಜುಲೈ-2009 ಬೆಲೆ-ರೂ.10.00





ಭದ್ರಾವತಿ ರಾಷ್ಟ್ರೀಯ ಬಸವ ದಳದ ಬಸವ ಮಂಟಪದಲ್ಲಿ ಅಂಧ ಮಕ್ಕಳಿಗೆ ವಸ್ತ್ರ ವಿತರಣೆ ಹಾಗೂ ದಾಸೋಹ ಏರ್ಪಡಿಸಿದ್ದರು



ದಾರವಾಡದಲ್ಲಿ ನಡೆದ ಪೂಜ್ಯ ಲಿಂ. ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ ಲಿಂಗೈಕ್ಯ ಸಂಸ್ಮರಣೆಯಂದು ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶರಣ. ದತ್ತಾ ಡೋರ್ಲಿ ಅವರನ್ನು ಸನ್ಮಾನಿಸಲಾಯಿತು

ಸಂಪುಟ-39 ಬಸವ ಶಕೆ -876 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-6 ಜುಲೈ-2009 ವಾರ್ಷಿಕ ಚಂದಾ 100/- ರೂ.

ಬಸವಾಷ್ಟಕ

ನತಜನ ರಕ್ಷಕ ಶ್ರೀಗುರು ಬಸವ
ಲಿಂಗಾಯತ ಸಂಸ್ಥಾಪಕ ಶ್ರೀ ಗುರು ಬಸವ
ಇಷ್ಟಪ್ರದಾಯಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 1 ॥

ವಚನ ಶಾಸ್ತ್ರಸಾರ್ವಭೌಮ ಶ್ರೀ ಗುರು ಬಸವ
ನವ ಪಥ ನಿರ್ಮಾಪಕ ಶ್ರೀಗುರು ಬಸವ
ಸಮತಾವಾದಿ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 2 ॥

ಇಷ್ಟಲಿಂಗದಾತ ಶ್ರೀ ಗುರು ಬಸವ
ಇಷ್ಟಲಿಂಗಧಾರಕ ಶ್ರೀ ಗುರು ಬಸವ
ಇಷ್ಟಲಿಂಗ ಪೂಜಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 3 ॥

ವಾಕ್ಸಿದ್ಧಿ ಪುರುಷ ಶ್ರೀ ಗುರು ಬಸವ
ಪಂಚ ಪರುಷ ಶ್ರೀ ಗುರು ಬಸವ
ಜೀವನ್ಮುಕ್ತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 4 ॥

ಪತಿತೋದ್ಧಾರಕ ಶ್ರೀ ಗುರು ಬಸವ
ದಲಿತೋದ್ಧಾರಕ ಶ್ರೀ ಗುರು ಬಸವ
ಪಾವನಚರಿತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 5 ॥

ಮಂತ್ರ ಪುರುಷ ಶ್ರೀ ಗುರು ಬಸವ
ಕ್ರಾಂತಿಯೋಗಿ ಶ್ರೀ ಗುರು ಬಸವ
ಶಾಂತಿದೂತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 6 ॥

ಶರಣ ಪ್ರೇಮಿ ಶ್ರೀ ಗುರು ಬಸವ
ಶರಣ ಪ್ರೀತ ಶ್ರೀ ಗುರು ಬಸವ
ಶರಣ ಪಥದಾತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 7 ॥

ಮುಕ್ತಿದಾಯಕ ಶ್ರೀ ಗುರು ಬಸವ
ಭಕ್ತೋದ್ಧಾರಕ ಶ್ರೀ ಗುರು ಬಸವ
ಬಸವಾತ್ಮಜೆ ಪಿತ ಶ್ರೀ ಗುರು ಬಸವ
ಸಚ್ಚಿದಾನಂದ ಸುತ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 8 ॥

ರಚನೆ- ಮಾತಾಜಿ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಮೈಸೂರಿನಲ್ಲಿ ಪೂಜ್ಯ ಮಾತಾಜಿಯವರ ಕಾರ್ಯಕ್ರಮ

ದಿ. 18-7-2009, ಶರಣ (ಶನಿ)ವಾರದಂದು ಬೆಳಿಗ್ಗೆ 10-30ಕ್ಕೆ ಶರಣೆ. ರತ್ನಮ್ಮ ಮತ್ತು ಶರಣ. ಜಯಣ್ಣ ಅವರ ಸುಪುತ್ರಿ ಶರಣೆ. ಮಾನಸ ಮತ್ತು ಶರಣ. ತಿರುಜ್ಞಾನಂ ಅವರ ಆರತಿ - ಅಕ್ಷತೆ. **ಸ್ಥಳ :** ರೇಲ್ವೆ ಸಮುದಾಯ ಭವನ, ಮಾನಂದ ವಾಡಿ ರಸ್ತೆ, ಮೈಸೂರು.

ದಿ. 19-7-2009, ದೇವ (ಭಾನು)ವಾರದಂದು ಬೆಳಿಗ್ಗೆ 10-30ಕ್ಕೆ ಮೈಸೂರು ರಂಗಾಚಾರ್ಲು ಪುರಭವನ (ಟೌನ್‌ಹಾಲ್)ದಲ್ಲಿ ರಾಷ್ಟ್ರೀಯ ಬಸವ ದಳದ ವಾರ್ಷಿಕೋತ್ಸವ ಮತ್ತು ವಿಶ್ವಗುರು ಬಸವಣ್ಣನವರ 814ನೆಯ ಲಿಂಗೈಕ್ಯ ಸಂಸ್ಮರಣೆ ಕಾರ್ಯಕ್ರಮವಿದೆ.

ದಿ. 20-7-2009, ಶಿವ (ಸೋಮ)ವಾರದಂದು ಬೆಳಿಗ್ಗೆ 10- 30ಕ್ಕೆ ಕೊಳ್ಳೇಗಾಲ ತಾಲ್ಲೋಕು, ಮತ್ತೀಪುರದ ಶರಣ.ಸು.ಮಲ್ಲಿಕಾರ್ಜುನಪ್ಪನವರ ಮನೆಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9620058492

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 814ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ: ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನ, ಬೆಂಗಳೂರು,

ದಿ.25-7-2009, ಬೆಳಿಗ್ಗೆ .10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 814ನೆಯ ಲಿಂಗೈಕ್ಯ ದಿನವು ಭಾನು(ದೇವ) ವಾರ ದಿ.26-7-2009ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 814ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ವಿಶೇಷ ವಿವರ: ಪ್ರತಿ ವರ್ಷವೂ ಬಸವ ಪಂಚಮಿಯನ್ನು ಸರ್.ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಆಚರಿಸುತ್ತಾ ಬಂದಿದ್ದೇವೆ. ಈ ಸಲ ಅದು ಭಾನುವಾರ ಬಂದಿದ್ದು ನಮಗೆಲ್ಲ ಅತೀವ ಆನಂದವಾಗಿತ್ತು, ಆದರೆ ಪುರಭವನವು ಭಾನುವಾರದಂದು ಬೇರೆಯವರಿಗೆ ಕೊಡಲ್ಪಟ್ಟ ಕಾರಣ ನಾವು ಕಾರ್ಯಕ್ರಮವನ್ನು ದಿ.25-7-2009, ಶನಿ (ಶರಣ)ವಾರದಂದು ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ, ದಿ.26-7-2009 ಭಾನು (ದೇವ) ವಾರದಂದು ರಾಜಾಜಿ ನಗರದ ಬಸವ ಮಂಟಪದಲ್ಲಿ ಏರ್ಪಡಿಸುತ್ತಿದ್ದೇವೆ.

ಹಾಲು ಹಣ್ಣು ವಿತರಣೆ

ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲು ಎರೆಯುವ ಮೂಢ ಸಂಪ್ರದಾಯ ಬಿಟ್ಟು ಮಾನವೀಯ ಕಾರ್ಯಕ್ಕೆ ಅದನ್ನು ಬಳಸಬೇಕೆಂದು ರಾಷ್ಟ್ರೀಯ ಬಸವ ದಳದ ವತಿಯಿಂದ ವಿಕ್ಟೋರಿಯಾ ಮತ್ತು ಕುಷ್ಠರೋಗಿಗಳ ಆಸ್ಪತ್ರೆಯಲ್ಲಿ ದಿ.26-7-2009ರಂದು ಹಣ್ಣು- ಹಾಲು ವಿತರಿಸುವ ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕವನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕವು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿದೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ದಿ.25ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್‌ವತಿಯಿಂದ 814 ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ . ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್‌ದಿಂದ ಹೊರಟು ನಗರ್ತರ ಪೇಟೆ, ಅವೆನ್ಯೂ ರಸ್ತೆ ಮಾರ್ಗವಾಗಿ ಸಾಗಿ ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು. ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು ಬೆನ್ನ ಮೇಲೆ ಬಸವ ರಕ್ಷೆ (ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಬಸವ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ನೇರ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು,ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ನೀಲಾಂಬಿಕಾ ಷಷ್ಠಿ - ಸಾಮೂಹಿಕ ಇಷ್ಟಲಿಂಗಾರ್ಚನೆ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣಿಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ.26-7-2009 ರಂದು 814ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30ರಿಂದ ಬೆಂಗಳೂರಿನ ರಾಜಾಜಿ ನಗರದ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆಯೊಡನೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ. ಶರಣ ಬಂಧುಗಳು ಪೂಜಾ ನಂತರ ಕರುಣ ಪ್ರಸಾದವನ್ನು ಪಡೆಯಬೇಕು.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ(ಸಿಟಿ ಆಸ್ಪತ್ರೆ ಪಕ್ಕ) ಇದೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಬಸವ ಮಂಟಪಕ್ಕೆ ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ,
ಬೆಂಗಳೂರು-10
ದೂರವಾಣಿ : 080- 23131476

ಸಂಪಾದಕೀಯ : - ಮಾತಾಜಿ

1. ದೇಹದಾನಕ್ಕೆ ಸಿದ್ಧರಾಗಿರುವ ಶರಣ ಬಂಧುಗಳು

ಮಾನವ ಶರೀರ ನಶ್ವರ. ಪಂಚಭೂತಗಳಿಂದಾದ ಈ ದೇಹವು ಒಂದು ದಿನ ಸಾವನ್ನು ಅಪ್ಪುವಂತಹುದು.

ಪೃಥ್ವಿ ಪೃಥ್ವಿಯ ಕೂಡದ ಮುನ್ನ, ಅಪ್ಪುವ ಅಪ್ಪುವ ಕೂಡದ ಮುನ್ನ
ತೇಜ ತೇಜವ ಕೂಡದ ಮುನ್ನ, ವಾಯು ವಾಯುವ ಕೂಡದ ಮುನ್ನ
ಆಕಾಶ ಆಕಾಶವ ಕೂಡದ ಮುನ್ನ
ಪಂಚೇಂದ್ರಿಯಗಳೆಲ್ಲ ಹಂಚು ಹರಿಯಾಗದ ಮುನ್ನ
ಚನ್ನಮಲ್ಲಿಕಾರ್ಜುನಂಗೆ ಶರಣೆನ್ನಿರಿ! - ವೀರ ವಿರಾಗಿಣಿ ಅಕ್ಕಮಹಾದೇವಿ

ಎಲೆ ಶಿವನೆ, ಎಲೆ ಶಿವನೆ,
ನಿನ್ನಿಂದ ಸಾಲವ ಕೊಂಡು ನಿಮ್ಮ ಶಿವಪುರದ ಹೋಗುವನಲ್ಲ
ಪೃಥ್ವಿಯ ಸಾಲಕ್ಕೆ ಪೃಥ್ವಿಯನೆ ಕೊಟ್ಟು, ಅಪ್ಪುವಿನ ಸಾಲಕ್ಕೆ ಅಪ್ಪುವನೆ ಕೊಟ್ಟು,
ತೇಜದ ಸಾಲಕ್ಕೆ ತೇಜವನೆ ಕೊಟ್ಟು, ವಾಯುವಿನ ಸಾಲಕ್ಕೆ ವಾಯುವನೆ ಕೊಟ್ಟು,
ಆಕಾಶದ ಸಾಲಕ್ಕೆ ಆಕಾಶವನೆ ಕೊಟ್ಟು, ಇನ್ನಾರಿಗೂ ಪ್ರಸಾದವ ಕೊಡಲಿಕ್ಕಿಲ್ಲವೆಂದು
ಕೂಡಲ ಚನ್ನ ಸಂಗಮದೇವರಲ್ಲಿ
ಹೂಳಿ ಹೊಕ್ಕ ಶರಣಂಗೆ ನಮೋ ನಮೋ ಎಂಬೆನು - ಚನ್ನಬಸವಣ್ಣನವರು

ಸಾವಿನ ನಂತರ ಪಂಚಭೂತಾತ್ಮಕ ಶರೀರದ ಧಾತುಗಳು ಪುನಃ ಪೃಥ್ವಿ ಅಪ್, ತೇಜ, ವಾಯು, ಆಕಾಶಗಳಲ್ಲಿ ವಿಲೀನವಾಗುತ್ತವೆ. ಮುಕ್ತಾತ್ಮನ ಆತ್ಮವು ಲಿಂಗದೇವನಲ್ಲಿ ಉರಿಯುಂಡ ಕರ್ಪುರದಂತೆ ಲೀನವಾಗುತ್ತದೆ. ಭವಾತ್ಮನ ಆತ್ಮವು ತನ್ನ ಕರ್ಮಾನುಸಾರ ಪುನಃ ಜನ್ಮ ಎತ್ತುತ್ತದೆ.

ನಿರ್ಜೀವ ಶವವನ್ನು ಸಮಾಧಿ ಮಾಡುವವರು ಕೆಲವರು, ದಹನ ಮಾಡುವವರು ಮತ್ತೆ ಕೆಲವರು, ಪಾರ್ಸಿಗಳು ಹದ್ದು ಕಾಗೆಗಳಿಗೆ ಆಹಾರವಾಗಲೆಂದು ಎಸೆಯುವರು. ಪಂಚಭೂತಗಳು ವಿಲೀನವಾಗಲು ಸಮಾಧಿ ಕ್ರಿಯೆ ಹೆಚ್ಚು ಅರ್ಥಗರ್ಭಿತ ಎಂಬುದರಲ್ಲಿ ಸಂದೇಹವಿಲ್ಲ. ಆಧುನಿಕ ವಿಜ್ಞಾನದ ನೆರವಿನಿಂದ ದೇಹದಾನ ಮಾಡುವ ಪ್ರಕ್ರಿಯೆಯೂ ಈಗ ನಡೆಯುತ್ತಿದೆ. ಸತ್ತ ನಂತರ ಶರೀರವು ವೈಜ್ಞಾನಿಕ ಪ್ರಯೋಗಕ್ಕೆ ನೆರವಾಗಲಿ ಎಂಬ ಆಶಯ ದೇಹದಾನದ ಹಿಂದೆ ಇದೆ. ವೈದ್ಯಕೀಯ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಅಧ್ಯಯನಕ್ಕೆ ದೇಹವು ಬಳಕೆಯಾಗುತ್ತದೆ. ಸದೃಢವಾಗಿದ್ದರೆ ಕೆಲವು ಅಂಗಾಂಗಗಳು ಕಸಿಗೂ ನೆರವಾಗುತ್ತವೆ. ಲಿಂಗಾಯತ ಧರ್ಮದ ಸೈದ್ಧಾಂತಿಕ ಚೌಕಟ್ಟಿನಲ್ಲಿ ವಿಶ್ಲೇಷಿಸಿದಾಗಲೂ ದೇಹದಾನ ಪ್ರಕ್ರಿಯೆಯು ಅಸಿಂಧುವೇನಲ್ಲ? ಪ್ರತಿಯೊಂದು ಅನ್ನದ ಅಗುಳು, ವಸ್ತುವು ಉಪಯೋಗವಾಗಬೇಕೆಂಬ ಲಿಂಗಾಯತ ಧರ್ಮದ ಪ್ರಸಾದ ತತ್ವಕ್ಕನುಗುಣವಾಗಿ ದೇಹದಾನವು ಉತ್ತಮವೆ. ಆದರೆ ಮುಖ್ಯ ಸಂದೇಹವೆಂದರೆ ನಿಷ್ಠಾವಂತ ಶರಣರು ಧರಿಸಿದ ಇಷ್ಟಲಿಂಗವನ್ನು ಏನು ಮಾಡಬೇಕು? ವೈದ್ಯಕೀಯ ಅಧ್ಯಯನ ಮಾಡವವರಿಗೆ ಆ ಬಗ್ಗೆ ಭಕ್ತಿಯಾಗಲಿ, ತಿಳುವಳಿಕೆಯಾಗಲಿ ಇರದು. ಅವರು ಇಷ್ಟಲಿಂಗವನ್ನು ಬಿಸುಟುವ ಸಾಧ್ಯತೆ ಇದೆ.

ಇದಕ್ಕೆ ಪರಿಹಾರವೆಂದರೆ, ವ್ಯಕ್ತಿ ಸತ್ತ ನಂತರ ಮಾಡಬೇಕಾದ ಪೂಜಾದಿ ಕಾರ್ಯಗಳನ್ನೆಲ್ಲ ನೆರವೇರಿಸಿ ಇಷ್ಟಲಿಂಗವನ್ನು, ರುದ್ರಾಕ್ಷಿ ಧರಿಸಿದ್ದರೆ ಅದನ್ನು ತೆಗೆದಿಟ್ಟುಕೊಂಡು ಶರೀರವನ್ನು ಸಂಬಂಧಪಟ್ಟ ವಿದ್ಯಾಲಯ / ಆಸ್ಪತ್ರೆಗೆ ಒಪ್ಪಿಸುವುದು. ರುದ್ರಾಕ್ಷಿ ಮಾಲೆಯನ್ನು ಯಾರು ಬೇಕಾದರೂ ಹಿರಿಯರ ನೆನಪಿನಲ್ಲಿ ಅವರ ಆಶೀರ್ವಾದ ಎಂದು ಧರಿಸಬೇಕು ಇಷ್ಟಲಿಂಗವನ್ನು ಪೂಜಾಗೃಹದಲ್ಲಿ ಕಾಯ್ದಿಟ್ಟು ನಂತರ ಲಿಂಗದೀಕ್ಷೆ ಪಡೆಯುವ ಮಕ್ಕಳು, ಮೊಮ್ಮಕ್ಕಳಿಗೆ ಧರಿಸುವುದು.

ಬೆಳಗಾವಿಯ ಶರಣ. ಡಿ.ಆರ್. ಪಾಟೀಲರು ದೇಹದಾನ ಮಾಡುವ ನಿರ್ಧಾರ ಹೊಂದಿದರು. ತಾವೇ ವೈಯಕ್ತಿಕವಾಗಿ ಮಾಡುವ ಬದಲು ರಾಷ್ಟ್ರೀಯ ಬಸವ ದಳದ ಮೂಲಕ ಮಾಡಲು ನಿಶ್ಚಯಿಸಿದರು. ಅಧ್ಯಕ್ಷರಾದ ಶರಣ.ಕೆ.ಬಸವರಾಜಪ್ಪ ಅವರನ್ನು ಸಂಪರ್ಕಿಸಿದರು. ಅವರಿಗೂ ಸಂತೋಷವೆನಿಸಿತು. ಅವರು ನನಗೆ ಪತ್ರ ಬರೆದರು. ನನಗೂ ಸಂತೋಷವೆನಿಸಿತು.

ದಿ. 28-6-2009ರಂದು ಗೋಕಾಕಿಗೆ ಶರಣೆ ಕಮಲಕ್ಕ, ಶರಣ ಸಿದ್ಧರಾಮ ಚೌಧರಿ ಅವರ ಸುಪುತ್ರ ಶರಣ. ಚನ್ನಬಸವ ಮತ್ತು ಶರಣೆ. ಕಲ್ಯಾಣಿ ಅವರ ವಿವಾಹಕ್ಕೆ ನಾನು ಹೋದಾಗ ಅಂದು ಸಂಜೆ ಬೆಳಗಾಂ ಜಿಲ್ಲೆಯ ವಿವಿಧ ರಾಷ್ಟ್ರೀಯ ಬಸವ ದಳದವರು ಒಂದು ಸಭೆ ಇಟ್ಟರು. ಆಗ ಅತೀವ ಅಭಿಮಾನದಿಂದ ನಾನು ಶರಣ. ಡಿ.ಆರ್ ಪಾಟೀಲರ ದೇಹದಾನ ಕುರಿತು ಹೇಳಿ ಅವರನ್ನು ಮಾಲಾರ್ಪಣೆ ಮಾಡಿ ಸನ್ಮಾನಿಸಿದೆ. ಇದರಿಂದ ಬಹಳ ಜನ ಉತ್ತೇಜಿತರಾದರು. ಅನೇಕರು ಮನಸ್ಸಿನಲ್ಲಿ ತಾವೂ ದೇಹದಾನ ಮಾಡುವ ಬಯಕೆ ಹೊಂದಿದ್ದರಂತೆ. ಅವರಿಗೆ ಹೆಚ್ಚಿನ ಉತ್ಸಾಹ ಬಂದಿತು. ಆಗ ಕೆಳಗಿನ ಶರಣರು ತಾವೂ ನಿಶ್ಚಯಿಸಿ, ಘೋಷಿಸಿ, ಆಶೀರ್ವಾದ ಪಡೆದರು.

2. ಶರಣ. ಜಿ.ಬಿ. ಕಟ್ಟೀಮನಿ, ಬೆಳಗಾವಿ
3. ಶರಣ.ಶಿವಪ್ಪ ಬೆಟಗೇರಿ, ಬೆಳಗಾವಿ
4. ಶರಣ. ಶಿವಾನಂದ ನೇಗಿನಾಳ, ಬೆಳಗಾವಿ
5. ಶರಣೆ. ಸುಮನ್ ಕೋರೆ, ಬೆಳಗಾವಿ
6. ಶರಣ. ಬಸವ ಪ್ರಭು ದೊಡ್ಡಮನಿ, ಬೆಳಗಾವಿ
7. ಶರಣೆ.ಶ್ರೀಮತಿ ದೊಡ್ಡಮನಿ
8. ಶರಣ. ಬಸವರಾಜ ಮಾರಿಹಾಳ, ಬೆಳಗಾವಿ
9. ಶರಣೆ. ವಿಜಯಲಕ್ಷ್ಮಿ ತೋಟಗಿ
10. ಶರಣ. ವಿರುಪಾಕ್ಷಪ್ಪ ತೋಟಗಿ, ಬೈ.ಹೊಂಗಲ
11. ಶರಣೆ. ಗಂಗಮ್ಮ ಅಮರಶೆಟ್ಟಿ, ಬೈ.

ಹೀಗೆ ನೇತ್ರದಾನ, ದೇಹದಾನ ಮಾಡಲು ಬಯಸುವವರು ತಾವು ಕೊಡಬಯಸುವ ಸರ್ಕಾರಿ ವೈದ್ಯಕೀಯ ಕಾಲೇಜು ಅಥವಾ ಖಾಸಗಿ ವೈದ್ಯಕೀಯ ಕಾಲೇಜಿಗೆ ಮೊದಲೇ ಅರ್ಜಿ ಸಲ್ಲಿಸಬೇಕು. ವ್ಯಕ್ತಿಗಳು ಲಿಂಗೈಕ್ಯರಾಗುತ್ತಲೇ ಅವರ ಮನೆಯವರು ಸಂಬಂಧಿಸಿದ ಸಂಸ್ಥೆಗಳಿಗೆ ಮಾಹಿತಿ ನೀಡಬೇಕು. ತಮ್ಮ ಧರ್ಮದ ಪ್ರಕಾರ ನೆರವೇರಿಸಬೇಕಾದ ಕ್ರಿಯೆಗಳನ್ನು ಪೂರೈಸಿ ದೇಹವನ್ನು ಕೊಡಬೇಕು. ನೇತ್ರದಾನದಲ್ಲಿ ಕೇವಲ ಕಣ್ಣುಗಳನ್ನು ಶರೀರದಿಂದ ಬೇರ್ಪಡಿಸಿ ಒಯ್ಯುವರು.

ಬೆಳಗಾವಿ ರಾ.ಬ.ದಳದ ಮೂಲಕ ಇವರೆಲ್ಲ ಕೆ.ಎಲ್.ಇ.ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಕೊಡುವ ಸಂಕಲ್ಪ ಮಾಡಿದ್ದಾರೆ. ಸಂಸ್ಥೆಯ ಮುಖ್ಯಸ್ಥರನ್ನು ಒಂದು ದಿನ ಆಹ್ವಾನಿಸಿ ಕಾರ್ಯಕ್ರಮವಿಟ್ಟು ಒಪ್ಪಂದ ಪತ್ರ ಬರೆದುಕೊಡಲು ನಿರ್ಧರಿಸಲಾಗಿದೆ. ಈ ದಾನಿಗಳಿಗೆಲ್ಲ ಒಂದು ದಿನ ಸತ್ಕಾರ ಮಾಡಿ ಜೊತೆಗೆ ವಿಭೂತಿ ವೀಳ್ಯ ಸಹ ಮಾಡಿಸಲು ನಿಶ್ಚಯಿಸಲಾಗಿದೆ. ದಾನಗಳಲ್ಲಿ ರಕ್ತದಾನ, ನೇತ್ರದಾನ, ದೇಹದಾನ ಪರೋಪಕಾರದ ಮಹತ್ವದ ಶ್ರೇಷ್ಠ ದಾನಗಳು. ಬೆಳಗಾವಿ ಜಿಲ್ಲೆಯ ಈ ಶರಣರ ದಾನಗಳು ಇನ್ನೂ ಅನೇಕ ಜನರಿಗೆ ಪ್ರೇರಣೆ ನೀಡಲೆಂದು ಹಾರೈಸುವೆ.

2. ಲಿಂಗಾಯತ ಸಮಾಜವು ಹಾಕಿಕೊಂಡ ವೀರಶೈವದ ನೇಣು

ಜೂನ್, 2009ರ ಕಲ್ಯಾಣ ಕಿರಣದಲ್ಲಿ ಪ್ರಕಟವಾದ ಶರಣ.ಎಂ.ಎಸ್. ಚಂದ್ರಶೇಖರಯ್ಯನವರ ಲೇಖನ "ಲಿಂಗಾಯತಕ್ಕೆ ಹಾನಿಕಾರಕ ತಿರುವು ನೀಡಿದ ಸಂಗತಿಗಳು" ಬಹಳ ಮಹತ್ವಪೂರ್ಣವಾಗಿದೆ. ಸಾಧಾರ ಪೂರ್ವಕವಾಗಿ ಬರೆದಿರುವ ಅವರು 15ನೆಯ ಶತಮಾನದಲ್ಲಿ ವೀರಶೈವ ಪದವು ಲಿಂಗಾಯತ (ಸಮಾಜದೊಳಕ್ಕೆ ಅಲ್ಲ) ಧರ್ಮದೊಳಕ್ಕೆ ಪುರಾಣ ಸಾಹಿತ್ಯದ ಮೂಲಕ ಪ್ರವೇಶಿಸಿತು. ಆದರೂ ಜನ ಜೀವನದಲ್ಲಿ ರೂಢಿಗೊಂಡಿರಲಿಲ್ಲ. 1876ನೆಯ ಕಾಲಘಟ್ಟದ ವರೆಗೂ ವೀರಶೈವವು ಪ್ರಚಲಿತವಾಗಿರಲಿಲ್ಲ. ಮತ್ತು ಎಲ್ಲರೂ ಬಸವಣ್ಣನವರನ್ನೇ ಧರ್ಮಗುರು ಎಂದು ನಂಬಿದ್ದರು. 1876ರವರೆಗೂ ವೀರಶೈವರು ಎಂದರೆ ಲಿಂಗಾಯತದ ಒಳಗೇ ಇರುವ ಒಂದು ಪಂಗಡ ಎಂದೇ ರೂಢಿಗೊಂಡಿತ್ತು. 1920ರ ನಂತರ ವೀರಶೈವದ ಪರಂಪರೆಯು ಬದಲಾವಣೆ ಹೊಂದಿ ಪಂಚಾಚಾರ್ಯ ಪರಂಪರೆಯದಾಯಿತು.

ವೀರಶೈವ ಪದದ ಬಳಕೆ ಮತ್ತು ಪ್ರಭಾವ ಇರುವುದು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳದಲ್ಲಿ. ಆಂಧ್ರದಲ್ಲಿ ಅದು ಹೆಚ್ಚು ವೈದಿಕ ಛಾಯೆಯನ್ನು ಹೊಂದಿದ್ದು ಶ್ರೀಕರ ಭಾಷ್ಯ ಮುಂತಾದ ವೈದಿಕ -ಶೈವ ಗ್ರಂಥಗಳ ಮೇಲೆ ನಿಂತಿದೆ. ತಮಿಳುನಾಡಿನಲ್ಲಿ ಶೈವ ಛಾಯೆಯನ್ನು ಹೊಂದಿದ್ದು ಮಾಣಿಕ್ಯ ವಾಚಕರ್ ರಚಿಸಿದ ತಿರುವಾಚಕಮ್ ಮುಂತಾದ ಗ್ರಂಥಗಳ ಮೇಲೆ ನಿಂತಿದೆ. ಕೇರಳ ವೀರಶೈವಕ್ಕೆ ಯಾವ ಆಧಾರ ಗ್ರಂಥವಿಲ್ಲ. ಕರ್ನಾಟಕದ ಪಂಚಾಚಾರ್ಯರು

ಲಿಂಗಾಯತವನ್ನೇ ವೀರಶೈವ ಎಂದು ಕರೆದುಕೊಂಡು ಕೃತಕ ಉಸಿರಾಟ ಮಾಡುತ್ತಿದ್ದಾರೆ. ತುಂಬಾ ಆಶ್ಚರ್ಯದ ಸಂಗತಿ ಎಂದರೆ ಕರ್ನಾಟಕದ ಪಂಚಾಚಾರ್ಯ ವರ್ಗದವರು ಸೃಷ್ಟಿಸಿರುವ ಕಾಲ್ಪನಿಕ ಆದಿ ಪಂಚಾಚಾರ್ಯರ ಬಗ್ಗೆ ಮಾತ್ರ ಆಂಧ್ರ, ತಮಿಳುನಾಡು, ಕೇರಳದ ವೀರಶೈವರಿಗೆ ಏನೇನೂ ತಿಳಿದಿಲ್ಲ.

ಚೆನ್ನೈದಲ್ಲಿ ಕನ್ನಡ ಪಾಳ್ಯಗಳು ಎಂದಿವೆ. ಸುಮಾರು 13 ಇರಬಹುದು. (ತಮಿಳು) ಕನ್ನಡ ಮಾತನಾಡುವ ಜನರಿದ್ದಾರೆ. ಪ್ರಧಾನವಾಗಿ ಲಿಂಗಾಯತರೆ. ಪ್ರತಿ ವರ್ಷ ಬಸವ ಜಯಂತಿ ಆಚರಿಸುತ್ತಾರೆ. ತಾತ್ವಿಕವಾಗಿ ಇವರಿಗೆ ತಮ್ಮ ಧರ್ಮದ ಬಗ್ಗೆ ಏನೂ ಜ್ಞಾನವಿಲ್ಲದಿದ್ದರೂ ಇಷ್ಟಲಿಂಗ ಧರಿಸುತ್ತಾರೆ. ತಮ್ಮ ಗುರು ಬಸವಣ್ಣನವರು ಎಂದು ತಿಳಿದಿದ್ದಾರೆ. ಅದೇ ಪಂಚಾಚಾರ್ಯರ ಬಗ್ಗೆ ಅವರಿಗೆ ಯಾವ ನಂಬಿಕೆಯೂ ಇಲ್ಲ. ಕರ್ನಾಟಕದ ಲಿಂಗಾಯತ ಸಮಾಜಕ್ಕೆ ಈ ವೀರಶೈವ ಮತ್ತು ಪಂಚಾಚಾರ್ಯರ ಕಲ್ಪನೆ (ಶನಿ) ಕಾಟ ತಗುಲಿಕೊಂಡು ಗೊಂದಲ ಉಂಟಾಗಿರುವುದು ದುರ್ದೈವ.

ಲಿಂಗಾಯತರು ತಮಗೆ ಸಂಬಂಧವಿಲ್ಲದ ವೀರಶೈವ ಪದವನ್ನು ತಂದು ಸೇರಿಸಿಕೊಂಡು, ಕುರೂಪಿಯ ಮುಖವಾಡ ಧರಿಸಿಕೊಂಡ ಸುರೂಪಿಯಂತೆ ವಿಕೃತಗೊಂಡಿದ್ದಾರೆ. ಆಂಧ್ರದಲ್ಲಿ ವೀರಶೈವವು ಒಂದು ಮತಾಂಧ, ಮಡಿವಂತ ವೈದಿಕ -ಶೈವ ಪಂಥವಾಗಿದ್ದರೆ, ತಮಿಳು ನಾಡಿನಲ್ಲಿ ಸಾಮಾಜಿಕ ಸಮಾನತೆ ಮುಂತಾದ ಪ್ರಗತಿಪರ ವಿಚಾರವಿಲ್ಲದ ಒಂದು ಭಕ್ತಿ ಪಂಥ. ಕೇರಳದಲ್ಲಿ ಯಾವುದೇ ಸೈದ್ಧಾಂತಿಕ ಹಿನ್ನೆಲೆ ಇಲ್ಲದ ವೈದಿಕ ಮತ್ತು ಶೈವ ಎರಡೂ ಮಾರ್ಗಗಳಿಂದ ಹೊರತಾದ ಒಂದು ಸಮುದಾಯ ವಾಚಕ ಪದ. ಹೀಗಿರುವಾಗ ಇವರು ಬಹುಪಾಲು ಮಾಂಸಾಹಾರಿಗಳು. ಏಕದೇವೋಪಾಸನೆ, ಸಾಮಾಜಿಕ-ಧಾರ್ಮಿಕ ಸಮಾನತೆ, ಸ್ತ್ರೀ ಸಮಾನತೆ, ಜಾತ್ಯತೀತತೆ - ಇತ್ಯಾದಿ ಕ್ರಾಂತಿಕಾರಿ ವಿಚಾರ ಹೊಂದಿದ ಸ್ವತಂತ್ರ ಧರ್ಮ ಲಿಂಗಾಯತವನ್ನು ವೀರಶೈವ ಪದದ ಸೋಂಕಿನಿಂದ ರೋಗಗ್ರಸ್ತಗೊಳಿಸುವುದು ಅನ್ಯಾಯವಲ್ಲವೆ? ಇದರಿಂದ ಯಾರಿಗೆ ಲಾಭ? ತಮಿಳುನಾಡಿನಲ್ಲಿರುವ ವೀರಶೈವ ಸಮುದಾಯದ ಸಂಘಟನೆಯೊಂದು ಒಂದು ನಿರ್ಣಯವನ್ನು ಹೀಗೆ ತೆಗೆದುಕೊಂಡಿದೆಯಂತೆ. "ವೀರಶೈವವು ಪ್ರತ್ಯೇಕ ಜಾತಿ, ಹಿಂದು ಸಮಾಜದ ಅವಿಭಾಜ್ಯ ಅಂಗ. ಕರ್ನಾಟಕದ ಲಿಂಗಾಯತಕ್ಕೂ ಇದಕ್ಕೂ ಸಂಬಂಧವಿಲ್ಲ." ಈ ನಿರ್ಣಯವು ಕರ್ನಾಟಕದ ಲಿಂಗಾಯತರಿಗೂ ಮಾರ್ಗದರ್ಶಿಯಾಗಿದೆ. ಲಿಂಗಾಯತದೊಡನೆ ವೀರಶೈವವನ್ನು ಸಮೀಕರಿಸಿ ಇವಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಬೇಕೆಂದು ಹೋರಾಡುವಾಗ ಇತರ ರಾಜ್ಯಗಳಲ್ಲಿರುವ ವೀರಶೈವರು ಇದು ಹಿಂದುದೊಳಗಣ ಒಂದು ಜಾತಿ ಅಥವಾ ಮತ ಎಂದು ನಿರ್ಣಯ ತೆಗೆದುಕೊಂಡರೆ ಹೇಗೆ? ನಾನು ಎಣಿಸಿದ್ದಂತೆಯೇ ತಮಿಳುನಾಡಿನ ಒಂದು ವೀರಶೈವ ಸಂಘಟನೆಯವರು ನಿರ್ಣಯ ತೆಗೆದು ಕೊಂಡಿದ್ದಾರೆ.

ಲಿಂಗಾಯತದೊಡನೆ ವೀರಶೈವವನ್ನು ಸಮೀಕರಿಸುವ ವೀರಶೈವ ಮಹಾಸಭೆಯ ನಿಲುವಿನಿಂದ ಯಾರಿಗೆ ಪ್ರಯೋಜನ? ಈ ಧರ್ಮವು ಬಸವ ಪೂರ್ವದ್ದು ಎಂದು ಸಾಧಿಸಿ, ಬಹುದೇವತೋಪಾಸನೆಯನ್ನು ಸಮರ್ಥಿಸುವ ಪಂಚಾಚಾರ್ಯ ಮಠಗಳವರ 'ಅಹಂ' ತೃಪ್ತಿ ಬಿಟ್ಟರೆ ಇನ್ನಾರಿಗೂ ಲಾಭವಿಲ್ಲ. ಆದರೆ ಇದರಿಂದ ಆಗುವ ಹಾನಿ ಮಾತ್ರ ಲೆಕ್ಕಕ್ಕೆ ಮೀರಿದ್ದು. ಒಂದು ಸ್ವತಂತ್ರ ಧರ್ಮದ ಸಾರ್ವಭೌಮನನ್ನು - ಒಂದು ಜಾತಿಯನ್ನಾಗಿ ಕುಬ್ಜಗೊಳಿಸಿ - ಅನ್ಯ ಧರ್ಮದ ಊಳಿಗ ಮಾಡಲು ಹಚ್ಚುವುದು. ವೀರಶೈವದ ಮತಾಂಧ ಸ್ವರೂಪದ ಮುಖವಾಡವನ್ನು ಲಿಂಗಾಯತಕ್ಕೆ ತೊಡಿಸಿ ಅದನ್ನು ವಿರೂಪಗೊಳಿಸುವುದು ಇಡೀ ಸಮಾಜಕ್ಕೆ ಮುಂದೆ - ಅಲ್ಪ ಸಂಖ್ಯಾತ ಧರ್ಮದ ಮಾನ್ಯತೆ ಪಡೆಯುವ ಸೌಲಭ್ಯವನ್ನು ಇಲ್ಲವಾಗಿ ಮಾಡುವುದು: ಸಮಾಜದ ಹಿತದೃಷ್ಟಿಯಿಂದ ವೀರಶೈವ ಮಹಾಸಭಾ ಬದಲಾಗಲೇಬೇಕು. ಇಲ್ಲವಾದರೆ ಲಿಂಗಾಯತ ಸಮಾಜಕ್ಕೆ ಘೋರ ಅನ್ಯಾಯವನ್ನು ಮಾಡಿದ ಪಾಪಕ್ಕೆ ಅದು ಗುರಿಯಾಗಬೇಕಾಗುತ್ತದೆ.

ವೀರಶೈವ ಲಿಂಗಾಯತ ಪ್ರಮಾಣ ಪತ್ರ

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯಿಂದ ಆದಾಯ ಪ್ರಮಾಣ ಪತ್ರ (Income Certificate) ಕೊಡುವಲ್ಲಿ ತಹಸೀಲ್ದಾರ್‌ರವರು ಒಂದು ಪ್ರಮಾದವೆಸಗುತ್ತಿದ್ದಾರೆ. ಓರ್ವ

ಲಿಂಗಾಯತನು ತಮಗೆ ಆದಾಯ ಪ್ರಮಾಣ ಪತ್ರ ಬೇಕೆಂದು ಅರ್ಜಿ ಸಲ್ಲಿಸಿದರೆ ತಹಸೀಲ್ದಾರ್ ಅವರು ಆತನಿಗೆ ವೀರಶೈವ ಲಿಂಗಾಯತ ಎಂದು ವೀರಶೈವ ಸೇರಿಸಿ ಬರೆಯುತ್ತಿದ್ದಾರೆ. ಇದು ಅಕ್ರಮ. ಲಿಂಗಾಯತ ಚಳುವಳಿ ತೀವ್ರವಾಗುತ್ತ ವೀರಶೈವದ ಕುತಂತ್ರವನ್ನು ನಾವು ಬಯಲಿಗೆ ಎಳೆಯುತ್ತಿರುವುದರಿಂದ ಎಲ್ಲ ಲಿಂಗಾಯತರನ್ನೂ ವೀರಶೈವರನ್ನಾಗಿಸುವ ಕುತಂತ್ರ ವೀರಶೈವ ಮಹಾಸಭೆಯಿಂದ ನಡೆದಿರಬೇಕೆಂದು ಊಹಿಸಬಹುದಾಗಿದೆ. ಮೊದಲು ಲಿಂಗಾಯತ ಬಣಜಿಗ ಲಿಂಗಾಯತ ಸಾದು, ಲಿಂಗಾಯತ ಹಡಪದ, ಲಿಂಗಾಯತ ಮಡಿವಾಳ, ಲಿಂಗಾಯತ ಹೆಳವ ಹೀಗೆಲ್ಲ ಹೇಳಲಾಗುತ್ತಿತ್ತು. ಲಿಂಗಾಯತ ವೀರಶೈವರೂ ಒಂದು ಗುಂಪು. ಅಂದಾಗ ಎಲ್ಲರನ್ನೂ ವೀರಶೈವ ಲಿಂಗಾಯತ ಎಂದು ಉಲ್ಲೇಖಿಸಿ ತಹಸೀಲ್ದಾರರು ಆದಾಯ ಪ್ರಮಾಣಪತ್ರ ನೀಡುವುದು ಕುತಂತ್ರವಲ್ಲವೆ? ಈ ಸುತ್ತೋಲೆ ಹೊರಡಿಸಿದವರು ಯಾರು? ಯಾವ ಸರ್ಕಾರ? ಇದನ್ನೀಗ ಪತ್ತೆ ಹಚ್ಚಬೇಕಾಗಿದೆಯಲ್ಲದೆ ಈ ಬಗ್ಗೆ ಕಾನೂನು ಕ್ರಮ ಕೈಗೊಂಡು ಎಲ್ಲ ಲಿಂಗಾಯತರನ್ನು ವೀರಶೈವ ಲಿಂಗಾಯತರನ್ನಾಗಿ ಮಾಡುವ ಕುತಂತ್ರವನ್ನು ನಿಲ್ಲಿಸಬೇಕಾಗಿದೆ. ವೀರಶೈವದ ನೇಣು ಲಿಂಗಾಯತ ಧರ್ಮವನ್ನು ಕೊಲ್ಲುವುದರೊಳಗೆ ಜನರು ಎಚ್ಚೆತ್ತುಕೊಳ್ಳಬೇಕಾಗಿದೆ.

3. 45ಕೋಟಿ ರೂಗಳ ವಜ್ರದ ಕಿರೀಟ

ಗಣಿ ಧಣಿಗಳಾದ ಬಳ್ಳಾರಿಯ ಶ್ರೀ ಜನಾರ್ಧನ ರೆಡ್ಡಿ ಸಹೋದರರು ಮತ್ತು ಪರಿವಾರದವರು ತಿರುಪತಿ ತಿಮ್ಮಪ್ಪನಿಗೆ 45 ಕೋಟಿ ರೂಗಳ ವಜ್ರದ ಕಿರೀಟವನ್ನು ಸಮರ್ಪಿಸಿದರಂತೆ. ಈ ಸುದ್ದಿಯು ಈ ಸಲ ಬಹಳ ಜನ ವಿಚಾರಶೀಲರ ಹುಬ್ಬು ಏರುವಂತೆ ಮಾಡಿದೆ. ಏನು ಈ ಜನರಲ್ಲಿ ಚಿಂತನ ಶಕ್ತಿಯೇ ಇಲ್ಲವೆ? ಇವರೆಲ್ಲ ಹೃದಯ ಹೀನರೆ? ತಿರುಪತಿ ತಿಮ್ಮಪ್ಪ ಕಾಳಸಂತೆ ಕೋರರು, ಅಕ್ರಮ ಹಣ ಸಂಪಾದಕರ ಅಧಿನಾಯಕನೆ ಎಂದು ಬಹಳ ಜನರು ಚಿಂತನೆ ಮಾಡಲು ಪ್ರೇರಣೆ ನೀಡದೆ. ಈ 45ಕೋಟಿ ಹಣವನ್ನು ವಿನಿಯೋಗಿಸಿ ಗ್ರಾಮೀಣ ಪ್ರದೇಶದಲ್ಲಿ ಗುಡಿ ಕೈಗಾರಿಕೆ ಸ್ಥಾಪಿಸಬಹುದಿತ್ತು. ಅಥವಾ ಯಾವುದಾದರೂ ಉದ್ಯಮ ಆರಂಭಿಸಿ ಜನರಿಗೆ ಉದ್ಯೋಗವನ್ನು ಸೃಷ್ಟಿಸಬಹುದಿತ್ತು. ಇಲ್ಲವೆ ಜಮೀನನ್ನು ಖರೀದಿಸಿ (ದಬಾವಣೆಯಿಂದ ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಂಡು) ಮನೆಗಳನ್ನು ಕಟ್ಟಿ ವಸತಿ ಹೀನರಿಗೆ ಹಂಚಬಹುದಿತ್ತು. ಇಂಥ ಯಾವುದೊಂದನ್ನೂ ಮಾಡದೆ 45 ಕೋಟಿ ರೂಗಳನ್ನು ಜಡಗೊಳಿಸಿ, ತಿರುಪತಿ ತಿಮ್ಮಪ್ಪನಿಗೆ ಅರ್ಪಿಸಿದ ಮೂಢಭಕ್ತಿಯ ವೈಖರಿಯ ಬಗ್ಗೆ ಏನು ಹೇಳಲು ಸಾಧ್ಯ? ಅನ್ಯಾಯ, ಪರಮ ಅನ್ಯಾಯ ಎಂದು ಮಾತ್ರ ಉದ್ಗರಿಸಲು ಸಾಧ್ಯ.

ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ದಾಂಗುಡಿ ಇಟ್ಟು ಬೆಳೆಯುತ್ತಿವೆ. ಕತ್ತಿ-ಕೋವಿಗಳ ಬಲದಿಂದ ಮಾತ್ರವಲ್ಲದೆ ಇಸ್ಲಾಂ ಏಕದೇವೋಪಾಸನೆ ಮತ್ತು ಧಾರ್ಮಿಕ ಸಹೋದರತ್ವದಿಂದ ವಿಸ್ತಾರಗೊಳ್ಳುತ್ತಿದ್ದರೆ ಕ್ರೈಸ್ತ ಧರ್ಮವು ಶಿಕ್ಷಣ, ವೈದ್ಯಕೀಯ ನೆರವು ಮತ್ತು ಮಾನವೀಯ ಸೇವೆಗಳಿಂದ ಜನರನ್ನು ಆಕರ್ಷಿಸುತ್ತಿದೆ. ಇಂಥ ಸನ್ನಿವೇಶದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಧರ್ಮವನ್ನು ಉಳಿಸಿಕೊಳ್ಳಬೇಕಾದರೆ ನಾವೂ ಸಹ ಹಣವನ್ನು ಮಾನವೀಯ ಕಾರ್ಯಗಳಿಗೆ ವಿನಿಯೋಗಿಸಬೇಕು ಎಂಬ ಪ್ರಜ್ಞೆ ಈ ಮಹಾ (ಮೂಢ) ದಾನಿಗಳಲ್ಲಿ ಉದಿಸಬಾರದಿತ್ತೆ ಎಂದು ಖೇದವೆನಿಸುತ್ತಿದೆ.

4. ಶ್ರೀ ಮುನಿಯಪ್ಪನವರಿಗೆ ಅಭಿನಂದನೆ

ಇಂದು (4-7-09) ಕೇಂದ್ರ ಸರ್ಕಾರದ ರೇಲ್ವೆ ಸಚಿವರಾದ ಕುಮಾರಿ ಮಮತಾ ಬ್ಯಾನರ್ಜಿ ಅವರಿಂದ ಆಶಾದಾಯಕ, ಸಂತೋಷದಾಯಕ ರೇಲ್ವೆ ಬಜೆಟ್ ಮಂಡನೆಯಾಗಿದೆ. ಅದರಲ್ಲಿ ಜನ ಸಾಮಾನ್ಯರಿಗೆ ಹಿತವೆನಿಸುವ ಬಹಳಷ್ಟು ಅಂಶಗಳಿವೆ. ರೇಲ್ವೆ ಪ್ರಯಾಣವು ಮುಪ್ಪಾದವರಿಗೆ, ಅಶಕ್ತರಿಗೆ, ರೋಗಿಗಳಿಗೆ ಒಂದು ವರದಾನ. ರಸ್ತೆ ಸಾರಿಗೆ ಬಹಳ ತುಟ್ಟಿಯಾದ್ದರಿಂದ ಆರ್ಥಿಕ ಅಶಕ್ತರಿಗೆ ರೇಲ್ವೆ ಪ್ರಯಾಣ ಉಳಿತಾಯಕರ.

ಕೂಡಲ ಸಂಗಮ ಮತ್ತು ಬಸವ ಕಲ್ಯಾಣಗಳಿಗೆ ರಸ್ತೆ ಮಾರ್ಗ ಬಿಟ್ಟರೆ ಬೇರೆ

(ಪುಟ 26ರಲ್ಲಿ ಮುಂದುವರಿದಿದೆ.)

ಬಸವ ವಚನಾಮೃತ

223. ಜಂಗಮ ಭಕ್ತಿ ಕಠಿಣ

ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು;
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರಕಠಿಣವಾಯಿತ್ತು.
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು;
ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು, ಇದು ಕಾರಣ
ಲಿಂಗದೇವನವರ ಬಲ್ಲನಾಗಿ ಒಲ್ಲನಯ್ಯಾ! -ಬ.ವ.ದೀ.221

ಚಳಿಗಾಲದಲ್ಲಿ ಬೆಳಗಿನ ಬಿಸಿಲು ಬಹಳ ಹಿತವಾಗಿರುತ್ತದೆ. ರಾತ್ರಿಯೆಲ್ಲ ಚಳಿಯಿಂದ ಗಡಗಡ ನಡುಗಿದವರಿಗೆ ಸೂರ್ಯನ ಹೊಂಬಿಸಿಲು ಬೀಳುತ್ತಲೇ ಅಪಾರವಾದ ಆನಂದವಾಗುತ್ತದೆ. ಖುಷಿಯಿಂದ ಬಿಸಿಲು ಕಾಯಿಸುತ್ತಾರೆ. ಹೊತ್ತೇರುತ್ತಲೇ ಬಿಸಿಲು ತೀಕ್ಷ್ಣವಾಗಿ ಮಧ್ಯಾಹ್ನದ ವೇಳೆಗೆ ವಿಪರೀತ ತೀವ್ರವಾಗುತ್ತದೆ, ಸಹಿಸಿಕೊಳ್ಳಲು ಬಹಳ ತ್ರಾಸೆನಿಸುತ್ತದೆ. ಹಾಗೆ, ದೀಕ್ಷಾವಂತನಾಗಿ ಭಕ್ತಿ ಮಾರ್ಗಕ್ಕೆ ಬಂದ ಭಕ್ತನಿಗೆ ಇಷ್ಟಲಿಂಗ ಪೂಜೆ ಬಹಳ ಹಿತವೆನಿಸುತ್ತದೆ. ಲಿಂಗಾಯತ ಧರ್ಮವು ಕೇವಲ ಆತ್ಮಮುಖಿಯಾಗಿರದೆ ಸಮಾಜ ಮುಖಿಯೂ ಆಗಿರುವುದರಿಂದ ಭಕ್ತನು ಇಷ್ಟಲಿಂಗ ಪೂಜೆಯೊಡನೆ ಜಂಗಮ ಸಂಬಂಧವನ್ನೂ ಇರಿಸಿಕೊಳ್ಳಬೇಕಾಗುತ್ತದೆ. ಶರಣರೊಡನೆ ಒಡನಾಡಬೇಕು. ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗಬೇಕಾಗುತ್ತದೆ. ಆಗ ಅವನು ಜಂಗಮಕ್ಕಾಗಿ ಸಮಯವನ್ನು ಕೊಡಬೇಕಾಗುತ್ತದೆ ಮತ್ತು ಧನವನ್ನು ಕೊಡಬೇಕಾಗುತ್ತದೆ. ಹೀಗೆ ಸಮಯ, ಧನ ಕೊಟ್ಟು ತತ್ವದ ಉಳಿವಿಗಾಗಿ ಅಭಿಮಾನವನ್ನೂ ಪ್ರದರ್ಶಿಸಬೇಕಾಗಿ ಬಂದಾಗ ಕೆಲವರ ಭಕ್ತಿಯು ಅಲ್ಲಾಡಿ ಹೋಗಿ ಬಿಡುತ್ತದೆ. ಅದನ್ನೇ ಜಂಗಮ ಭಕ್ತಿ ಕಠಿಣವಾಯಿತ್ತು ಎಂದು ಧರ್ಮಪಿತರು ಹೇಳಿರುವುದು.

'ಧರ್ಮವು ಸಮಾಜ ಮುಖಿ. ಒಬ್ಬ ವ್ಯಕ್ತಿ ಕೇವಲ ವೈಯಕ್ತಿಕವಾಗಿ ಬಾಳದೆ ಸಮಾಜದ ಒಂದು ಅಂಗವಾಗಿ ಬಾಳಬೇಕು.' ಎಂಬುದು ಧರ್ಮಗುರು ಬಸವಣ್ಣನವರ ಧ್ಯೇಯ. ಅದಕ್ಕಾಗಿಯೇ ಅವರು ಹೇಳಿರುವುದು,

ಕಾಗೆಯೊಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?
ಕೋಳಿ ಒಂದ ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ
ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ !

ಎಂದು "ಭಕ್ತನಿಗೆ ಭಕ್ತಿ ಪಕ್ಷ ಬೇಕು." ಎನ್ನುವ ಮೂಲಕ ಪ್ರಸ್ತುತ ವಿಚಾರ ಧಾರೆಯನ್ನು ಪ್ರತಿಪಾದಿಸಿದ್ದಾರೆ. ಅದಕ್ಕೆ ಪೂರಕವಾಗಿ ಆಯ್ದಕ್ಕಿ ಮಾರಯ್ಯನವರು ಹೇಳುತ್ತಾರೆ.

ತೊಟ್ಟು ಬಿಡದನ್ನಕ್ಕ ಮತ್ತಾ ಬುಡದಾಸೆ ಬೇಕು
ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯ ಶರಣರ ಸಂಗ
ನಿತ್ಯ ಜಂಗಮ ಸೇವೆ ಕೃತ್ಯವಿರಬೇಕು.
ಅಮರೇಶ್ವರ ಲಿಂಗವನರಿವುದಕ್ಕೆ.

ಒಂದು ಕಾಯಿ ಎಲ್ಲಿಯವರೆಗೆ ತೊಟ್ಟಿನ ಸಹಾಯದಿಂದ ಗಿಡಕ್ಕೆ ಅಂಟಿಕೊಂಡಿರುವುದೋ ಅಲ್ಲಿಯವರೆಗೆ ಅದು ಗಿಡದ ಬುಡ ಸುರಕ್ಷಿತವಾಗಿರಬೇಕೆಂದು ಆಸೆ ಪಡಬೇಕು. ಹಾಗೆ ಧರ್ಮದ ಸಹಾಯದಿಂದ ಎಲ್ಲಿಯವರೆಗೆ ವ್ಯಕ್ತಿ ಎಂಬ ಕಸುಗಾಯಿ ಮರ್ತ್ಯಲೋಕ ಎಂಬ ಗಿಡಕ್ಕೆ ಅಂಟಿಕೊಂಡಿರುವುದೋ ಅಲ್ಲಿಯವರೆಗೆ ಸತ್ಯ ಶರಣರ ಸಂಗ ಹೊಂದಿರಬೇಕು. ನಿತ್ಯವೂ ಜಂಗಮ ಸೇವೆ ಮಾಡಬೇಕು. ಅಂದರೆ ಮಾತ್ರ ಲಿಂಗದೇವನ ಒಲುಮೆ ಗಳಿಸಲು ಸಾಧ್ಯ.

ಈಗಾಗಲೇ ತಿಳಿಸಿರುವಂತೆ ಸತ್ಯ ಶರಣರ ಸಂಗ, ನಿತ್ಯ ಜಂಗಮ ಸೇವೆ ಮಾಡಲು ಭಕ್ತಿ

ಪಕ್ಷದ ಸದಸ್ಯನಾಗಲು ಸಮಯವನ್ನು ಕೊಡಬೇಕಾಗುತ್ತದೆ. ಶರಣರೊಡನೆ ಒಡನಾಟ ಮಾಡುವಾಗ ಅವರು ವ್ಯಕ್ತಿಯ ಆಚರಣೆಗಳಲ್ಲಿರುವ ಲೋಪದೋಷಗಳನ್ನು ಎತ್ತಿ ತೋರಿಸುತ್ತಾರೆ, ತಿದ್ದುತ್ತಾರೆ. ಸ್ವಯಂ ಪ್ರೇರಣೆಯಿಂದ ತಿದ್ದಿಕೊಳ್ಳಬಯಸುವವರು ಮಾತ್ರ ಶರಣರ ಒಡನಾಟವನ್ನು ಇಷ್ಟಪಡುತ್ತಾರೆ. ಆ ರೀತಿ ತಿದ್ದಿಕೊಳ್ಳಲು ಬಯಸದವರು ಶರಣರ ಒಡನಾಟದಿಂದ ದೂರ ಉಳಿಯಲು ಯತ್ನಿಸುತ್ತಾರೆ. ಅದಕ್ಕೇ ಜಂಗಮ ಭಕ್ತಿ ಕಠಿಣ ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು.

224. ಅರೆಯಾಗುವ ಭಕ್ತಿ

ಬರಬರ ಭಕ್ತಿ ಅರೆಯಾಯಿತ್ತು ಕಾಣಿರಣ್ಣಾ;
ಮೊದಲ ದಿನ ಹಣೆಮುಟ್ಟ, ಮರುದಿನ ಕೈಮುಟ್ಟ
ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ!
ಹಿಡಿದುದ ಬಿಡದಿದ್ದಡೆ, ಕಡೆಗೆ ಚಾಚುವ;
ಅಲ್ಲದಿದ್ದಡೆ, ನಡುನೀರಲ್ಲದ್ದುವ ನಮ್ಮ ಲಿಂಗದೇವಾ - ಬ.ವ.ದೀ.222

ಆರಂಭ ಶೂರತ್ವ ಮಾನವನಲ್ಲಿರುವ ಒಂದು ಹವ್ಯಾಸ. ದೀಕ್ಷೆಯನ್ನು ಪಡೆದಾಗ, ಪ್ರವಚನವನ್ನು ಕೇಳಿದಾಗ ಉತ್ಸಾಹ ಪರಾಕಾಷ್ಠೆ ತಲುಪುತ್ತದೆ. ಆರಂಭದಲ್ಲಿ ಬಹಳ ನಿಷ್ಠೆಯಿಂದ ಪೂಜೆಯನ್ನು ಮಾಡುತ್ತಾನೆ. ಮೊದಮೊದಲು ಭಕ್ತಿ-ನಿಷ್ಠೆಗಳಿಂದ ಇಷ್ಟಲಿಂಗಾರ್ಚನೆ ಮಾಡಿ, ಹಣೆ ಮುಟ್ಟಿ ನಮಸ್ಕರಿಸುತ್ತಾನೆ, ಬರಬರುತ್ತಾ ಕೈಮುಟ್ಟಿ ನಮಸ್ಕರಿಸುತ್ತಾನೆ; ಇನ್ನಷ್ಟು ಕಾಲ ಕಳೆದ ಮೇಲೆ ಕೈಯಲ್ಲಿ ಇಷ್ಟಲಿಂಗ ಹಿಡಿದು ತೂಕಡಿಸುತ್ತಾನೆ ಮತ್ತಷ್ಟು ಕಾಲ ಕಳೆದ ಮೇಲೆ ಪೂಜೆಯನ್ನೇ ಬಿಡುತ್ತಾನೆ. ಇದು ದುರ್ಬಲ ಮನದವನ ಲಕ್ಷಣ. ಹೀಗೆ ಮಾಡಬಾರದು. ದೀಕ್ಷೆ ಪಡೆದು ಪ್ರತಿಜ್ಞೆ ಮಾಡಿದ ನಂತರ ಬಾಳಿನ ಕಡೆಯ ಕ್ಷಣದವರೆಗೂ ಪೂಜಾ ನಿಷ್ಠೆಯನ್ನು ಬಿಡಬಾರದು.

ಭಕ್ತಿ ಅರೆಯಾಗುವ ಈ ಪ್ರಕ್ರಿಯೆ ಇಷ್ಟಲಿಂಗ ಪೂಜೆಗಿಂತಲೂ ಜಂಗಮ ಸೇವೆಗೆ ಹೆಚ್ಚು ಅನ್ವಯವಾಗುತ್ತದೆ. ಗುರು-ಜಂಗಮರನ್ನು ಕಂಡಾಗ ಮೊದ ಮೊದಲು ಕಾಲಿನ ಹೆಬ್ಬೆಟ್ಟಿಗೆ ಹಣೆ ಮುಟ್ಟಿಸಿ ನಮಸ್ಕಾರ ಮಾಡುವರು. ಸ್ವಲ್ಪ ಸಮಯದ ನಂತರ ನಿಂತು, ಬಾಗಿ, ಕೈಗಳನ್ನು ಪಾದಕ್ಕೆ ತಾಗಿಸಿ ನಮಸ್ಕಾರ ಮಾಡುವರು. ಮತ್ತಷ್ಟು ಸಮಯದ ನಂತರ ಗುರು - ಜಂಗಮರು ಬಂದರೆ ಎದ್ದು ಹೋಗಿ ಸ್ವಾಗತಿಸಿ, ನಮಸ್ಕರಿಸದೆ ಕುಳಿತಲ್ಲಿಯೇ ತೂಕಡಿಸುವರು. ಇದು ಸರಿಯಲ್ಲ; ಹಿಡಿದ ನಿಯಮ, ಶಿಷ್ಟಾಚಾರಗಳನ್ನು ಬಿಡದೆ ಕಡೆಯವರೆಗೂ ನಡೆಸಬೇಕು. ಇಲ್ಲದಿದ್ದರೆ ಲಿಂಗದೇವನು ನಡುನೀರಲ್ಲೇ ಕೈಬಿಡುವನು!

225. ವಿನಯವು ಶ್ರೇಷ್ಠಗುಣ

ಬಿದಿರಲಂದಣವಕ್ಕು, ಬಿದಿರೆ ಸತ್ತಿಗೆಯಕ್ಕು
ಬಿದಿರಲ್ಲಿ ಗುಡಿಯು ಗುಡಾರವಕ್ಕು,
ಬಿದಿರಲ್ಲಿ ಸಕಲ ಸಂಪದವೆಲ್ಲವು,
ಬಿದಿರಿಂ ಬೊ ಬಿದಿರಿಂ ಬೊ
ಬಿದಿರದವರ ಮೆಚ್ಚ ನಮ್ಮ ಲಿಂಗದೇವ. - ಬ.ವ.ದೀ.223

ಬಿದಿರು ಎನ್ನುವ ಗಿಡದಲ್ಲಿ ಒಂದು ವಿಶೇಷ ಗುಣವಿದೆ. ಅದೇ ಬಾಗುವಿಕೆ. ಗಿಡವು ಎಳೆಯದಿರುವಾಗಲೇ ಅದನ್ನು ಪಲ್ಲಕ್ಕಿಯ ದಂಡಿಗೆ ಮಾಡಲು ಬಾಗಿಸಿ, ಬೆಳೆಸುವರು. ಬಾಗಿಸಿದಾಗ ಬಿದಿರು ಮುರಿಯುವುದಿಲ್ಲ. ಹೀಗಾಗಿ ಅಂದಣ ಅಂದರೆ ಪಲ್ಲಕ್ಕಿಯನ್ನು ಮಾಡಲು, ಸತ್ತಿಗೆ ಅಂದರೆ ಛತ್ರಿಯನ್ನು ಮಾಡಲು, ಗುಡಿಯನ್ನು ಕಟ್ಟಲು, ಗುಡಾರಗಳನ್ನು - ಗುಡಿಸಲುಗಳನ್ನು, ಮನೆಗಳನ್ನು ಕಟ್ಟಲು ಬಿದಿರನ್ನು ಬಳಸಲಾಗುವುದು. ಬಿದಿರುವುದು ಅಂದರೆ ವಿನಯದಿಂದ ಬಾಗಿದರೆ ಗುರು ಹಿರಿಯರ ಪ್ರೀತಿ, ಸ್ನೇಹಿತರ ಆದರ ಎಲ್ಲ ಸಂಪತ್ತು ಲಭ್ಯವಾಗುವುದು. "ಬಿದಿರಿಂ ಬೋ" ಅಂದರೆ ವಿನಯದಿಂದ ಬಾಗಿರಿ; ವಿನಯವಿಲ್ಲದೆ ಅಹಂಭಾವದಿಂದ ವರ್ತಿಸುವವರನ್ನು ಲಿಂಗದೇವನು ಮೆಚ್ಚಿಕೊಳ್ಳನು.

ಒಂದು ಊರಿನಲ್ಲಿ ಒಬ್ಬ ಶ್ರೀಮಂತನಿದ್ದನು. ಅಷ್ಟೇ ವಿನಯಶಾಲಿಯೂ ಇದ್ದನು. ದಾರಿಯಲ್ಲಿ ವಾಯುವಿಹಾರಕ್ಕೆ ಹೋಗುವಾಗ ಸಾಮಾನ್ಯರು ಎದುರಾಗಿ ನಮಸ್ಕಾರ ಎಂದರೂ ಆತ ಪ್ರತಿವಂದಿಸುತ್ತಿದ್ದ. ಒಮ್ಮೆ ರಜಾ ಕಾಲದಲ್ಲಿ ನಗರದಲ್ಲಿ ಓದುತ್ತಿದ್ದ ಆ ಶ್ರೀಮಂತನ ಮಗ ಊರಿಗೆ ಬಂದ. ಅವನನ್ನು ಜೊತೆಗೆ ಕರೆದುಕೊಂಡು ಶ್ರೀಮಂತನು ತನ್ನ ಹೊಲ-ಗದ್ದೆ, ತೋಟ ಮುಂತಾಗಿ ತೋರಿಸಲು ಹೊರಟನು. ದಾರಿಯಲ್ಲಿ ವಂದಿಸಿದ ಪ್ರತಿಯೊಬ್ಬನಿಗೂ, ಸಾಮಾನ್ಯನಿಗೂ ಎಂದಿನಂತೆ ಪ್ರತಿ ವಂದಿಸುತ್ತ ಹೊರಟ. ಇದು ಮಗನಿಗೆ ಸಹ್ಯವಾಗಲಿಲ್ಲ. ಅಪ್ಪನ ವಿನಯದ ನಡೆ ಮಗನಿಗೆ ಬೇಸರ ತರಿಸಿತು. ಗದ್ದೆಗೆ ಹೋದಾಗ ಬತ್ತದ ಪೈರು ಬೆಳೆದು ನಿಂತಿದ್ದು ನೋಡಿದ. ಅದರಲ್ಲಿ ಕೆಲವು ತೆನೆ ತುಂಬಾ ಬಾಗಿದ್ದವು. ಮತ್ತೆ ಕೆಲವು ನೆಟ್ಟಗೆ ನಿಂತಿದ್ದವು. ಆಗ ಮಗ ಹೇಳಿದ "ಅಪ್ಪಾ, ಆ ನೆಟ್ಟಗೆ ನಿಂತ ತೆನೆ ಕಂಡರೆ ನನಗೆ ಅಭಿಮಾನ. ತುಂಬಾ ಬಾಗಿದ ತೆನೆ ಕಂಡರೆ ಇಷ್ಟವಾಗದು."ಎಂದ ಸೂಚ್ಯವಾಗಿ. ಜಾಣನಾದ ತಂದೆಗೆ ಮಗನ ಮಾತಿಗೆ ಮರ್ಮವು ಅರ್ಥವಾಯಿತು. ಅವನು ನಸುನಗುತ್ತ ಹೇಳಿದ, "ಬಾಗಿದ ತೆನೆ ಮತ್ತು ನೆಟ್ಟಗಿರುವವು ಎರಡನ್ನೂ ಪ್ರತ್ಯೇಕವಾಗಿ ತಾ" ಎಂದು. ಅದರಂತೆ ಮಗನು ತಂದ. ನೆಟ್ಟಗಿದ್ದ ತೆನೆಯನ್ನು ಬಡಿದಾಗ ಕಾಳು ಬರಲಿಲ್ಲ, ತೆನೆ ಜೊಳ್ಳಾಗಿದ್ದವು. ಬಾಗಿದ ತೆನೆಯನ್ನು ಬಡಿದಾಗ ಕಾಳು ಬಿದ್ದವು. ತಂದೆ ಹೇಳಿದ, "ಕಾಳು ತುಂಬಿದ ತೆನೆ ಹೇಗೆ ಬಾಗುವುದೋ ಹಾಗೆ ಗುಣವಂತಿಕೆ ತುಂಬಿದವನೇ ವಿನಯಶಾಲಿಯಾಗಿರುವನು." ಈ ಕಥೆ ಮೇಲ್ಕಂಡ ಧರ್ಮಪಿತರ ವಚನಕ್ಕೆ ಸೂಕ್ತ ದೃಷ್ಟಾಂತವಾಗಿದೆ.

226. ಭೋಗಾಸಕ್ತ

ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ,
ಬಂಧುಗಳು ಬಂದಾಗಳಿಲ್ಲೆನ್ನ;
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ,
ಬಂದ ಪುರಾತರಿಗೆ ಇಲ್ಲೆಂಬ,
ಸಾವಾಗ ದೇಹವ ದೇಗುಲಕ್ಕೆ ಒಯ್ಯೆಂಬ,
ದೇವರಿಗೆ ಹೆಣ ಬಿಟ್ಟಿ ಹೇಳಿತ್ತೆ, ಲಿಂಗದೇವಾ? - ಬ.ವ.ದೀ.224

ಕೆಲವರು ಬಹಳ ವೈಭವದ, ಸುಖಭೋಗದ ಜೀವನ ನಡೆಸುವರು. ಊಟ ಮಾಡುವುದರಲ್ಲಿ ತುಂಬಾ ಹಣವನ್ನು ಮತ್ತು ಸಮಯವನ್ನು ವ್ಯಯಿಸುವರು, ಜೀರ್ಣಿಸಿಕೊಳ್ಳಲಾಗದಿದ್ದರೂ ತಿಂದು, ಆರೋಗ್ಯ ಕೆಡಿಸಿಕೊಂಡು ವೈದರಿಗೆ ಹಣ ತೆರುವರು. ಅದೇ ರೀತಿ ಬಗೆಬಗೆಯ ಬಟ್ಟೆಗಳನ್ನು, ಆಭರಣಗಳನ್ನು ಖರೀದಿಸುವರು. ತಮಗೆ ಅಗತ್ಯವಿಲ್ಲದಿದ್ದರೂ ಸಂಗ್ರಹಿಸುವರು. ಬಂಧು ಬಳಗದವರು ಬಂದಾಗ ತಮ್ಮ ವೈಭವ ಪ್ರದರ್ಶನ ಮಾಡಲು ಅವರಿಗಾಗಿ ಅಗತ್ಯಕ್ಕಿಂತಲೂ ಹೆಚ್ಚು ಖರ್ಚು ಮಾಡುವರು. ಆದರೆ ಇಷ್ಟಲಿಂಗಾರ್ಚನೆ ಮಾಡಲು, ಮಾಡಿಸಲು ತಮ್ಮ ಬಳಿ ಹಣವಿಲ್ಲವಾಗಿ ಹೇಳುವರು, ತ್ಯಾಗಿಗಳಾದ ಜಂಗಮರು ಬಂದಾಗ ಅವರು ಕೈಗೊಂಡ ಕಾರ್ಯಗಳಿಗೆ ಸಲ್ಲಿಸಲು ಹಣವಿಲ್ಲವಾಗಿ ಹೇಳುವರು. ಸಹ ಧರ್ಮಿಗಳಾದ ಶರಣರು ಏನಾದರೂ ನೆರವು ಕೇಳಿದರೆ ತಮ್ಮ ಬಳಿ ಹಣಕೊಡುವ ಶಕ್ತಿ ಇಲ್ಲವಾಗಿ ಹೇಳುವರು. ಇಂಥ ಸ್ವಹಿತಾಸಕ್ತರಾದ ಶ್ರೀಮಂತರು ಸಾವು ಸಮೀಪಿಸಿದಾಗ ಗಾಬರಿಯಿಂದ ದೇಹವನ್ನು ಸಾಯುವ ಮೊದಲೇ ದೇವಾಲಯಕ್ಕೆ ಒಯ್ಯಿರಿ ಎಂದು ಬಡಬಡಿಸುವರು. ಆದರೆ ಲಿಂಗದೇವನು ಆತ್ಮನನ್ನು ಬಿಟ್ಟಿಯಾಗಿ ತನ್ನ ಬಳಿಗೆ ಬಿಟ್ಟುಕೊಳ್ಳುವನೆ? ಊರೊಳಕ್ಕೆ ಹೋಗುವಾಗ ಸಾಗಿಸುವ ವಸ್ತುಗಳಿಗೆ ಸುಂಕವನ್ನು ಕೊಟ್ಟೇ ಹೋಗಬೇಕು. ಹಾಗೆಯೇ ತನು - ಮನ - ಧನ ದಾಸೋಹ ಎಂಬ ಸುಂಕವನ್ನು ಕೊಟ್ಟರೆ ಮಾತ್ರ ಲಿಂಗದೇವನ ಅನುಗ್ರಹ ಲಭ್ಯ.

227. ಪಾಪಿಯ ಧನ ಪ್ರಾಯಶ್ಚಿತ್ತಕ್ಕೆ

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ
ನಾಯ ಹಾಲು ನಾಯಿಮರಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ!
ನಮ್ಮ ಲಿಂಗದೇವನ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥ ಕಂಡಯ್ಯಾ - ಬ.ವ.ದೀ.225

ವ್ಯಕ್ತಿಯು ಹಲವು ಮಾರ್ಗದಿಂದ ಹಣ ಗಳಿಸುವನು. ತನ್ನ ಪ್ರಾಮಾಣಿಕ ಕಾಯಕದಿಂದ ಬಂದ ಗಳಿಕೆ, ಇನ್ನೊಬ್ಬರನ್ನು ಒತ್ತಡಕ್ಕೆ ಸಿಕ್ಕಿಸಿ ಪಡೆಯುವ ಹಣ, ಇನ್ನೊಬ್ಬರನ್ನು ವಂಚಿಸಿ ಗಳಿಸುವ ಹಣ ಹೀಗೆ ಬಹುಬಗೆಯದಾಗಿರುತ್ತದೆ. ಬಹಳಷ್ಟು ಪಾಪ ಮಾರ್ಗವನ್ನು ಆಶ್ರಯಿಸಿದಾಗ ಬರುವ ಹಣವು ವಿಪುಲವಾಗಿರುತ್ತದೆ. ಅಂಥ ಸಂದರ್ಭದಲ್ಲಿ ಅವನ ಗಳಿಕೆಯು ಪ್ರಾಯಶ್ಚಿತ್ತಕ್ಕೆ ಅರ್ಥಾತ್ ಪಾಪದ ಪರಿಹಾರಕ್ಕೆ ಹೋಗುವುದೇ ಹೊರತು ಅದು ಪುಣ್ಯವನ್ನಾಗಲಿ, ದೇವರ ಕೃಪೆಯನ್ನಾಗಲಿ ಗಳಿಸಲಾರದು. ಕೆಲವರು ಭೂಗತ ಪಾತಕಿಗಳು, ಅಕ್ರಮ ಮಾರ್ಗದಿಂದ ಹಣ ಗಳಿಸಿದ ಸಿರಿವಂತರು ಹೊರಗಡೆ ಜಗತ್ತಿನಲ್ಲಿ ದಾನಿಗಳಂತೆ, ಉದಾರಿಗಳಂತೆ ತೋರಿಸಿಕೊಳ್ಳುವುದುಂಟು. ಇನ್ನು ಕೆಲವರು ತಮ್ಮ ಧಾರ್ಮಿಕ ಮಂದಿರ, ಮಸೀದಿಗಳ ನಿರ್ಮಾಣಕ್ಕೆ ವಿಪುಲವಾಗಿ ಹಣ ಕೊಡುವುದುಂಟು. ಇದು ಜನಗಳನ್ನು ಮೆಚ್ಚಿಸಬಹುದೇ ವಿನಾ ದೇವರನ್ನಲ್ಲ. ಏಕೆಂದರೆ ದೇವರ ದೃಷ್ಟಿಯಿಂದ ಉದ್ದೇಶ, ಗುರಿಯಷ್ಟೇ ಚೆನ್ನಾಗಿದ್ದರೆ ಸಾಲದು; ಆ ಗುರಿಯ ಸಾಧನೆಗೆ ಬಳಸುವ ಮಾರ್ಗವೂ ಅಷ್ಟೆ ಸತ್ಯ ಶುದ್ಧವಾಗಿ ಇರಬೇಕು.

ಇನ್ನು "ಸತ್ಪಾತ್ರಕ್ಕೆ ಸಲ್ಲುವುದು" ಅಷ್ಟೆ ಮುಖ್ಯ. ಸತ್ಪಾತ್ರವೆಂದರೆ ಏನು? ಅನ್ನದಾಸೋಹ, ವಿದ್ಯಾ ದಾಸೋಹ, ಜ್ಞಾನ ದಾಸೋಹ, ಪ್ರಾಣ ದಾಸೋಹ ಮುಂತಾಗಿ ಹೇಳಬಹುದು. ಮನುಷ್ಯನಿಗೆ ಜೀವನದ ಅತೀವ ಅವಶ್ಯಕ ವಸ್ತುವು ಅನ್ನ. ಅನ್ನ ದಾಸೋಹಕ್ಕೆ ಸಲ್ಲಿಸುವುದು, ಅನ್ನವನ್ನು ಭಿಕ್ಷೆಯಾಗಿ ಅಥವಾ ಹಸಿದವರಿಗೆ ನೀಡುವುದು ಅತ್ಯಂತ ಪುಣ್ಯದ ಕೆಲಸ. ವಿದ್ಯಾರ್ಜನೆ ಮಾಡುವವರಿಗೆ ಧನ ಸಹಾಯ ಮಾಡುವುದು ಇನ್ನೂ ಪುಣ್ಯದ ಕೆಲಸ. ಅನ್ನವನ್ನಿಕ್ಕಿದರೆ ಅದು ಒಂದು ಹೊತ್ತಿನ ತೃಪ್ತಿ ನೀಡಿದರೆ ವಿದ್ಯಾರ್ಜನೆಗೆ ನೆರವು ನೀಡುವುದು ಶಾಶ್ವತವಾಗಿ ತೃಪ್ತಿ ನೀಡುವುದು. ಇದಕ್ಕಿಂತ ಮಿಗಿಲು ಜ್ಞಾನ ಪ್ರಸಾರಕ್ಕೆ ನೀಡುವುದು. ವಿದ್ಯೆಯು ಉಪಜೀವನದ ಗಳಿಕೆಗೆ ನೆರವಾದರೆ ಜ್ಞಾನವು ಬದುಕಿನ ಪರಿಪೂರ್ಣತೆಗೆ ನೆರವಾಗುವುದು. ಧಾರ್ಮಿಕ ಪುಸ್ತಕ ಪ್ರಕಟಣೆಗೆ ನೆರವು ನೀಡುವುದು, ಧಾರ್ಮಿಕ ಪುಸ್ತಕಗಳನ್ನು ಕೊಂಡು ಹಂಚುವುದು ಜ್ಞಾನದಾಸೋಹವಾಗುವುದು. ರಕ್ತದಾನ, ನೇತ್ರದಾನ ಚಿಕಿತ್ಸೆಗಾಗಿ ನೆರವು ನೀಡುವುದು ಪ್ರಾಣದಾನದ ವರ್ಗಕ್ಕೆ ಸೇರುತ್ತದೆ. ಇವಕ್ಕೆಲ್ಲ ನೆರವು ನೀಡುವುದು ಸತ್ಪಾತ್ರಕ್ಕೆ ಸಲ್ಲಿದಂತೆ.

ನಾಯಿಯ ಹಾಲು ನಾಯಿ ಮರಿಗಲ್ಲದೆ ಮನುಷ್ಯರು ಕುಡಿಯಲೂ ಸಲ್ಲದು, ದೇವರ ಪೂಜೆಯಲ್ಲಿ ಬಳಸಲೂ ಉಪಯೋಗವಾಗುವುದಿಲ್ಲ. ಅದೇ ರೀತಿ ಕೆಲವರ ಗಳಿಕೆ ತಮ್ಮ ಮಕ್ಕಳು ಮರಿಗಳಿಗಲ್ಲದೆ ಸಮಾಜದ ಇತರರಿಗೆ ಉಪಯೋಗವಾಗದು. "ಲಿಂಗದೇವನ ಶರಣರಿಗಲ್ಲದ ಅರ್ಥವದು ವ್ಯರ್ಥ ಕಂಡಯ್ಯ." ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು. ಶರಣರು ಪವಿತ್ರಾತ್ಮರು; ಅವರಿಗೆ ಕೊಟ್ಟುದನ್ನು ಅವರು ಸಾರ್ಥಕವಾಗಿ ಬಳಸುತ್ತಾರೆ, ಅಪವ್ಯಯ ಮಾಡುವುದಿಲ್ಲ. ಜಪಾನಿನ ಒಬ್ಬ ರಾಜ, ಬೌದ್ಧ ಧರ್ಮಾನುಯಾಯಿ ಆಗಿದ್ದ. ಬುದ್ಧ ವಿಹಾರಕ್ಕೆ ಭಿಕ್ಕುಗಳಿಗ ಬೆಲೆ ಬಾಳುವ ವಸ್ತ್ರಗಳನ್ನು ಕೊಡುತ್ತಿದ್ದ. ಅವನ ಪ್ರಧಾನಿಗೆ ಇದು ಸರಿ ಬರಲಿಲ್ಲ. "ಅವರಿಗೇಕೆ ಅಂಥ ಬೆಲೆ ಬಾಳುವ ವಸ್ತುಗಳನ್ನು ಕೊಡಬೇಕು." ಎಂದು ಕೇಳಿದ. "ಆ ವಸ್ತುಗಳು ಸಾರ್ಥಕವಾಗುತ್ತವೆ. ಹೋಗಿ ನೋಡಿ ಬಾ." ಎಂದ ರಾಜ. ಭಿಕ್ಕುಗಳು ಬೆಲೆಬಾಳುವ ವಸ್ತ್ರಗಳನ್ನು ಪೂಜಾ ಪೀಠದ ಮೇಲೆ ಹರಡಿದ್ದರು. ಸ್ವಲ್ಪ ಹಳೆಯದಾದುದನ್ನು ಬಾಗಿಲಿಗೆ ಪರದೆ ಮಾಡಿದ್ದರು. ಇನ್ನೂ ಹಳೆಯದಾದುದನ್ನು ಹಾಸಿಗೆ ಮೇಲೆ ಹಾಸಿದ್ದರು. ಮತ್ತಷ್ಟು ಹಳೆಯದನ್ನು ಕಾಲು ಒರೆಸಲು ಬಳಸುತ್ತಿದ್ದರು. ಹರಿದು ಚಿಂದಿಯಾದುದನ್ನು ನೆಲ ಒರೆಸಲು, ಮಸಿ ಬಟ್ಟೆಯಾಗಿ ಬಳಸುತ್ತಿದ್ದರು. ಆಗ ಪ್ರಧಾನಿಗೆ ಮನವರಿಕೆಯಾಯಿತು. ನಾವಾದರೂ ಅಷ್ಟೆ ಒಂದು ಸಣ್ಣ ಕಾಗದದ ತುಂಡು ಸಹ ವ್ಯರ್ಥವಾಗದಂತೆ ಜೋಪಾನವಾಗಿ ಬಳಸುತ್ತೇವೆ. ಏಕೆಂದರೆ ಜಂಗಮನ ಬಳಿ ಇರುವುದು ಸಮಾಜ ಸಂಪತ್ತು. ಅದರ ಹಿಂದೆ ಎಷ್ಟೋ ಜನರ ದುಡಿಮೆ ಇರುತ್ತದೆ. ಅದನ್ನು ಸಾರ್ಥಕವಾಗುವಂತೆ ಬಳಸಬೇಕು ಎಂಬ ಅರಿವು ಜಂಗಮನಿಗಿರಬೇಕು.

ಇತ್ತೀಚೆಗೆ ಬಳ್ಳಾರಿಯ ಗಣಿ ಧಣಿಗಳು 45 ಕೋಟಿ ರೂಗಳ ವ್ರಜದ ಕಿರೀಟವನ್ನು ತಿರುಪತಿ ತಿಮ್ಮಪ್ಪನಿಗೆ ಸಮರ್ಪಿಸಿ ಬಂದರು. ಇದು ಸಾರ್ಥಕ ದಾನವೆ ? ಸತ್ಪಾತ್ರಕ್ಕೆ ಸಲ್ಲಿತೆ? ಇಲ್ಲ. ಇಂಥ

ಹರಕೆಗಳನ್ನು ಮಾಡಿಕೊಂಡು ಹಣವನ್ನು ಜಡಗಟ್ಟಿಸುವುದು ನಿರರ್ಥಕ. ಇದು ತಿರುಪತಿ ತಿಮ್ಮಪ್ಪನ ಏಳನೆಯ ಅಂಥ ಕಿರೀಟವಂತೆ! ಇವೆಲ್ಲ ಟ್ರೆಷರಿಯಲ್ಲಿ ಬಲವಾದ ಕಾವಲಿನಲ್ಲಿ ಸದಾ ಇರುತ್ತವೆ. ಇದೇ ಹಣವನ್ನು ವಿದ್ಯಾಭಿವೃದ್ಧಿ ನಿಧಿಯಾಗಿ ಮಾಡಬಹುದಿತ್ತು. ಬಡವರಿಗೆ ಸೈಟು, ಮನೆ ಕೊಡಲು ಬಳಸಬಹುದಿತ್ತು. ಅಪಾರ ಹಣವು ಅಪವ್ಯಯವಾಗಿ ಸತ್ಪಾತ್ರಕ್ಕೆ ಅಂದರೆ ಜಂಗಮಕ್ಕೆ ಸಲ್ಲದಂತೆ ಆಯಿತು. ಅಂಥದನ್ನು ವ್ಯರ್ಥದಾನ ಎಂದು ಧರ್ಮಪಿತ ಬಸವಣ್ಣನವರು ಕರೆಯುತ್ತಾರೆ.

228. ವ್ಯರ್ಥ ಮತ್ತು ಅಪಾಯಕಾರಿ ದಾನ

ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ
ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ.
ಶಿವಭಕ್ತಿಮತಿಕ್ರಮ್ಯ ಯದಾನಂ ಚ ವಿಧಿಯತೇ ।
ನಿಷ್ಫಲ ತು ಭವೇದ್ದಾನಂ ರೌರವ ನರಕಂ ವ್ರಜೇತ್ ॥
ಇಂತೆಂದುದಾಗಿ, ಲಿಂಗದೇವನ ಶರಣರನರಿಯದೆ
ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ

- ಬ.ವ.ದೀ.226

ದಕ್ಷಿಣ ಭಾರತವನ್ನು ಆಳುತ್ತಿದ್ದ ಒಬ್ಬ ಶೂರ, ಪ್ರಜಾಪ್ರೇಮಿ ದ್ರಾವಿಡ ರಾಜ ಬಲಿ ಚಕ್ರವರ್ತಿ ಸುಂದರ ಮತ್ತ ಸಮೃದ್ಧ ರಾಜ್ಯವನ್ನು ನಿರ್ಮಾಣ ಮಾಡಿದ್ದ. ಆರ್ಯ -ದ್ರಾವಿಡ ಸಂಘರ್ಷ ತೀವ್ರವಾಗಿದ್ದ ಸಮಯವದು. ಈ ದ್ರಾವಿಡ ರಾಜನ ವೈಭವ ನೋಡಲಾರದೆ ಆರ್ಯರು ವಾಮನ ಎಂಬ ಓರ್ವ ಬ್ರಾಹ್ಮಣನನ್ನು ಕುತಂತ್ರ ಬುದ್ಧಿಯಿಂದ ದಾನ ಬೇಡಲು ಕಳಿಸಿದರು. ಬಲಿ ಚಕ್ರವರ್ತಿ "ಯಾರು ಏನು ಕೇಳಿದರೂ ಇಲ್ಲವೆನ್ನದೆ ಕೊಡುತ್ತೇನೆ" ಎಂದು ಪ್ರತಿಜ್ಞೆಗೈದಿದ್ದ. ಈ ಭಾವಾತಿರೇಕದ ಪ್ರತಿಜ್ಞೆಯನ್ನು ದುರುಪಯೋಗ ಮಾಡಿಕೊಂಡು ವಾಮನನು 3 ಪಾದ ಭೂಮಿಯನ್ನು ಕೇಳಿ, ಬಲಿ ಚಕ್ರವರ್ತಿಯ ತಲೆಯ ಮೇಲೆ ಕಾಲಿಟ್ಟು ಪಾತಾಳಕ್ಕೆ ತುಳಿದನಂತೆ. ವರ್ಷಕ್ಕೊಮ್ಮೆ ಭೂಮಿಗೆ ಬಂದು ತನ್ನ ಪ್ರಜೆಗಳನ್ನು ನೋಡಿ ಹೋಗಲು ಕೇಳಿಕೊಂಡನಂತೆ. ಕಾರ್ತೀಕ ಪಾಡ್ಯವನ್ನು ಬಲಿ ಪಾಡ್ಯಮಿ ಎಂದು ಕರೆಯಲಾಗುವುದು. ಅಂದು ಬಲಿ ಚಕ್ರವರ್ತಿ ಭೂಮಿಗೆ ಬರುತ್ತಾನೆ ಎಂದು ಮನೆಯ ಮುಂದೆ ದೀಪ ಹಚ್ಚಿ ಸ್ವಾಗತಿಸಲಾಗುವುದಂತೆ.ಬಲಿ ಚಕ್ರವರ್ತಿಯ ರಾಜಧಾನಿ ಮಹಾ ಬಲಿಪುರಂ ಚೆನ್ನೈಗೆ ಹತ್ತಿರದಲ್ಲಿದೆ. ಕೇರಳದಲ್ಲಂತೂ ಓಣಂ ಎಂಬ ಹಬ್ಬವನ್ನು ಮಹಾಬಲಿ ಚಕ್ರವರ್ತಿಯ ಹೆಸರಿನಲ್ಲಿ ಸಂಭ್ರಮದಿಂದ ಆಚರಿಸಲಾಗುವುದಲ್ಲದೆ, ಆಗ ಬಲಿಯು ಪ್ರಜೆಗಳ ಸಂದರ್ಶನಕ್ಕೆ ಬರುತ್ತಾನೆ ಎಂದು ನಂಬಲಾಗಿದೆ. ಒಬ್ಬ ಜನಪ್ರಿಯ ಚಕ್ರವರ್ತಿ ಭಾವಾತಿರೇಕದ ಪ್ರತಿಜ್ಞೆ ಮಾಡಿ ಕುತಂತ್ರಿಗಳ ಬಲೆಗೆ ಸಿಕ್ಕ. ಹೀಗಾಗಿ ಅವನ ದಾನವು ಅವನ ವಿನಾಶಕ್ಕೆ ಕಾರಣವಾಯಿತು.

ಕರ್ಣನು ಹುಟ್ಟುತ್ತಲೇ ವಿಶೇಷ ಕವಚ ಹೊಂದಿ ಅಜೇಯನಾಗಿದ್ದ. ಅವನನ್ನು ಕೊಲ್ಲಲು ಪಾಂಡವರನ್ನು ಗೆಲ್ಲಿಸಲು ಸಂಚು ಮಾಡಿ ಕೃಷ್ಣನು ಬ್ರಾಹ್ಮಣ ವೇಷದಿಂದ ಕರ್ಣನ ಬಳಿಗೆ ಬಂದು ಕವಚವನ್ನು ದಾನವಾಗಿ ಬೇಡಿದ. ಕರ್ಣನಾದರೂ ಅಷ್ಟೆ ದಾನಶೂರ ಎನ್ನಿಸಿಕೊಳ್ಳಲೋಸುಗ ಕೇಳಿದ್ದನ್ನೆಲ್ಲ ಕೊಡುವ ಪ್ರತಿಜ್ಞೆ ಮಾಡಿದ್ದರಿಂದ ಬ್ರಾಹ್ಮಣನಿಗೆ ಕವಚವನ್ನು ಕೊಟ್ಟು ದುರ್ಬಲನಾದ. ಕರ್ಣನನ್ನು ಕೃಷ್ಣ ಮತ್ತು ಅರ್ಜುನರು ಮೋಸ ಮತ್ತು ತಂತ್ರಗಾರಿಕೆಯಿಂದ ಕೊಂದರು. ಹೀಗೆ ಕರ್ಣನ ಕವಚ ದಾನವು ಅವನ ವಿನಾಶಕ್ಕೆ ಕಾರಣವಾಯಿತು.

ಖಚರನ ಅಸ್ಥಿ ಎಂಬುದಕ್ಕೆ ವಿವರಣೆ ಸಿಗುತ್ತಿಲ್ಲ. ಈ ಸದ್ಯ ಬಸವ ವಚನ ದೀಪ್ತಿಯಲ್ಲಿ ಒಂದು ವಿವರಣೆ ಇದೆಯಾದರೂ ಅದು ದಾನ ಮತ್ತು ಅದರಿಂದಾಗುವ ವಿನಾಶಕ್ಕೆ ಸಂಬಂಧಿಸಿಲ್ಲವಾದ್ದರಿಂದ ಅದನ್ನು ಇಲ್ಲಿ ಉಲ್ಲೇಖಿಸಿಲ್ಲ.

ಶಿಬಿಯ ಮಾಂಸ: ಶಿಬಿ ಚಕ್ರವರ್ತಿ ರತ್ನಪುರದ ರಾಜ. ಅವನು ಮಾಡುತ್ತಿದ್ದ ಯಜ್ಞಗಳಿಂದ ತನ್ನ ಇಂದ್ರ ಪದವಿಗೆ ಭಂಗಬರುವುದೆಂದು ಅಂಜಿದ ಇಂದ್ರನು ಹರಿ ಮತ್ತು ಬ್ರಹ್ಮರನ್ನು ಕೂಡಿಕೊಂಡು ಒಂದು ತಂತ್ರವನ್ನು ಹೂಡಿದನು. ವಿಷ್ಣು ಬೇಡನಾದ ಬ್ರಹ್ಮ ಪಾರಿವಾಳವಾದ, ಇಂದ್ರ ಗಿಡುಗನಾದ.

ಬೇಡ ಮತ್ತು ಗಿಡುಗ ಪಾರಿವಾಳವನ್ನು ಬೆನ್ನಟ್ಟಿದಾಗ ಅದು ಹೋಗಿ ಜೀವ ರಕ್ಷಣೆಗಾಗಿ ಶಿಬಿಯ ಮೊರೆಹೊಕ್ಕಾಗ ಆತ ಅಭಯ ನೀಡಿದ. ಬೇಡನು ತನ್ನ ಆಹಾರವಾದ ಪಾರಿವಾಳವನ್ನು ಕೊಡು ಎಂದಾಗ ಮೊರೆಹೊಕ್ಕವರನ್ನು ರಕ್ಷಿಸುವುದು ರಾಜಧರ್ಮ ಎಂದನು ಶಿಬಿ. ಹಾಗಿದ್ದರೆ ಅದರ ತೂಕದಷ್ಟು ಮಾಂಸವನ್ನು ದೇಹದಿಂದ ಕೊಡು ಎಂದು ಬೇಡ ಮತ್ತು ಗಿಡುಗ ಕೇಳಿದಾಗ ತನ್ನ ತೊಡೆಯಿಂದ ಮಾಂಸವನ್ನು ಕೊಡಲೊಪ್ಪಿದ. ಆದರೆ ಪಾರಿವಾಳದ ತೂಕ ಹೆಚ್ಚಾದಂತೆ ದೇಹದ ಮಾಂಸವನ್ನೆಲ್ಲ ಕೊಡಬೇಕಾಗಿ ಬಂದು ಶಿಬಿ ಪ್ರಾಣವನ್ನು ತೊರೆದ.

ಹೀಗೆ ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ ಶಿಬಿಯ ಮಾಂಸ ಕೊಡಲ್ಪಟ್ಟು ಅವರು ಪ್ರಾಣ ತೆರಬೇಕಾಯಿತು. ಅವರ ರಾಜ್ಯಗಳು ಅನಾಥವಾದವು. ಇಂಥ ದಾನ ಏತಕ್ಕಾಗಿ? ದಾನಶೂರರು ಎಂಬ ಕೀರ್ತಿವಾರ್ತೆಯನ್ನು ಪಡೆಯುವುದಕ್ಕಾಗಿ. ಆದ್ದರಿಂದ ದಾನ ಕೇಳಲು, ಪಡೆಯಲು ಬಂದವರು ಯಾರು ? ದಾನ ಕೇಳುವ ಉದ್ದೇಶವೇನು? ದಾನ ಕೊಟ್ಟರೆ ಸತ್ಪಾತ್ರಕ್ಕೆ ಸಲ್ಲುವುದೆ? ದಾನದ ಪರಿಣಾಮ ಏನಾಗುವುದು ಎಂಬ ವಿವೇಚನೆಯಿಲ್ಲದೆ ಬರಿದು ಪಡೆದುಕೊಳ್ಳಲು ಮಾಡುವ ದಾನ ಧನದ ಅಪವ್ಯಯ; ಕೆಲವೊಮ್ಮೆ ಮೇಲಿನ ಪ್ರಸಂಗಗಳಲ್ಲಿ ಆದಂತೆ ಅಪಾಯಕಾರಿ.

229. ಅಹಂಭಾವ ಬೇಡ

ಹತ್ತು ಮತ್ತರ ಭೂಮಿ, ಬತ್ತುವ ಹಯನು, ನಂದಾದೀವಿಗೆಯ
ನಡೆಸಿಹೆವೆಂಬವರ ಮುಖವ ನೋಡಲಾಗದು,
ಅವರ ನುಡಿಯ ಕೇಳಲಾಗದು.
ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ ಪ್ರಾಣಿಗಳಿಗೆ
ಭವಿತವ್ಯವ ಕೊಟ್ಟವರಾರೊ?
ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ
ಎನ್ನಿಂದಲೇ ಆಯಿತ್ತು ಎನ್ನಿಂದಲೇ ಹೋಯಿತ್ತು ಎಂಬುವನ
ಬಾಯಲ್ಲಿ ಮೆಟ್ಟ ಹುಡಿಯ ಹೊಯ್ಯದೆ ಮಾಣ್ಬನೆ ಲಿಂಗದೇವಾ -227

ಮತ್ತರ ಎಂದರೆ ನೂರು ಮಾರಿನ ಅಳತೆ. ಹಿಂದಿನ ಕಾಲದಲ್ಲಿ ದೇವಾಲಯಗಳಿಗೆ, ಮಠಮಾನ್ಯಗಳಿಗೆ, ಗುರುಗಳಿಗೆ ಭೂಮಿಯನ್ನು ದಾನ ಕೊಡುವ ಪದ್ಧತಿ ಇತ್ತು. ಅದರಲ್ಲಿ ಬಂದ ಫಸಲನ್ನು ಮಠಗಳು, ದೇವಾಲಯಗಳು ಬಳಸಿಕೊಳ್ಳುತ್ತಿದ್ದವು. ಹತ್ತು ಮತ್ತರ ಭೂಮಿಯನ್ನು ಕೊಟ್ಟು, ಹಸು ಮುಂತಾದ ಹಯನು ನೀಡುವ ಪ್ರಾಣಿಯನ್ನು ಕೊಟ್ಟ ದಾನಿಗಳು ಶಾಸನಗಳನ್ನು, ತಾಮ್ರಪಟಗಳನ್ನು ಬರೆಸಿಕೊಳ್ಳುತ್ತಿದ್ದರು. ಗರ್ಭಗುಡಿಯೊಳಗೆ ದೀಪಗಳನ್ನು ಉರಿಸುವಾಗ ಅದು ಒಟ್ಟು ಆರದಂತೆ ಎಣ್ಣೆ ಹಾಕಲು ಜಮೀನನ್ನು ಹಣವನ್ನು ಕೊಡುತ್ತಿದ್ದರು. ನಂದಾದೀಪವನ್ನು ಉರಿಸುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದರು. ಹೊಗಳಿಕೊಳ್ಳುವಾಗ ದೇವರಿಗೆ ಭೂಮಿಯನ್ನು ದಾನ ಮಾಡಿದೆವು. ದೇವರಿಗೆ ಹಾಲು ಕೊಡುವ ಹಸು ಕೊಟ್ಟೆವು, ದೇವರಿಗೆ ನಂಧಾದೀಪವನ್ನು ಹಚ್ಚಿಸಿದ್ದೇವೆ ಎಂದು ಹೇಳಿಕೊಳ್ಳುವ ಜನರ ಮುಖ ನೋಡಬಾರದು, ಅವರ ಮಾತುಗಳನ್ನು ಕೇಳಬಾರದು. ಸೃಷ್ಟಿಯಲ್ಲಿ ಅಂಡಜ, ಸ್ವೇದಜ, ಉದ್ಭಿಜ, ಜರಾಯುಜ ಎಂಬ 4 ವಿಧದ ಜೀವಿಗಳುಂಟು.

ಅಂಡಜ : ಮೊಟ್ಟೆಯೊಡೆದು ಹುಟ್ಟುವ ಹಕ್ಕಿ, ಹಾವು, ಹಲ್ಲಿ ಮೀನು ಮುಂತಾದ ಪ್ರಾಣಿಗಳು
ಸ್ವೇದಜ : ಬೆವರಿನಲ್ಲಿ ಹುಟ್ಟುವ ಹೇನು, ಕೂರೆ, ಉಣ್ಣೆ ಮುಂತಾದವು
ಉದ್ಭಿಜ : ಭೂಮಿಯನ್ನು ಸೀಳಿಕೊಂಡು ಮೊಳೆತು ಬರುವಂತಹ ಗಿಡ-ಬಳ್ಳಿ-ಮರ
ಜರಾಯುಜ : ಭ್ರೂಣವನ್ನು ಆವರಿಸಿರುವ ಪೊರೆ, ಮಾಸು. ಜರಾಯುಜ ಎಂದರೆ ಗರ್ಭಕೋಶದಿಂದ ಹೊರ ಬರುವ ಪ್ರಾಣಿಗಳು. ಇವೆಲ್ಲವುಗಳ ಭವಿಷ್ಯ ಬರೆದು ಸಲಹುತ್ತಿರುವವರು ಯಾರು? ದೇವರಿಗೆ ನಾನು ಕೊಟ್ಟೆ ಎಂಬ ಮಾತೇ ಹಾಸ್ಯಾಸ್ಪದ. ಇದು ಒಡೆಯನಿಗೆ ಉಂಡಲಿಗೆ ಕೊಟ್ಟೆ ಎಂಬಂತಿದೆ. ಓರ್ವ ಯಜಮಾನನ ಬಳಿ ಇರುವ ಸೇವಕ ಅವನು ಕೊಡಿಸಿದ ಹಿಟ್ಟು, ಉಪ್ಪು, ಕಾರ, ಬೇಳೆ ಎಲ್ಲ ಉಪಯೋಗಿಸಿ, ಮಾಡಿದುದಕ್ಕೆ ಕೂಲಿಯನ್ನೂ ಪಡೆದು ಕಡುಬನ್ನು

ಮಾಡಿ ಉಣಬಡಿಸುತ್ತಾನೆ. ಆದರೆ ಹೆಮ್ಮೆಯಿಂದ "ನಾನು ಕಡುಬನ್ನು ಮಾಡಿದೆ, ಒಡೆಯನಿಗೆ ನೀಡಿದೆ." ಎಂದು ಹೇಳಿಕೊಳ್ಳುವುದು ಎಷ್ಟು ಹಾಸ್ಯಾಸ್ಪದ. ಹಾಗೆ ಲಿಂಗದೇವನು ಕೊಟ್ಟ ಭೂಮಿ, ಮಾನವ ಜನ್ಮ, ಸಂಪತ್ತು, ಅವನು ಕೊಟ್ಟುದನ್ನು ಅವನಿಗೆ ಕೊಡಬೇಕಾದುದು ಕರ್ತವ್ಯ. ಅದಕ್ಕಾಗಿ ನನ್ನಿಂದ ಆಯಿತು, ನಾನು ಕೊಟ್ಟೆ ಎಂದು ಹೇಳಿಕೊಳ್ಳುವ ಹಮ್ಮೇಕೆ? ಅಂಥ ಹಮ್ಮಿನ ದಾನಿಯನ್ನು ಲಿಂಗದೇವನು ಅನುಗ್ರಹಿಸದೆ ಉದಾಸೀನ ತೋರುವನು.

230. ಪ್ರಚಾರ ಪ್ರಿಯ ದಾನಿ

ಅನವರತ ಮಾಡಿಹೆನೆಂದು ಉಪ್ಪರ ಗುಡಿಯ ಕಟ್ಟ ಮಾಡುವ
ಭಕ್ತನ ಮನೆಯದು ಅಂದಣಗಿತ್ತಿಯ ಮನೆ !
ಸರ್ವ ಜೀವ ದಯಾಪಾರಿಯೆಂದು ಭೂತದಯಕ್ಕಿಕ್ಕುವವನ ಮನೆ
ಸಯಿದಾನದ ಕೇಡು !
ಸೂಳೆಯ ಮಗ ಮಾಳವ ಮಾಡಿದಡೆ ತಾಯ ಹೆಸರಾಯಿತಲ್ಲದೆ
ತಂದೆಯ ಹೆಸರಿಲ್ಲ ಲಿಂಗದೇವ! - ಬ.ವ.ದೀ.228

ನಾನು ಸದಾಕಾಲ ಅನ್ನ ದಾಸೋಹ, ಧನ ದಾಸೋಹ ಮಾಡುವೆನೆಂದು, ಯಾರು ಬೇಕಾದರೂ ಬಂದು ಸಹಾಯ ಕೇಳಬಹುದು ಎಂದು ಘೋಷಿಸಿ ಉಪ್ಪರ ಗುಡಿ - ಅಂದರೆ ಎತ್ತರದ ಸ್ಥಳದಲ್ಲಿ ಧ್ವಜವನ್ನು ಹಾರಿಸಿ ಮಾಡುವ ಭಕ್ತನ ಮನೆಯು, ಪುರುಷರನ್ನು ಆಕರ್ಷಿಸಲು ಒಯ್ಯಾರ ಮಾಡುವ ಅಂದಣಗಿತ್ತಿಯ ಮನೆಯಂತೆ. ಸರ್ವಜೀವ ದಯಾಪಾರಿ ಎಂದು ಕಾಗೆ, ನಾಯಿ, ಇರುವೆ ಇತ್ಯಾದಿ ಪ್ರಾಣಿಗಳಿಗೆ ಆಹಾರ ಹಾಕುವವನ ಮನೆ ದವಸಧಾನ್ಯಗಳ ಕೇಡು. ಅನೇಕರು ಕಾಗೆಗಳಿಗೆ ಅನ್ನವನ್ನು ಚೆಲ್ಲುವುದು, ಬೀದಿ ನಾಯಿಗಳಿಗೆ ಊಟ ಹಾಕುವುದು. ಇರುವೆ ಗೂಡಿಗೆ ರವೆ, ಸಕ್ಕರೆ ಹಾಕುವುದು ಮುಂತಾಗಿ ಮಾಡುತ್ತಾರೆ. ಇದು ತಪ್ಪೆಂದು ಗುರು ಬಸವಣ್ಣನವರು ಟೀಕಿಸುತ್ತಾರೆ. (ನಾವು ಸಣ್ಣವರಿದ್ದಾಗ ನಮ್ಮ ಅಜ್ಜ ಈ ರೀತಿ ಹಾಕಿಸುತ್ತಿದ್ದರು. ಇರುವೆ ಗೂಡು ಹುಡುಕಿ ರವೆ, ಸಕ್ಕರೆ ಹಾಕಿ ಬರುತ್ತಿದ್ದೆವು. ಇಂಥ ಅವ್ಯಾವಹಾರಿಕ ದಯಾಬುದ್ಧಿಯಿಂದ ಬೀದಿ ನಾಯಿಗಳ ಉಪಟಳ ಜಾಸ್ತಿಯಾಗಿ ಅವು ರಾತ್ರಿಯೆಲ್ಲ ನಿದ್ರೆ ಮಾಡಲು ಬಿಡದಂತೆ ಅರಚುತ್ತವೆ. ಅವುಗಳ ಸಂತತಿ ವಿಪರೀತವಾಗಿ ನಡೆದಾಡುವ ಜನರ ಮೇಲೆ ದಾಳಿ ಮಾಡುತ್ತವೆ.)

ವೇಶ್ಯೆಯ ಮಗನಿಗೆ ತನ್ನ ಅಪ್ಪ ಯಾರು ಎಂದು ತಿಳಿಯದು. ಹೀಗಾಗಿ ಅವನು ತಾಯಿಯ ಶ್ರಾದ್ಧ ಮಾಡಬಹುದೇ ವಿನಾ ತಂದೆಯ ಹೆಸರಲ್ಲಿ ಮಾಡಲಾರ. ಹಾಗೆ ಪ್ರಚಾರ ಪ್ರಿಯ ಭಕ್ತ ತನ್ನ ಹೆಸರನ್ನು ಮೆರೆಸಿಕೊಳ್ಳುವನೇ ವಿನಾ ಲಿಂಗದೇವನ ಹಿರಿಮೆಯನ್ನಲ್ಲ.

ಒಂದು ಸುಂದರ ದೃಷ್ಟಾಂತ ನೆನಪಾಗುತ್ತದೆ. ಒಂದು ಊರಿನಲ್ಲಿ ಒಬ್ಬ ದೊಡ್ಡ ದಾನಿ ಇರುತ್ತಾನೆ. ಸದಾ ಅವನು ಜನರಿಗೆ ಉದಾರವಾಗಿ ನೀಡುತ್ತಿರುತ್ತಾನೆ. ಆದರೆ ಯಾವಾಗಲೂ ಮುಖವನ್ನು ಎಡಕ್ಕೆ ತಿರುಗಿಸಿ ಬಲಗೈಯಿಂದ ಕೊಡುತ್ತಿರುತ್ತಾನೆ. ಆಗ ಒಬ್ಬ ಕುತೂಹಲದಿಂದ ಪ್ರಶ್ನಿಸುತ್ತಾನೆ. "ನೀವು ಏಕೆ ದಾನ ಪಡೆಯುವವರ ಮುಖನೋಡಿ, ಹರಸಿ ಹಣ ಕೊಡುವುದಿಲ್ಲ?" ದಾನಿ ಹೇಳುತ್ತಾನೆ, "ನಿಜವಾದ ದಾನಿ ಪರಮಾತ್ಮ! ಅವನು ಕೊಟ್ಟುದನ್ನು ನಾನು ಕೊಡುತ್ತೇನೆ. ತೆಗೆದುಕೊಂಡವನ ಮುಖ ನೋಡಿ ಕೊಟ್ಟರೆ, ಅವನ ಮುಖ ನೆನಪಿನಲ್ಲಿ ಉಳಿಯುತ್ತದೆ. ಅವನಿಂದ ನಾನು ಕೃತಜ್ಞತೆಯನ್ನು ನಿರೀಕ್ಷಿಸುತ್ತೇನೆ. ನಾನು ಯಾರಿಗೆ ಕೊಟ್ಟೆ ಎಂಬುದು ನನಗೆ ಗೊತ್ತಾಗಬಾರದು ಎಂದು ಆ ರೀತಿ ಕೊಡುತ್ತಿರುವೆ." ಡಂಗುರ ಹೊಯಿಸಿಕೊಂಡು ದಾನ ಮಾಡಿ ಪ್ರಚಾರ ಪಡೆಯುವ ಭಕ್ತನನ್ನು ಧರ್ಮಪಿತರು ಇಷ್ಟಪಡರು.

231. ವಿಭವದ ಭಕ್ತಿ ವ್ಯರ್ಥ.

ಕಾಲಾಗ್ನಿರುದ್ರನ ಮೇಳಾಪವನರಿಯದವರು
ಕಾಳುಬೇಳೆಯೆನುತಿಪ್ಪರಯ್ಯಾ;
ಕಾನನದಡವಿಯಲ್ಲಿ ಕಿಚ್ಚು ಬಾಳುವೆಯಾಗಿ
ಮಕ್ಕಡೂರಲುವ ಬಳ್ಳುವಿನಂತೆ ಇಪ್ಪರಯ್ಯಾ,

ಮನುಜರು ನರವಿಂಧ್ಯದೊಳಗೆ.
ತತ್ಕಾಲ ಪ್ರೇಮವನರಿಯದೆ ವಿಭವಕ್ಕೆ ಮಾಡಿದವನ ಭಕ್ತಿ
ಇರುಳು ಸತ್ತಿಗೆಯ ಹಿಡಿಸಿಕೊಂಡಂತೆ ಲಿಂಗದೇವಾ - ಬ.ವ.ದೀ.229

ಸಾವು ಕಾಲಾಗ್ನಿರುದ್ರ. ಇದರ ಚಟುವಟಿಕೆ ಎಷ್ಟು ತೀವ್ರವಾಗಿರುತ್ತದೆ ಎಂಬುದನ್ನು ಅರಿಯದ ಅಜ್ಞಾನಿ ಮಾನವರು ಕಾಳುಬೇಳೆ, ಹೊಲಮನೆ, ತೋಟತುಡಿಕೆ, ಸಂಪತ್ತು ಎಂದು ಬಡಬಡಿ-ಸುತ್ತಲಿರುತ್ತಾರೆ. ಸಾವು ಬಂದೆರಗುವಾಗ ಕಾನನದ ಹುಲ್ಲುಗಾವಲಿನಲ್ಲಿ ಬೆಂಕಿ ಬಿದ್ದು ಸುಡುವಾಗ ಅತ್ತಲಿತ್ತ ಓಡುತ್ತ ಒರಲುವ ನರಿಯಂತೆ ವಿಕಾರವಾಗಿ ಬೊಬ್ಬೆ ಹಾಕುತ್ತಾರೆ, ಮುಲುಗುತ್ತಾರೆ. ಸಂದರ್ಭಕ್ಕನುಸಾರವಾಗಿ ದಾಸೋಹ ಮಾಡದೆ ಕೇವಲ ವೈಭವಕ್ಕಾಗಿ, ಪ್ರಚಾರಕ್ಕಾಗಿ ಭಕ್ತಿ ಮಾಡುವವನ ಮೇಲೆ ಲಿಂಗದೇವನ ಅನುಗ್ರಹದ ದೃಷ್ಟಿ ಬೀಳದು-ರಾತ್ರಿ ವೇಳೆ ಛತ್ರಿ ಹಿಡಿಸಿಕೊಂಡು ಕುಳಿತರೆ ಹೇಗೆ ಸಾರ್ವಜನಿಕರ ಗಮನ ಹರಿಯದೆ, ತನಗೆ ತಾನೇ ಸಂತೋಷ ಪಡಬೇಕೋ ಹಾಗೆ ವೈಭವಕ್ಕೆ ಪೂಜೆ-ಪುರಸ್ಕಾರ ಮಾಡುವ ಭಕ್ತನ ಭಕ್ತಿ ಲಿಂಗದೇವನ ಗಮನಕ್ಕೂ ಬರದು.

ಒಮ್ಮೆ ಒಬ್ಬ ಬಡ ಹುಡುಗ ಬಹಳ ಹಸಿದಿರುತ್ತಾನೆ. ಪೇಪರ್ ಮಾರುವ ಕೆಲಸ ಮಾಡುತ್ತ ಅವನು ವಿದ್ಯಾಭ್ಯಾಸ ಮಾಡುತ್ತಿರುತ್ತಾನೆ. ಮನೆ ಮನೆಗೆ ಪೇಪರ್ ಹಾಕುತ್ತ ಬಂದು ಹಸಿವು ತಾಳಲಾರದೆ ಒಬ್ಬರ ಮನೆಯಲ್ಲಿ ಆಹಾರ ಬೇಡುತ್ತಾನೆ. ಮನೆಯ ಯಜಮಾನಿ ಒಂದಿಷ್ಟು ಬ್ರೆಡ್-ಹಾಲು ಕೊಡುತ್ತಾಳೆ. ಧನ್ಯವಾದ ಹೇಳಿ ಹೋಗುತ್ತಾನೆ. ಕಾಲವು ಸರಿಯುತ್ತದೆ. ಆ ಮಹಿಳೆಗೆ ಶ್ವಾಸಕೋಶದ ಕಾಯಿಲೆ ಬರುತ್ತದೆ. ಆಸ್ಪತ್ರೆಗೆ ಸೇರುತ್ತಾರೆ. ತುರ್ತು ಶಸ್ತ್ರಚಿಕಿತ್ಸೆ ಆಗಬೇಕು. ಅದಕ್ಕೆ ಅಪಾರವಾದ ಖರ್ಚು ಬರುತ್ತದೆ. ಆಕೆಗೆ ಭರಿಸುವ ಶಕ್ತಿ ಇಲ್ಲ. ಪರೀಕ್ಷಿಸಿದ ವೈದ್ಯರು, "ಈಕೆಗೆ ನನ್ನ ಖರ್ಚಿನಿಂದ ಶಸ್ತ್ರಚಿಕಿತ್ಸೆ ಮಾಡುತ್ತೇನೆ." ಎಂದು ಬರೆಯುತ್ತಾರೆ. ಶಸ್ತ್ರಚಿಕಿತ್ಸೆ ಯಶಸ್ವಿಯಾಗುತ್ತದೆ. ಪ್ರಜ್ಞೆ ಬಂದ ಬಳಿಕ, ಆ ಮಹಿಳೆ ವೈದ್ಯರಿಗೆ ಧನ್ಯವಾದ ಹೇಳುತ್ತಾಳೆ. ಆಗ ಆ ವೈದ್ಯ ಹೇಳುತ್ತಾನೆ, "ಹಸಿದು ಕಂಗಾಲಾಗಿದ್ದಾಗ ನನಗೆ ಬ್ರೆಡ್ ಒಂದು ಲೋಟ ಹಾಲನ್ನು ಕೊಟ್ಟ ನಿಮಗೆ ಇಷ್ಟೂ ಮಾಡಬಾರದೆ?" ಆತನು ಪ್ರಸಿದ್ಧ ವೈದ್ಯನಾದಾಗ ಲಕ್ಷಾಂತರ ರೂ ಕೊಡುವುದು ದೊಡ್ಡದಲ್ಲ ಬಡ ಹುಡುಗನಾಗಿದ್ದಾಗ ಕೊಟ್ಟ ತುಣುಕು ಬ್ರೆಡ್, ಒಂದು ಲೋಟ ಹಾಲು ಬೆಲೆ ಕಟ್ಟಲು ಆಗದಂಥವು. ಆದ್ದರಿಂದ ಸಮಯ ಮತ್ತು ಅವಶ್ಯಕತೆ ಅರಿತು ಮಾಡುವ ದಾಸೋಹ (ದಾನ)ವೇ ಶ್ರೇಷ್ಠ.

232. ಸಮಯವನರಿತು ಮಾಡುವ ದಾಸೋಹ

ಹರಸಿ ಮಾಡುವುದು ಹರಕೆಯ ದಂಡ;
ನೆರಹಿ ಮಾಡುವುದು ಡಂಬಿನ ಭಕ್ತಿ;
ಹರಸಬೇಡ ನೆರಹಬೇಡ;
ಬಂದ ಬರವನರಿತು ಮಾಡಬಲ್ಲಡೆ ಕೂಡಿಕೊಂಡಿಪ್ಪ
ನಮ್ಮ ಲಿಂಗದೇವ.
- ಬ.ವ.ದೀ.230

ಸಾಮಾನ್ಯವಾಗಿ ಭಕ್ತರಲ್ಲಿ ಜ್ಞಾನಿಗಳು, ಅಜ್ಞಾನಿಗಳು ಎರಡೂ ಬಗೆಯವರು ಇರುತ್ತಾರೆ. ಜ್ಞಾನಿಗಳ ಭಕ್ತಿ ಸ್ವಲೀಲಾನಂದ ಭಕ್ತಿ, ತಮ್ಮ ಆನಂದಕ್ಕಾಗಿ ಅವರು ಕರ್ತನನ್ನು ಆರಾಧಿಸುತ್ತಾರೆ, ಹಾಡುತ್ತಾರೆ, ಸಂವಾದಿಸುತ್ತಾರೆ, ಆನಂದಿಸುತ್ತಾರೆ. ಅದೇ ರೀತಿ ಭಕ್ತರಲ್ಲಿ ಸಾಮಾನ್ಯ ಭಕ್ತರು, ಅಸಾಮಾನ್ಯ ಭಕ್ತರು ಇರುತ್ತಾರೆ. ಸಾಮಾನ್ಯ ಭಕ್ತರಿಗೆ ವಿವಿಧ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುವ ಬಯಕೆ. ಹೀಗಾಗಿ ಅವರು ದೇವರ ಜೊತೆ ವ್ಯವಹಾರ ಮಾಡುತ್ತಾರೆ. "ನೀನು ನಮಗೆ ಇಂಥ ಕೆಲಸ ಮಾಡಿಕೊಡು, ನಾನು ನಿನಗೆ ಇಷ್ಟು ಕಾಣಿಕೆಯನ್ನು ಹರಕೆಯಾಗಿ ಕೊಡುತ್ತೇನೆ." ಮಾತ್ರವಲ್ಲ ಹರಕೆ ಮಾಡಿಕೊಳ್ಳುವಾಗಲೇ ಒಂದು (ಅರಿಷಿಣ ಎದ್ದಿದ) ಬಟ್ಟೆಯಲ್ಲಿ ಒಂದು ನಾಣ್ಯ ಕಟ್ಟಿಟ್ಟು ಒಪ್ಪಂದ ಮಾಡಿಕೊಳ್ಳುತ್ತಾರೆ. ಕೆಲಸ ಪೂರ್ತಿಯಾದ ಮೇಲೆ "ದೇವರ ಕಮಿಷನ್" ಹರಕೆ ರೂಪದಲ್ಲಿ ಒಪ್ಪಿಸುತ್ತಾರೆ. ಇದು ನಿಜ ಭಕ್ತಿಯಲ್ಲ ಎಂದು ಧರ್ಮಪಿತ ಬಸವಣ್ಣನವರ ಅಭಿಪ್ರಾಯ. ನಮಗೆ ಏನನ್ನು ಕೊಡಬೇಕೆಂದು ಅವನ ಇಚ್ಛೆ ಇದೆಯೋ ಅದರಂತೆ ಕೊಡುತ್ತಾನೆ. ನಾವೇಕೆ ಕೇಳಬೇಕು?

ಎಂದು ಜ್ಞಾನಿ ಭಕ್ತ ಹೇಳುತ್ತಾನೆ. "ನಿಜ, ಸಾವು ಗೃಹಸ್ಥರು, ಲೌಕಿಕರು. ನಮಗೆ ಆಸೆ-ಆಕಾಂಕ್ಷೆ ಇರುವುದಿಲ್ಲವೆ? ನಾವು ಬೇಡಿಕೊಳ್ಳುತ್ತೇವೆ." ಎನ್ನುತ್ತಾರೆ ಅಂಥ ಸಾಮಾನ್ಯ ಭಕ್ತರು. [ಇಂಥ ಭಕ್ತರಿಗಾಗಿಯೇ ಪುರಾಣಕಾರರು ಬಸವ ಪುರಾಣಗಳನ್ನು ಬರೆದಿರುವುದು. ಪವಾಡ ಸಾಹಿತ್ಯ ರಚನೆಯಾಗಿರುವುದೆಂದು ನಾವು ಊಹಿಸಬಹುದು. ಆದ್ದರಿಂದ ಇಂಥವರಿಗೆ ಹೇಳುವುದೇನೆಂದರೆ ಬೇಡಿಕೊಳ್ಳುವುದಾದರೆ ಬೇಡಿಕೊಳ್ಳಿ; ಆದರೆ ಧರ್ಮಗುರು ಬಸವಣ್ಣನವರಲ್ಲಿ ಅರ್ಥಾತ್ ತಂದೆಯಲ್ಲಿ ಬೇಡಿಕೊಳ್ಳಿ; ಇಲ್ಲವೇ ಪತಿ (ಲಿಂಗದೇವ)ಯಲ್ಲಿ ಬೇಡಿಕೊಳ್ಳಿ, ಇದು ಬಿಟ್ಟು ಕಂಡ ಕಂಡವರಲ್ಲಿ (ಅನ್ಯ ದೇವತೆಗಳಲ್ಲಿ) ಬೇಡಿಕೊಳ್ಳಬೇಡಿ ಎಂದು]

ಇಷ್ಟಂತೂ ನಿಜ, ಭಕ್ತಿಯು ಕೆಳಮಟ್ಟದಲ್ಲೇ ಉಳಿಯದೆ ಅದು ಪ್ರೌಢವು ಪರಿಪಕ್ವವೂ ಆಗಿ ಮೇಲ್ಮಟ್ಟಕ್ಕೆ ಏರಬೇಕೆಂಬುದೇ ಬಸವಾದಿ ಪ್ರಮಥರ ಆಶಯ.

ನೆರಹಿ ಮಾಡುವುದು ಡಂಬಿನ ಭಕ್ತಿ - ವೈಭವದಿಂದ ಮಾಡುವ ಪೂಜೆ-ಪುರಸ್ಕಾರಗಳು ಡಂಬಾಚಾರದ ಭಕ್ತಿ ಎನಿಸಿಕೊಳ್ಳುತ್ತವೆ. ಕೆಲವರು ಸತ್ಯನಾರಾಯಣ ಪೂಜೆ, ವಿವಿಧ ಹೋಮ-ಯಜ್ಞಗಳನ್ನು ವೈಭವ ಪೂರ್ಣವಾಗಿ ಮಾಡುತ್ತಾರೆ. ಭಕ್ತ ತನ್ನನ್ನು ತಾನು ಸಮರ್ಪಿಸಿಕೊಂಡು ಮಾಡುವ ಪೂಜೆ ಸರ್ವಶ್ರೇಷ್ಠ. ಯಾವಾಗಲೋ ಒಮ್ಮೆ ವೈಭವಪೂರ್ಣ ಪೂಜೆ ಮಾಡಿ ಅನ್ನದಾನ ಮಾಡುವುದಕ್ಕಿಂತಲೂ "ಬಂದ ಬರವನರಿತು"- ಅಂದರೆ ಜಂಗಮನು ಕೈಗೊಂಡ ಕಾರ್ಯದ ಮಹತ್ವ ತಿಳಿದುಕೊಂಡು, ಅಥವಾ ಸಮಾಜದ ಅಗತ್ಯವನ್ನರಿತು, ಆಗಾಗಿನ ಆವಶ್ಯಕತೆಯನ್ನು ಅರಿತು ಧನ ದಾಸೋಹ ಮಾಡಿದರೆ ಲಿಂಗದೇವನು ಒಲಿದು ಅನುಗ್ರಹಿಸುವನು.

233. ಶರಣರಿಗೆ ಕಡ

ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ,
ಕಡಬಡ್ಡಿಯ ಕೊಡಲಾಗದು.
ಬಂದಡೊಂದು ಲೇಸು, ಬಾರದಿದ್ದರೆರಡು ಲೇಸು,
ಅಲ್ಲಿದ್ದಡೆಯೂ ಲಿಂಗಕ್ಕೆ ಬೋನ,
ಇಲ್ಲಿದ್ದಡೆಯೂ ಲಿಂಗಕ್ಕೆ ಬೋನ
ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ
ಬಂದಿತ್ತೆಂಬ ಪರಿಣಾಮವಿಲ್ಲ, ಬಾರದೆಂದು ದುಃಖವಿಲ್ಲ
ಇದು ಕಾರಣ ಲಿಂಗದೇವಾ,
ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು. - ಬ.ವ.ದೀ.231

ಧರ್ಮಪಿತರ ಆಶಯ ಏನಿದೆ? ಹಡೆದೊಡವೆ, ವಸ್ತುವನು ಅಂದರೆ ಸಂಪಾದಿಸಿದ ಸಂಪತ್ತು, ವಸ್ತುಗಳನ್ನು ಕೊಟ್ಟರೆ ಶರಣರಿಗೆ ದಾನವಾಗಿ ಕೊಡಬೇಕೇ ಹೊರತು ಕಡಬಡ್ಡಿಯನ್ನು ಕೊಡಲಾಗದು ಎಂಬುದಾಗಿದೆಯೋ ಅಥವಾ ಸಾಲದ ವ್ಯವಹಾರವನ್ನು ಶರಣರು ಶರಣರೊಡನೆ ಮಾಡಬೇಕೇ ಹೊರತು ಇತರರೊಡನೆ ಮಾಡಬಾರದು ಎಂಬುದಾಗಿಯೋ ಸ್ಪಷ್ಟವಾಗುತ್ತಿಲ್ಲ. ಏಕೆಂದರೆ ಬಡ್ಡಿವ್ಯವಹಾರ ಬಹಳ ಒತ್ತಡದ ಕೆಲಸ. ಸಾಲವಾಗಿ ಕೊಟ್ಟು ಬಡ್ಡಿಯನ್ನು ವಸೂಲು ಮಾಡಬೇಕು. ಸಾಲಗಾರರು ಸರಿಯಾಗಿ ಕೊಡದೆ ಇದ್ದರೆ ಒತ್ತಾಯ ಮಾಡಬೇಕು; ಬೆದರಿಕೆ ಹಾಕಬೇಕು, ಅಪಮಾನಕರ ಮಾತಿನಿಂದ ಛೇಡಿಸಬೇಕು. ಇವೆಲ್ಲ ಶರಣತ್ವಕ್ಕೆ ಚ್ಯುತಿ ತರುವಂತಹ ವ್ಯವಹಾರಗಳು. ಆದ್ದರಿಂದ ಶ್ರೀಮಂತನು ಶರಣರಿಗೆ ಧನವನ್ನು ದಾನವಾಗಿ ಕೊಡಬೇಕೇ ವಿನಾ ಸಾಲವಾಗಿ ಅಲ್ಲ. ಒಂದು ವೇಳೆ ಕೇಳುವವನು ಸಾಲವನ್ನಾಗಿ ಕೇಳುತ್ತಾನೆ, ಶ್ರೀಮಂತನು ಕೊಡುತ್ತಾನೆ ಎಂದುಕೊಳ್ಳೋಣ. ಆಗ ಶ್ರೀಮಂತನು ಮಾನಸಿಕವಾಗಿ ಬಹಳ ಒತ್ತಡ ಮಾಡಿಕೊಳ್ಳಬಾರದು. ಆ ಹಣವನ್ನು ತೆಗೆದುಕೊಂಡವನು ವಾಪಸ್ಸು ಕೊಟ್ಟರೆ ಒಳ್ಳೆಯದೆ ಆಯಿತು ಎಂದು ಸ್ವೀಕರಿಸಿ ಅದನ್ನು ಮತ್ತಷ್ಟು ಸತ್ಕಾರ್ಯಕ್ಕೆ ಬಳಸಬೇಕು. ಒಂದು ವೇಳೆ ವಾಪಸ್ಸು ಬರದೆ ಇದ್ದರೆ ಸಾಲಗಾರನ ಬಳಿಯಲ್ಲಿ ಅದು ಸಾರ್ಥಕವಾಗಿ ಬಳಕೆಯಾಗಿರಬಹುದು ಎಂದು ಭಾವಿಸಿ ನೆಮ್ಮದಿಯಿಂದ ಇರಬೇಕು. ಅಲ್ಲಿದ್ದರೂ ಲಿಂಗದೇವನಿಗೆ ಸಲ್ಲಿದೆ, ಇಲ್ಲಿದ್ದರೂ ಲಿಂಗದೇವನಿಗೆ ಸಲ್ಲುತ್ತಿತ್ತು ಎಂದು

ಭಾವಿಸಬೇಕು. ನನ್ನ ಬಳಿ ಇರುವ ಸಂಪತ್ತು "ಲಿಂಗದ ಒಡವೆ"; ಆ ದೇವನೇ ಕೊಟ್ಟ ಸಂಪತ್ತು; ಈಗಲೂ ಅದು ಆ ದೇವನಿಗೇ ಸಲ್ಲಿದೆ ಎಂಬ ಭಾವ ಬೆಳೆಸಿಕೊಳ್ಳಬೇಕು. ಬರದಿದ್ದರೆ ದುಃಖ ಪಡಬಾರದು. ಈ ಹಿನ್ನೆಲೆಯಲ್ಲಿ ಕೊಟ್ಟರೆ ಶರಣರಿಗೆ ಮಾತ್ರ ಸಾಲವನ್ನು ಕೊಡಬೇಕೇ ವಿನಾ ಇತರರಿಗೆ ಕೊಡಬಾರದು.

ಈ ವಚನವು ಬಡ್ಡಿ ವ್ಯವಹಾರವನ್ನು ನಿಷೇಧಿಸಿ ಉದಾತ್ತ ಆದರ್ಶವನ್ನು ಬೋಧಿಸುತ್ತದೆ. ಆದರೆ ಇಂದಿನ ಕಾಲ ಮಾನಕ್ಕೆ ಎಷ್ಟರ ಮಟ್ಟಿಗೆ ವ್ಯಾವಹಾರಿಕ ಎನಿಸುತ್ತದೆ ಎಂದು ಅನೇಕರು ಕೇಳಬಹುದು. ಸಂದರ್ಭಕ್ಕೆ ತಕ್ಕಂತೆ ಸಾಲ ಕೊಡುವುದೂ ಒಂದು ಪುಣ್ಯದ ಕೆಲಸವೇ ಆಗಿದೆ. ಎರಡನೆಯದಾಗಿ ಸ್ವಧರ್ಮೀಯರಿಗೆ ಮಾತ್ರ ಕೊಡಬೇಕು ಎನ್ನುವುದೂ ಇಂದಿನ ಕಾಲಕ್ಕೆ ಹೊಂದದು. ಏಕೆಂದರೆ ಜಾತಿ, ಧರ್ಮಗಳ ಗಡಿಯನ್ನು ದಾಟಿ ಸಾಮಾಜಿಕ ಸಂಬಂಧಗಳು ಬೆಳೆದಿವೆ. ಅಂದು ಜನರಲ್ಲಿ ನಿಯತ್ತು ಇತ್ತು. ಯಾರ ಋಣದಲ್ಲೂ ಸಾಯಬಾರದು; ಕೊಟ್ಟವರ ಹಣವನ್ನು ವಾಪಸ್ಸು ಕೊಡಬೇಕು ಎಂಬ ತುಡಿತವಿರುತ್ತಿತ್ತು. ಇಂದು ಹೇಗೆ ತಪ್ಪಿಸಿಕೊಳ್ಳಬೇಕು; ಕೊಟ್ಟವನು ಕೋಡಂಗಿ ಇಸಕೊಂಡವನು ಈ(ವೀ)ರಭದ್ರ ಎಂಬ ಗಾದೆ ಅನುಷ್ಠಾನದಲ್ಲಿದೆ. ಇಂಥ ಸನ್ನಿವೇಶದಲ್ಲಿ ಸಾಲ ಕೊಟ್ಟವನು ಕೇಳದಿದ್ದರೆ ಆಗುವುದೆ? ಒತ್ತಾಯ ಹೇರದಿದ್ದರೆ ಹಣವು ವಾಪಸ್ಸು ಬರುವುದೆ ?

ಇದನ್ನೆಲ್ಲ ಪರಿಶೀಲಿಸಿ ನಾವು ಹೀಗೆ ನಿರ್ಣಯಕ್ಕೆ ಬರಬಹುದು. ಸಾಲಕೊಡುವುದೂ ಒಂದು ಪುಣ್ಯದ ಕೆಲಸ. ಸರಳ ಬಡ್ಡಿ ಇರಬೇಕೇ ವಿನಾ ಚಕ್ರಬಡ್ಡಿ ಹಾಕಿ ಜನರನ್ನು ಬೀದಿಪಾಲು ಮಾಡದೆ ಒಂದು ಮಾನವೀಯ ನಿಯತ್ತಿನಿಂದ ಸಾಲ-ಬಡ್ಡಿ ವ್ಯವಹಾರ ಮಾಡಬಹುದು.

234. ಭಕ್ತ - ಜಂಗಮ ಸಂಬಂಧ

ಓಡಲಾರದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ
ಮಾಡಲಾಗದು ಭಕ್ತ, ಕೊಳಲಾಗದು ಜಂಗಮ;
ಹಿರಿಯರು ನರಮಾಂಸವ ಭುಂಜಿಸುವರೆ?
ತನುವುಕ್ಕಿ ಮನವುಕ್ಕಿ ಮಾಡಬೇಕು ಭಕ್ತನು,
ಮಾಡಿಸಿಕೊಳಬೇಕು ಜಂಗಮ, ಲಿಂಗದೇವಾ - ಬ.ವ.ದೀ.232

ಓಡಲಿಕ್ಕಾಗದೆ ದಣಿದ ಜಿಂಕೆ (ಮೊಲ) ಮುಂತಾದ ಅಹಿಂಸಾತ್ಮಕ ಪ್ರಾಣಿಗಳು ಅಟ್ಟಿಸಿಕೊಂಡು ಬಂದ ನಾಯಿಗೆ ಆಹಾರವಾಗಿ ಬಿಡುವುವು. ಈ ರೀತಿಯ ಸಂಬಂಧ ಜಂಗಮ ಮತ್ತು ಭಕ್ತನದು ಆಗಬಾರದು. ಜಂಗಮನು ನಾಯಿಯಂತೆ ಭಕ್ತರನ್ನು ಬೆನ್ನಟ್ಟಿ ಬೆದರಿಸಬಾರದು. ಕೆಲವು ಜಂಗಮರು ಮನೆಗೆ ಬಂದು "ನೀನಿಷ್ಟು ಕೊಡಬೇಕು; ಇಲ್ಲವಾದರೆ ಶಾಪ ಕೊಡುತ್ತೇನೆ." ಎನ್ನುವುದು ಆ ನಾಯಿಯ ಕ್ರೌರ್ಯದಂತೆಯೇ ಆಗುತ್ತದೆ. ಮತ್ತೆ ಕೆಲವರು ಉತ್ಸವಗಳನ್ನು ಹಮ್ಮಿಕೊಂಡು ಜಿಲ್ಲಾಧಿಕಾರಿ, ಪೋಲೀಸ್ ವರಿಷ್ಠಾಧಿಕಾರಿಗಳನ್ನು ಮುಂದಿಟ್ಟುಕೊಂಡು ಸಂಸತ್ ಸದಸ್ಯರು, ಮಂತ್ರಿಗಳು, ಶಾಸಕರ ನೇತೃತ್ವದಲ್ಲಿ ಹಣ ವಸೂಲಿ ಮಾಡುವರು. ಭಕ್ತನಿಗೆ ಕೊಡುವ ಶಕ್ತಿ ಮತ್ತು ಮನಸ್ಸು ಇರಲಿ ಬಿಡಲಿ 'ನೀನು ಕೊಡಲೇಬೇಕು, ಇಲ್ಲವಾದರೆ ಬಹಿಷ್ಕಾರ ಹಾಕಲಾಗುವುದು' ಎಂದು ಕೆಲವು ಸ್ವಾಮಿಗಳು ಆಜ್ಞೆ ಮಾಡುವುದುಂಟು. ಇದೂ ಸಹ ನಾಯಿತನದ ಕ್ರೌರ್ಯ.

ಇನ್ನು ಕೆಲವು ಭಕ್ತರು ತಮಗೆ ಶಕ್ತಿ ಇಲ್ಲದಿದ್ದರೂ ಸಾಲ ಮಾಡಿಕೊಂಡು ವೈಭವದ ಪೂಜೆಗಳನ್ನು ಮಾಡಿಸುವರು, ಜಂಗಮರ ಒತ್ತಾಯಕ್ಕೆ ಮಣಿದು ವಾಗ್ದಾನ ಮಾಡುವರು. ಅದನ್ನು ಪೂರೈಸಲಾರದೆ ವ್ಯಥೆಪಡುವರು. ಇವರು ಓಡಲಾರದ ಮೃಗದಂತೆ! ಇದೂ ಸಹ ತಪ್ಪು ಕೈಲಾಗದ್ದನ್ನು ಭಕ್ತನು ಮಾಡಲು ಹೋಗಬಾರದು; ಹಿಂಸೆ ಮಾಡಿ ಜಂಗಮನು ಪಡೆಯಬಾರದು. ಒತ್ತಾಯದಿಂದ ಪಡೆದು ಭಕ್ತನನ್ನು ಸಾಲಕ್ಕೆ ದೂಡಿದರೆ ಅಂದು ನರಮಾಂಸ ತಿಂದಂತೆ! ಭಕ್ತನು ಸ್ವಯಂ ಪ್ರೇರಣೆಯಿಂದ ತನು ಉಕ್ಕಿ, ಮನ ಉಕ್ಕಿ ಮಾಡಬೇಕು. ಆದಾಯವು ಹೆಚ್ಚಿದಂತೆಲ್ಲ ಅದರ ಪ್ರಮಾಣಕ್ಕೆ ತಕ್ಕಂತೆ ದಾನ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಜಂಗಮನು ಪ್ರಸನ್ನ ಮನೋಭಾವದಿಂದ ಮಾಡಿಸಿಕೊಳ್ಳಬೇಕು. ಭಕ್ತನ ಆರ್ಥಿಕ ಶಕ್ತಿ ಸಣ್ಣದಿದ್ದು ಅವನು ಸ್ವಯಂ ಪ್ರೇರಣೆಯಿಂದ ಎಷ್ಟೇ ಕೊಡಲಿ ಅದನ್ನು ಸಹರ್ಷದಿಂದ ಸ್ವೀಕರಿಸಬೇಕು.

235. ನೇಮವಾವುದು?

ಬಂದುದ ಕೈಕೊಳ್ಳಬಲ್ಲಡೆ ನೇಮ
ಇದ್ದುದ ವಂಚನೆಯ ಮಾಡದಿದ್ದಡೆ ಅದು ನೇಮ,
ನಡೆದು ತಪ್ಪದಿದ್ದಡೆ ನೇಮ, ನುಡಿದು ಹುಸಿಯದಿದ್ದಡೆ ನೇಮ,
ನಮ್ಮ ಲಿಂಗದೇವನ ಶರಣರು ಬಂದಡೆ
ಒಡೆಯರಿಗೊಡವೆಯನೊಪ್ಪಿಸುವುದೇ ನೇಮ - ಬ.ವ.ದೀ.233

ಧರ್ಮಪಿತ ಬಸವಣ್ಣನವರು ಜಂಗಮ ಮತ್ತು ಭಕ್ತ - ಉಭಯತರ ಕರ್ತವ್ಯ ಕುರಿತು ಈ ವಚನದಲ್ಲಿ ಹೇಳಿದ್ದಾರೆ. ಜಂಗಮನು ಧಾರ್ಮಿಕ ನೇತಾರ. ಅವನಿಗೆ ಶ್ರೀಮಂತ ಭಕ್ತರೂ ಅಷ್ಟೆ, ಬಡ ಭಕ್ತರೂ ಅಷ್ಟೆ. ಯಾವುದೇ ರೀತಿಯ ಭೇದ ಮಾಡದೆ ಉಭಯತರನ್ನೂ ಕಾಣಬೇಕು. ಅವರ ಮನೆಗಳನ್ನು ಸಂದರ್ಶಿಸಿ ಧಾರ್ಮಿಕ ವಿಧಿ - ವಿಧಾನಗಳನ್ನು ಪೂರೈಸುವುದೇ ಅಲ್ಲದೆ ಧರ್ಮಬೋಧೆ, ಮಾಡಬೇಕು. ಶ್ರೀಮಂತರ ಮನೆಯಲ್ಲಿ ಬಗೆಬಗೆಯ ಭಕ್ಷ್ಯಭೋಜ್ಯಗಳು ಲಭ್ಯವಾದರೆ ಬಡವರ ಮನೆಯಲ್ಲಿ ಸರಳವಾದ ಊಟ ಲಭ್ಯವಾಗಬಹುದು. ಆಗ ಅವನು ತನಗೆ ಪ್ರಾಪ್ತಿಯಾದುದನ್ನು ಸಹರ್ಷದಿಂದ ಸ್ವೀಕರಿಸಬೇಕು. ಅದೇ ನಿಜವಾದ ನೇಮ. ಇದು ಆದರ್ಶ ಜಂಗಮನ ಕರ್ತವ್ಯವಾದರೆ ಭಕ್ತನ ಕರ್ತವ್ಯ "ಇರುವುದರಲ್ಲಿ ವಂಚನೆ ಮಾಡದೆ ಇರುವುದು." ತ್ಯಾಗಿಯಾದ ಜಂಗಮನು ಸಮಾಜದ ಹಿತಕ್ಕಾಗಿ ನಿಸ್ವಾರ್ಥಿಯಾಗಿ ದುಡಿಯುತ್ತಾನೆ. ಭಕ್ತನಿಗೆ ತನು ಮನ ಅರ್ಪಿಸಿ ದುಡಿಯಲು ಸಮಯವಿರದು. ಆದ್ದರಿಂದ ನಿಸ್ವಾರ್ಥಿಯಾಗಿ ದುಡಿಯುವ ಜಂಗಮನಿಗೆ ವಂಚನೆಯಿಲ್ಲದೆ ಧನ ಸಹಾಯ ಮಾಡಬೇಕು. ಬಿನ್ನಹಕ್ಕೆ ಬಂದಾಗ ವಂಚನೆಯಿಲ್ಲದೆ ಪ್ರಸಾದ ಬಡಿಸಬೇಕು. ತಮಗಾಗಿ ಭಕ್ಷ್ಯ ಭೋಜ್ಯಗಳನ್ನು ಮಾಡಿಕೊಂಡು ಅವನ್ನು ಮುಚ್ಚಿಟ್ಟುಕೊಂಡು ಜಂಗಮನಿಗೆ ಸಾಮಾನ್ಯ ಆಹಾರ ಕೊಡಬಾರದು. (ತಾವಾಗಿಯೇ ಬಿನ್ನಹ ಕೊಟ್ಟಾಗ ಗುರು-ಜಂಗಮರಿಗೆ ವಿಶೇಷವಾಗಿ ಉಪಚರಿಸುವರು. ಹಳ್ಳಿಗಳಲ್ಲಿ ನಿತ್ಯನೇಮದಂತೆ ಕಂತೆ ಭಿಕ್ಷದವರು ಬಂದಾಗ ಅಂತಹ ಅಸಡ್ಡೆಯನ್ನು ತೋರಿಸುವ ಸಂಭವವಿದೆ.)

ಗುರುವು ತನ್ನಲ್ಲಿರುವ ಜ್ಞಾನವನ್ನು ವಂಚನೆಯಿಲ್ಲದೆ ಭಕ್ತರಿಗೆ, ಶಿಷ್ಯರಿಗೆ ಕೊಡಬೇಕು. ಶಿಕ್ಷಕ ವಂಚನೆಯಿಲ್ಲದೆ ವಿದ್ಯೆಯನ್ನು ಮಕ್ಕಳಿಗೆ ಧಾರೆ ಎರೆಯಬೇಕು. ಎಲ್ಲ ಉದ್ಯೋಗಿಗಳು ವಂಚನೆ ಇಲ್ಲದೆ ತಮ್ಮ ತಮ್ಮ ಉದ್ಯೋಗ ಮಾಡಬೇಕು.

ದೀಕ್ಷೆ ಪಡೆದುಕೊಂಡು ಒಂದು ವ್ರತವನ್ನು ಹಿಡಿದ ಮೇಲೆ ಅದನ್ನು ಬಿಡದೆ ನಡೆಸಬೇಕು. ಹೀಗೆ ನಡೆದು ತಪ್ಪದಿದ್ದರೆ ನೇಮ; ನುಡಿದು ಹುಸಿಯದಿದ್ದರೆ ನೇಮ. ಆವೇಶದಲ್ಲಿ ಏನಾದರೊಂದು ಮಾತನಾಡಿ ನಂತರ ತಾವು ಹಾಗಂದೇ ಇಲ್ಲ ಎಂದು ಕೆಲವರು ವಾದಿಸುವುದುಂಟು. ವೇದಿಕೆ ಮೇಲೆ ವೀರಾವೇಶದ ಗಣಾಚಾರ ನುಡಿದು ನಂತರ ತಪ್ಪಿಸಿಕೊಳ್ಳುವುದುಂಟು. ನುಡಿದ ಬಳಿಕ ಆ ಮಾತಿಗೆ ಬದ್ಧರಾಗುವುದೇ ಶರಣರ ಲಕ್ಷಣ. "ಲಿಂಗದೇವನ ಶರಣರು ಬಂದಡೆ ಒಡೆಯರಿಗೆ ಒಡವೆಯ ನೊಪ್ಪಿಸುವುದೇ ನೇಮ." ಇದು ಬಹಳ ಮಹತ್ವಪೂರ್ಣವಾದ ಮಾತು. ಈ ಜಗತ್ತಿನಲ್ಲಿ ಎಲ್ಲರೂ ಬಾಡಿಗೆದಾರರು, ಯಾರೂ ಮಾಲಿಕರಲ್ಲ, ಲಿಂಗದೇವನು ಜಗತ್ತಿನ ಒಡೆಯ. ಹೀಗಾಗಿ ಎಲ್ಲ ಜೀವರೂ ದೇವನ ಸೇವಕರು. ದೇವನ ಪ್ರತಿನಿಧಿಗಳಾಗಿ ಜಂಗಮರು ಸಮಾಜ ಸೇವಾ ಕಾರ್ಯದಲ್ಲಿ ತೊಡಗಿರುತ್ತಾರೆ. ಹೀಗಾಗಿ ಭಕ್ತನ ಒಡೆಯ ಜಂಗಮ. ವ್ಯಕ್ತಿ ತಾನು ಗಳಿಸುವವನಾದರೂ ಅವನು ಅದಕ್ಕೆ ಒಡೆಯನಲ್ಲ, ಕಾವಲುಗಾರ ಮಾತ್ರ. ತ್ಯಾಗಿಯಾದ ಜಂಗಮ ಒಂದು ಕೈಯಿಂದ ಪಡೆದು ಇನ್ನೊಂದು ಕೈಯಿಂದ ಅದನ್ನು ಹಂಚುವ ನಿಸ್ವಾರ್ಥಿ, ಜಲಾಗಾರವಿದ್ದಂತೆ. ಜಲಾಗಾರವು ತನಗಾಗಿ ನೀರು ತುಂಬಿಕೊಳ್ಳುವುದಿಲ್ಲ; ಅದು ಸಂಗ್ರಹಿಸಿಕೊಂಡು ಅಗತ್ಯವಿರುವವರಿಗೆ ವಿತರಿಸುತ್ತದೆ. ಅಂಥ ಜಂಗಮನಿಗೆ ತನ್ನ ಗಳಿಕೆಯ ಒಂದು ಪಾಲನ್ನು ಕೊಡುವುದು ಭಕ್ತನ ಕರ್ತವ್ಯ!

ಜಂಗಮನ ಬಗ್ಗೆ ಧರ್ಮಪಿತ ಬಸವಣ್ಣನವರು ಇಟ್ಟುಕೊಂಡಿರುವ ಪರಿಕಲ್ಪನೆ ಬಹಳ ಭವ್ಯ. ಅವನು ತ್ಯಾಗಿ, ಯೋಗಿ, ಸಮಾಜದ ಹಿತಚಿಂತಕ, ನಿಸ್ವಾರ್ಥಿ, ಸಮುದಾಯದ ಆಶಾಕಿರಣ! ಹೀಗಾಗಿ ಭಕ್ತನಿಗೆ ಜಂಗಮ ಶ್ರೇಷ್ಠ ಹಿತೈಷಿ. ಅಂಥ ಜಂಗಮಕ್ಕೆ ಎಷ್ಟು ಕೊಟ್ಟರೂ ಸಾಲದು ಎಂಬ ತುಡಿತ

ಭಕ್ತನಲ್ಲಿ. 'ಯಾವಾಗ ಬರುವನೋ, ಅವನಿಗೆ ನನ್ನ ಗಳಿಕೆಯ ಒಂದು ಪಾಲನ್ನು ಸಲ್ಲಿಸಬೇಕು.' ಎಂದು ಭಕ್ತನು ಹಂಬಲಿಸುತ್ತಾನೆ.

ಆದರೆ ಇಂದಿನ ಸಮಾಜವನ್ನು ನೋಡಿದರೆ ಭಕ್ತ-ಜಂಗಮ ಉಭಯತರೂ ಧರ್ಮಪಿತರ ಆಶಯವನ್ನು ಪೂರೈಸುತ್ತಲಿಲ್ಲ ಎಂಬ ಖೇದ ಉಂಟಾಗುತ್ತದೆ. ಅಂದು 12ನೆಯ ಶತಮಾನದಲ್ಲಿ ಅಂಥ ಜಂಗಮ ಮೂರ್ತಿಗಳು ತಯಾರಾದರೆಂದೇ ಲಿಂಗಾಯತ ಧರ್ಮ ದಾಂಗುಡಿ ಇಟ್ಟು ಬೆಳೆದು ಹಬ್ಬಿತು.

236. ಜಂಗಮನ ಸರಳ ನೇಮ

ಹಾಲ ನೇಮ ಹಾಲ ಕೆನೆಯ ನೇಮ;
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ;
ಬೆಣ್ಣೆಯ ನೇಮ, ಬೆಲ್ಲದ ನೇಮ
ಅಂಬಲಿಯ ನೇಮದವರಾರನೂ ಕಾಣೆ.
ಲಿಂಗದೇವನ ಶರಣರಲ್ಲಿ
ಅಂಬಲಿಯ ನೇಮದಾತ ಮಾದಾರ ಚನ್ನಯ್ಯ - ಬ.ವ.ದೀ.234

ಸಮಾಜದ ಏಳಿಗೆಗಾಗಿ ಕಾಷಾಯ ಲಾಂಛನ ಧರಿಸಿ ಧರ್ಮಪ್ರಚಾರದಲ್ಲಿ ಕಾರ್ಯೋನ್ಮುಖರಾಗಬೇಕು ಎಂಬ ಜಂಗಮರ ಸಂಖ್ಯೆ ಬಹುವಿರಳ. ಕಾವಿ ತೊಟ್ಟರೆ ಭಕ್ತರ ಮನೆಯಲ್ಲಿ ಸುಗ್ರಾಸ ಭೋಜನ ಸಿಗುತ್ತದೆ. ಅನಾಯಾಸವಾಗಿ ಕಾಣಿಕೆ ಸಿಗುತ್ತದೆ ಎಂದು ವೇಷಧಾರಣೆ ಮಾಡುವವರ ಸಂಖ್ಯೆಯೇ ವಿಪುಲ. ಇಂಥವರು ಕೆಲವು ನೇಮಗಳನ್ನು ಹಾಕಿಕೊಂಡಿದ್ದೇವೆಂದು ಭಕ್ತರ ಮುಂದೆ ಹೇಳಿಕೊಳ್ಳುವುದುಂಟು. ಏಲಕ್ಕಿ ಹಾಕಿ ಕಾಸಿದ ಗಟ್ಟಿ ಹಾಲಿನ ನೇಮ, ಜೊತೆಗೆ ಗಟ್ಟಿಯಾದ ಕೆನೆಯೂ ಸೇರಿರಬೇಕು. ಹೆಸರು ಕಾಳು, ಅಕ್ಕಿ ಇತ್ಯಾದಿ ಹಾಕಿ ಕುದಿಸಿದ ಕಿಚ್ಚಡಿ, ಇದು ಬಿಸಿಯಾಗಿರುವಾಗಲೇ ಹಾಕಿಕೊಳ್ಳಲು ಬೆಣ್ಣೆ, ನಂಜಿಕೊಳ್ಳಲು ಬೆಲ್ಲ-ಹೀಗೆ ಊಟದ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಮುಗ್ಧ ಭಕ್ತರು ಖುಷಿಯಿಂದ ಒದಗಿಸುವುದು ಕಂಡು ಇಂಥ ಜಂಗಮರು ನಾಲಿಗೆ ಚಪಲಕ್ಕಾಗಿ ತಿಂದು, ಆರೋಗ್ಯ ಕೆಡಿಸಿಕೊಂಡು ಸಂಕಟಪಡುತ್ತಾರೆ.

ನಿಜವಾದ ಸಾಧಕ ಜೀವಿ ತನ್ನ ನಾಲಿಗೆಯನ್ನು ನಿಯಂತ್ರಿಸುತ್ತಾನೆ; ರುಚಿಯಾದ ಭಕ್ಷ್ಯ ಭೋಜ್ಯಗಳು ಮುಂದೆ ಬಂದರೂ ಅವನ್ನು ನಿರಾಕರಿಸುತ್ತಾನೆ; ಸರಳವಾಗಿ ಬದುಕುತ್ತಾನೆ. ಅಂಥ ಅಂಬಲಿಯ ನೇಮದವನು ಮಾದಾರ ಚನ್ನಯ್ಯ.

(ಮುಂದುವರಿಯುವುದು)

(ಪುಟ 30ರಿಂದ ಮುಂದುವರಿದ ಭಾಗ)

ಹೀಗೆ ಹಲವಾರು ವ್ಯತ್ಯಾಸಗಳಿವೆ. ಇನ್ನು ಆಚರಣೆ ನೋಡಿದರೂ ಲಿಂಗಾಯತ ಪರಂಪರೆಯ ವಿರಕ್ತರು ಮತ್ತು (ಮೂಲತಃ ಲಿಂಗಾಯತರೇ ಇದ್ದು ಇತ್ತೀಚೆಗೆ) ವೀರಶೈವ (ರಾಗಿರುವ) ಪಂಚ ಪೀಠಾಧೀಶರ ಆಚರಣೆಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಯಾವುದೋ ಭ್ರಮೆಗೊಳಗಾಗಿ ಕೊಂಚ ಸಮಯ ಅಡ್ಡಪಲ್ಲಕ್ಕಿ, ಬೆಳ್ಳಿ ಸಿಂಹಾಸನ, ಬಂಗಾರದ ಕಿರೀಟ, ವೀರಶೈವವಾದದ ಮೋಹಕ್ಕೆ ಸಿಕ್ಕಿಬಿದ್ದಿದ್ದ ವಿರಕ್ತ ಮಠಾಧೀಶರಲ್ಲಿ ಕೆಲವರು ಇವೆಲ್ಲವನ್ನು ವರ್ಜಿಸಿ ಪುನಃ ಬಸವ ಪಥಿಕರಾಗಿರುವುದು ಅಭಿನಂದನಾರ್ಹ. ಆದರೆ ಪಂಚ ಪೀಠಾಧೀಶರು ಸಂಪೂರ್ಣ ಬಸವ ಪಥಕ್ಕೆ ಹೊರತಾದ ಆಚರಣೆ ಮಾಡುತ್ತ ಮೂಢ ಭಕ್ತರ (ಕೂಲಿ ಪಡೆದು ಹೊರುವ) ಹೆಗಲ ಮೇಲೆ ಮೆರೆಯುತ್ತಾರೆ. ಬಂಗಾರದ ಕಿರೀಟ, ವಜ್ರದುಂಗುರ, ಪಟ್ಟೆ ಪೀತಾಂಬರ ಉಟ್ಟು ಧರ್ಮಗುರು ಬಸವಣ್ಣನವರು ಬೋಧಿಸುವ ಮೌಲ್ಯಗಳಿಗೆ ಹೊರತಾಗಿ ಬದುಕುತ್ತಿದ್ದಾರೆ.

ಹೀಗಿದ್ದಾಗ, ಎರಡು ವಿರುದ್ಧ ಧ್ರುವಗಳಂತಿರುವ , ಎರಡು ರೇಲ್ವೆ ಹಳಿಗಳಂತಿರುವ ಲಿಂಗಾಯತ ಮತ್ತು ವೀರಶೈವಗಳನ್ನು ಕಲಬೆರಕೆ ಮಾಡುವ ಡಾ॥ ಚಿದಾನಂದ ಮೂರ್ತಿಯವರ ಕುತಂತ್ರ ಖಂಡನಾರ್ಹ. ಕರ್ನಾಟಕದಲ್ಲಿ ಪ್ರಭಾವಶಾಲಿಗಳಾಗಿರುವ ವಿರಕ್ತ ಮಠಗಳು ಗುರು ಬಸವಣ್ಣನವರ ಪರಂಪರೆಯವರು ತಾವು ಎಂಬುದನ್ನು ದೃಢವಾಗಿ ಹೇಳಬೇಕು. ಈ ದಿಶೆಯಲ್ಲಿ ದಾರಿ ತಪ್ಪುತ್ತಿರುವ ಮುಂಡರಗಿ ಶ್ರೀಗಳು, ಕೊಟ್ಟೂರು ಶ್ರೀಗಳು ಮತ್ತು ಮೂರುಸಾವಿರ ಮಠದ ಶ್ರೀಗಳು ಸಹ ಬಸವ ಪಥಿಕರಾಗಿ ಮುನ್ನಡೆಯಬೇಕೆಂಬುದು ನಮ್ಮ ಆಶಯ.

ಗೆ,
ಭೀಮಣ್ಣ ಖಂಡ್ರೆ
ಅಧ್ಯಕ್ಷರು, ಅ.ಭಾ.ವೀ.ಮಹಾಸಭಾ
ಬೆಂಗಳೂರು

ಶ್ರೀಯುತ ಭೀಮಣ್ಣ ಖಂಡ್ರೆಯವರಿಗೆ ಶರಣು ಶರಣಾರ್ಥಿಗಳು.

ವಿಷಯ: ವೀರಶೈವ -ಲಿಂಗಾಯತ ಪದಗಳ ಜೋಡಣೆ ಬಗ್ಗೆ ಆಕ್ಷೇಪ

ತಮಿಳುನಾಡಿನ ರಾಜಧಾನಿ ಚನ್ನೈನಲ್ಲಿ 9ನೆಯ ಲಿಂಗಾಯತ ಸಮ್ಮೇಳನ ಅದ್ದೂರಿಯಾಗಿ 2009ರ ಮೇ 2,3,4ರಂದು ನಡೆದದ್ದು ಸರ್ವವಿದಿತ. ಸಮ್ಮೇಳನವು ಬಹಳ ಅರ್ಥಪೂರ್ಣವಾಗಿ ನಡೆದಿದ್ದು ಇನ್ನೂ ವಿಶೇಷ. ಸಮ್ಮೇಳನದಲ್ಲಿ ನಮ್ಮಂತಹ ಸಹಸ್ರಾರು ಜನರು ಭಾಗವಹಿಸಿದ್ದು ಒಂದು ಪುಣ್ಯ ವಿಶೇಷವೆಂದು ಹೇಳದೇ ಇರುವುದು ತಪ್ಪಾಗುತ್ತದೆ. ತಮಿಳುನಾಡಿನ ಅನೇಕ ಶರಣರು ಭಾಗವಹಿಸಿದ್ದು ತುಂಬಾ ಆಶ್ಚರ್ಯವೆನಿಸಿತು. ಯಾವುದೋ ಒಂದು ಶಕ್ತಿ ಈ ಸಮ್ಮೇಳನವನ್ನು ರೂಪಿಸಿ ನಡೆಸಿದ್ದು ವರ್ಣಿಸಲು ನನಗೆ ಬರವಣಿಗೆಯಿಂದ ಸಾಲದು. ಸಮ್ಮೇಳನದ ನಡಾವಳಿಗಳನ್ನು ಬರೆಯುತ್ತಾ ಹೋದರೆ ಒಂದು ಪುಸ್ತಕವನ್ನೇ ಬರೆಯಬೇಕಾಗುತ್ತದೆ. ಇರಲಿ ಈಗ ವಿಷಯಕ್ಕೆ ಬರುತ್ತೇನೆ.

ಸಮ್ಮೇಳನದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಕೆಲವು ತಮಿಳು ಮಾತನಾಡುವ ಕನ್ನಡಿಗ ಲಿಂಗಾಯತರ ಪರಿಚಯವಾಯಿತು. ಇವರು ಬಹಳ ಹಿಂದೆ ಕರ್ನಾಟಕದಿಂದ ತಮಿಳುನಾಡಿನಲ್ಲಿ ಹೋಗಿ ನೆಲೆಸಿರುವವರು. ಅವರು ನನ್ನೊಡನೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದರು. ಒಂದು ಮುಖ್ಯವಾದ ವಿಚಾರವೆಂದರೆ ವೀರಶೈವ - ಲಿಂಗಾಯತ ಪದಗಳ ಜೋಡಣೆ ಬಗ್ಗೆ. ಕಾರಣ, ಸಮ್ಮೇಳನದಲ್ಲಿ ವೀರಶೈವ ಪದಕ್ಕೂ ಲಿಂಗಾಯತ ಪದಕ್ಕೂ ಯಾವುದೇ ಸಂಬಂಧವಿಲ್ಲವೆಂದು ಅನೇಕ ಶರಣರು ಪ್ರಸ್ತಾಪಿಸಿ, ಅನುಮೋದಿಸಿದರು. ವಿನಾಕಾರಣ ಈ ವೀರಶೈವ ಪದ ಲಿಂಗಾಯತ ಪದದ ಜೊತೆಯಲ್ಲಿ ಹೇಗೆ ಸೇರಿಸಲ್ಪಟ್ಟಿದೆ ಎಂಬುದರ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಇದು ವೀರಶೈವ ವಾದಿಗಳ ಸಂಚೆಂದು ಎಲ್ಲರೂ ಅರ್ಥಮಾಡಿಕೊಂಡರು. ತಮಿಳು ನಾಡು, ಕೇರಳ, ಆಂಧ್ರ ಪ್ರದೇಶಗಳಲ್ಲಿ ಈಗಲೂ ವೀರಶೈವರು ಇದ್ದಾರೆ. ಅವರಲ್ಲಿ ಕೆಲವರು ಹುಟ್ಟು ಮಾಂಸಾಹಾರಿಗಳೂ ಇದ್ದಾರೆ ಎಂದು ಅವರೇ ಹೇಳಿದರು. ಆ ವೀರಶೈವರಿಗೆ ಶ್ರೀಗುರು ಬಸವಣ್ಣನವರಾಗಲೀ, ಬಸವಾದಿ ಶರಣರು ಕೊಡ ಮಾಡಿದ ವಚನ ಸಾಹಿತ್ಯದ ಬಗ್ಗೆಯಾಗಲೀ ಕಿಂಚಿತ್ತೂ ಪರಿಚಯವಿಲ್ಲ. ಅಂದ ಮೇಲೆ ಈ ವೀರಶೈವ ಮಹಾಸಭೆ ಹುಟ್ಟಿದ್ದು ಏಕೆ? ಈ ಮಹಾಸಭೆಯನ್ನು ಹುಟ್ಟುಹಾಕಿದ ಪಾಪಿಗಳಾರು? ಎನ್ನುವ ಮಟ್ಟದಲ್ಲಿಯೂ ಪ್ರಶ್ನೆಗಳನ್ನು ಕೇಳಿದರು.

ಅದಕ್ಕೆ ನಾನು ಸಂಕ್ಷಿಪ್ತವಾಗಿ ತಮ್ಮ(ಜಾತಿಯ) ಸ್ವಾರ್ಥ ಸಾಧನೆಗೆಂದು ಲಿಂ॥ ಶ್ರೀ ಹಾನಗಲ್ ಕುಮಾರ ಸ್ವಾಮಿಗಳ ದುರುದ್ದೇಶದಿಂದ ವೀರಶೈವ ಮಹಾಸಭೆಯ ಉಗಮ ಮತ್ತು ಬೆಳೆದು ಬಂದ ಮಾರ್ಗ ಎಲ್ಲವನ್ನೂ ವಿವರಿಸಿದಾಗ ತಕ್ಷಣ ಅವರುಗಳು ಮಹಾಸಭೆ ಅಧ್ಯಕ್ಷರಾದ ಶ್ರೀಯುತ ಖಂಡ್ರೆಯವರಾಗಲೀ ಬಸವ ಸಮಿತಿಯ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರಾಗಲೀ ಇದರ ಬಗ್ಗೆ ಏನನ್ನೂ ಹೇಳಿಲ್ಲ ಮತ್ತು ವೀರಶೈವ / ಲಿಂಗಾಯತ ಒಂದೇ ಅರ್ಥ ಉಳ್ಳ ಪದಗಳು ಎಂದು ಹೇಳುತ್ತಾರಲ್ಲ ಎಂದು ಮರು ಪ್ರಶ್ನೆ ಕೇಳಿದರು. ನಾನು ಕಾರಣವೇನು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿದೆನು. ಸಂಕ್ಷಿಪ್ತವಾಗಿ ಹೇಳುವುದಾದರೆ, 12ನೆಯ ಶತಮಾನದಲ್ಲಿ ಶ್ರೀ ಗುರು ಬಸವಣ್ಣನವರಿಂದ ಲಿಂಗಾಯತ ಧರ್ಮದ ಉದಯವಾಯಿತಲ್ಲವೆ? ಹೌದು ಎಂದು ಅವರ ಉತ್ತರ. 12ನೆಯ ಶತಮಾನದಲ್ಲಿ ಮತ್ತು ನಂತರ ಅನೇಕ ಪಂಗಡಗಳವರು, ಜಾತಿಗಳವರು, ಪಂಥದವರು ಲಿಂಗಾಯತ ಧರ್ಮ ಸ್ವೀಕರಿಸಿದರು. ಹೌದು ಎಂದು ಅವರಿಂದ ಬಂದ ಉತ್ತರ. ಉದಾ: ರೆಡ್ಡಿ ಜನಾಂಗದವರು, ಹೊಸ ಧರ್ಮ ಸ್ವೀಕರಿಸಿ ರೆಡ್ಡಿ ಲಿಂಗಾಯತರಾದರು. ವ್ಯಾಪಾರ ಮಾಡುತ್ತಿದ್ದ

ಬಣಜಿಗ ಜನಾಂಗ, ಈ ಧರ್ಮ ಸ್ವೀಕರಿಸಿ ಬಣಜಿಗ ಲಿಂಗಾಯತರಾದರು. ಹೀಗೆ ಅನೇಕ ಪಂಥ, ವರ್ಗ ಮತ್ತು ಜಾತಿಗಳಿಂದ ಬಂದವರನ್ನು ಆಯಾಯ ಹಿಂದಿನ ಕಸುಬು ಮತ್ತು ಹುಟ್ಟು ಜಾತಿಯನ್ನು ಪ್ರತಿಬಿಂಬಿಸುತ್ತದೆ. ಉದಾ: ಸಾದು ಲಿಂಗಾಯತರು, ಬಣಜಿಗ ಲಿಂಗಾಯತರು, ಗಾಣಿಗ ಲಿಂಗಾಯತರು, ಪಂಚಮಸಾಲಿ ಲಿಂಗಾಯತರು, ಕ್ಷೌರಿಕ (ಹಡಪದ) ಲಿಂಗಾಯತರು, ವೀರಶೈವ ಲಿಂಗಾಯತರು ಇತ್ಯಾದಿ, ಇತ್ಯಾದಿ. ಹೀಗೆ ವೀರಶೈವ (ಜಾತಿ/ ಪಂಗಡ/ ಪಂಥ) ಎನ್ನುವ ಶೈವದ ಒಂದು ಪಂಥದವರು ಈ ಲಿಂಗಾಯತ ಧರ್ಮವನ್ನು ಸ್ವೀಕರಿಸಿ ವೀರಶೈವ ಲಿಂಗಾಯತರಾದರು. ಇದು ಇತಿಹಾಸ ಎಂದು ವಿವರಿಸಿದ ತಕ್ಷಣ ಒಬ್ಬರು ನನ್ನನ್ನು ಮರು ಪ್ರಶ್ನಿಸಿದರು. ಅದೇನೆಂದರೆ, ಒಟ್ಟಿನಲ್ಲಿ ಎಲ್ಲರೂ ಲಿಂಗಾಯತರೇ ಹೊರತು, ಹಿಂದಿನ ಅವರವರ ಪೂರ್ವಾಶ್ರಮದ ಜಾತಿಯನ್ನೋ, ವರ್ಗವನ್ನೋ ಅಥವಾ ಪಂಥವನ್ನೋ ಸೂಚಿಸುವುದು ತಪ್ಪಲ್ಲವೆ ಎಂದರು. ಖಂಡಿತವಾಗಿಯೂ ತಪ್ಪು; ಎಲ್ಲರೂ ಒಳಜಾತಿಗಳನ್ನು ಬಿಟ್ಟು ಕೇವಲ ಲಿಂಗಾಯತರು ಎಂದು ಮಾತ್ರ ಕರೆದುಕೊಳ್ಳಬೇಕು ಎಂದು ನಾನು ನನ್ನ ವಾದಗಳನ್ನು ಮುಂದುವರೆಸಿದ್ದನ್ನು ಅರಿತು ಬಹಳ ಸಂತೋಷಭರಿತರಾದರು.

ಹಾಗಾದರೆ ವೀರಶೈವ - ಲಿಂಗಾಯತ ಮಹಾಸಭೆ ಎಂದು ಖಂಡ್ರೆಯವರು ಹೇಳುವುದು ಸರಿ ಇಲ್ಲವಲ್ಲ ಎಂದು ಪ್ರತಿಕ್ರಿಯಿಸಿದರು. ಅಲ್ಲದೇ ಮುಂದುವರೆದು "ವೀರಶೈವ -ಲಿಂಗಾಯತ ಮಹಾಸಭೆ ಎಂದರೆ ಈ ಮಹಾಸಭೆ ವೀರಶೈವ - ಲಿಂಗಾಯತರಿಗೆ ಮಾತ್ರ ಸೀಮಿತವಾದಂತೆ ಆಗುವುದಿಲ್ಲವೇ? ಹಾಗಾದರೆ, ರೆಡ್ಡಿ ಲಿಂಗಾಯತರು, ಬಣಜಿಗ ಲಿಂಗಾಯತರು, ಸಾದು ಲಿಂಗಾಯತರು, ಗೌಳಿಗ ಲಿಂಗಾಯತರು, ಪಂಚಮಸಾಲಿ ಲಿಂಗಾಯತರು, ಜಂಗಮ ಲಿಂಗಾಯತರು ಇತ್ಯಾದಿ ಇತ್ಯಾದಿ ಲಿಂಗಾಯತರುಗಳಿಗೆ ಈ ಮಹಾಸಭೆಯಲ್ಲಿ ಜಾಗವಿಲ್ಲವೇ? ಸ್ಥಾನವಿಲ್ಲವೇ?" ಎಂದು ಗುಡುಗಿದರು. ಈ ಪ್ರಶ್ನೆಯನ್ನು ನೀವುಗಳು ಶ್ರೀಯುತ ಖಂಡ್ರೆಯವರಿಗೆ ಮತ್ತು ಶ್ರೀಯುತ ಅರವಿಂದ ಜತ್ತಿಯವರನ್ನೇ ಕೇಳಿರಿ ಎಂದು ಸಮಾಧಾನ ಮಾಡಿದೆನು.

ಒಟ್ಟಿನಲ್ಲಿ ಈ ಮಹಾಸಭೆ ವೀರಶೈವ ಎಂಬ ಒಂದು ಪಂಗಡಕ್ಕೆ ಸಂಬಂಧಿಸಿದ ಸಂಸ್ಥೆ, ಇದರ ಗೊಡವೆ ಬೇಡವೇ ಬೇಡವೆಂದು ಪೂಜ್ಯ ಶ್ರೀ ಮಾತಾಜಿಯವರು "ಲಿಂಗಾಯತ ಧರ್ಮ ಮಹಾಸಭೆ" ಎನ್ನುವ ಧಾರ್ಮಿಕ ಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ. ನೀವೆಲ್ಲರೂ ಈ ಸಂಸ್ಥೆಯ ಸದಸ್ಯರಾಗಿರಿ ಮತ್ತು ಈ ಸಂಸ್ಥೆ ಬೆಳೆಸಿರಿ ಎಂದು ಬುದ್ಧಿ ಮಾತುಗಳನ್ನು ಹೇಳಿ ಸಮಾಧಾನ ಮಾಡಿದ್ದಾಯಿತು. ಇದಕ್ಕೆ ಪೂರಕವಾಗಿ ದಿ. 3-5-2009ರಂದು ಚೆನ್ನೈನ ಸಿ.ಸಿ. ಬ್ರಾಂಚ್‌ನ ಪೋಲೀಸ್ ಸಹಾಯಕ ಆಯುಕ್ತರಾಗಿರುವ ಶರಣ ಶ್ರೀ. ಆರ್. ರಾಮದಾಸ್ ಮಾತನಾಡಿ, "ಇಂದು ನಮ್ಮ ಸಮಾಜದ ಇಂತಹ ಒಂದು ಭವ್ಯ ಕಾರ್ಯಕ್ರಮ ಚೆನ್ನೈನಲ್ಲಿ ನಡೆಯುತ್ತಿರುವುದು ನನಗೆ ಅತಿಯಾದ ಹೆಮ್ಮೆ ಮತ್ತು ಆನಂದವನ್ನು ಉಂಟು ಮಾಡಿದೆ. ಪೂಜ್ಯರ ಸಾಹಿತ್ಯ ಓದಿದ ಮೇಲೆ ನನಗೆ ಶೈವ, ವೀರಶೈವ ಮತ್ತು ಲಿಂಗಾಯತಗಳ ವ್ಯತ್ಯಾಸ ಮನವರಿಕೆಯಾಯಿತು." ಎಂದು ಹೇಳಿ ಈ ಮೂರರ ವಿಶ್ಲೇಷಣೆ ಮಾಡಿದರು.

ಒಟ್ಟಿನಲ್ಲಿ ಲಿಂಗಾಯತ ಧರ್ಮ ವೀರಶೈವ (ಎಂಬ ಶೈವ) ಪಂಥದಿಂದ ಬೇರೆ. ವೀರಶೈವವು ಸನಾತನ ವೈದಿಕ ಮತದಲ್ಲಿ ಇದ್ದು ಜಾತಿ ಪದ್ಧತಿಯನ್ನು ಮಾನ್ಯ ಮಾಡುತ್ತದೆ. ವೀರಶೈವವು ಬಸವ ಪೂರ್ವದ ಒಂದು ಪಂಥ. ಆದ್ದರಿಂದ ಇಷ್ಟಲಿಂಗಧಾರಿಗಳಾದ ಲಿಂಗಾಯತರಿಗೂ ಮತ್ತು ವೀರಶೈವಕ್ಕೂ ಯಾವುದೇ ಹೊಂದಾಣಿಕೆಯೂ ಇಲ್ಲ ಸಂಬಂಧವೂ ಇಲ್ಲ. ಸಾಕಷ್ಟು ಈ ಬಗ್ಗೆ ಪ್ರಚಾರವಾಗಿದೆ. ಆದರೆ ಕೆಲವೊಂದು ಜಾತಿವಾದಿ ಮಠಾಧಿಕಾರಿಗಳಿಗೆ, ಕೆಲವೊಂದು ಜಾತಿವಾದಿ ಸಾಹಿತಿಗಳಿಗೆ ಇನ್ನೂ ಅರಿವಾಗಿಲ್ಲ, ಅರಿವಾದರೂ ಪ್ರತಿಷ್ಠೆ ಬಿಟ್ಟು ಹೊರ ಬರಲು ಹೃದಯವಂತಿಕೆ ಇಲ್ಲ, ಕೆಲವರು ಅಜ್ಞಾನದಿಂದ ಹೊರ ಬರುತ್ತಿಲ್ಲ. ಕಾಲವೇ ಸತ್ಯವನ್ನು ಪ್ರತಿಪಾದಿಸುತ್ತದೆ.

ಶ್ರೀ ಖಂಡ್ರೆಯವರೇ, ನಿಮಗೆ ಈ ಪತ್ರ ಬರೆದ ಉದ್ದೇಶ ನಾನು ಈ ಮೇಲೆ ಚರ್ಚಿಸಿದ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬಹಿರಂಗ ಪಡಿಸಿರಿ ಎಂದು ಬಿನ್ನವಿಸುತ್ತ ಈ ಪತ್ರಕ್ಕೆ ವಿದಾಯ ಹೇಳುತ್ತೇನೆ.

ದಿ. 11-06-2009

- ಹೆಚ್.ಎ. ಶರಣಪ್ಪ, ಬೆಂಗಳೂರು

ಆತ್ಮಾವಲೋಕನ

ನಾನೇನು ಸಾಹಿತಿಯಲ್ಲ. ನಾನೊಬ್ಬ ಸಾರ್ವಜನಿಕ ವಲಯ (ಬಿ.ಇ.ಎಲ್)ದಿಂದ ನಿವೃತ್ತಿಯಾಗಿರುವ ಸಹಾಯಕ ಲೆಖ್ಖಾಧಿಕಾರಿ. ಲಿಂಗಾಯತ ಧರ್ಮದ ಸಂಬಂಧದಲ್ಲಿ ಇಲ್ಲಿ ನನ್ನ ಕೆಲವು ಅನಿಸಿಕೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ.

ಸನ್ 1972 -73ರ ಸಮಯ, ರಾಜಾಜಿನಗರದ ಶ್ರೀ ಬಸವೇಶ್ವರ ಪ್ರೌಢ ಶಾಲೆಯ ಆವರಣದಲ್ಲಿ ಲಿಂಗೈಕ್ಯ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ಪ್ರವಚನವಿತ್ತು. ಮುಖ್ಯ ಅತಿಥಿಗಳಾಗಿ ಅಂದಿನ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಆಗಮಿಸಿದ್ದರು. ಪೂಜ್ಯರು ನಡೆಸಿಕೊಟ್ಟ ಅಂದಿನ ಪ್ರವಚನವು ನನ್ನ ಮನಸ್ಸಿನಲ್ಲಿ ಇಂದಿಗೂ ಗುಯಿಗುಟ್ಟುತ್ತಿದೆ. ಅವರು ಹೇಳಿದ ಕೆಲವೊಂದು ಸಾಲುಗಳು ಹೀಗಿವೆ. "Basavaism is nothing but Marxism + God."ಅಂತಾ ಹೇಳಿದರು. ಹಾಗೇನೆ ಬಸವಣ್ಣನವರ ವಚನಗಳನ್ನು ಹೇಳುತ್ತಾ ಅವರು Karl Marx ಬರೆದ Communism ಜೊತೆಗೆ ತುಲನೆ ಮಾಡುವ ವೈಖರಿ ಬಹಳ ಚನ್ನಾಗಿತ್ತು. ಪೂಜ್ಯರು ಲಿಂಗಾಯತ ಧರ್ಮವನ್ನು ಆಳವಾಗಿ ಅಧ್ಯಯನ ಮಾಡಿದ್ದರಲ್ಲದೇ, ಇವರು Karl Marx ರಾಮಕೃಷ್ಣ ಪರಮಹಂಸ, ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ ಮತ್ತು ಲಿಯೋ ಟಾಲ್‌ಸ್ಟಾಯ್‌ರ ಕೃತಿಗಳನ್ನು ಅಧ್ಯಯನ ಮಾಡಿ ಅಗಾಧ ಪಾಂಡಿತ್ಯವನ್ನು ಗಳಿಸಿ ಕೊಂಡಿದ್ದರು. ಈ ಎಲ್ಲ ಮಹನೀಯರ ವಿಚಾರಧಾರೆಗಳನ್ನು ಬಸವಣ್ಣನವರ ವಚನಗಳೊಂದಿಗೆ ತಾಳೆ ಹಾಕುತ್ತಿದ್ದರು. ಜನತೆ ಇವರನ್ನು "ಪ್ರವಚನ ಪಟು", "ಪ್ರವಚನ ಪಿತಾಮಹ" "ಅಭಿನವ ವಿವೇಕಾನಂದ" ಎಂದು ಕರೆಯುತ್ತಿದ್ದರು. ಶ್ರೀ ವೀರೇಂದ್ರ ಪಾಟೀಲರು ಇವರ ಪ್ರವಚನವನ್ನು ಕೇಳಿ ಸಮಾರಂಭ ಮುಗಿಯುವವರೆಗೆ ಅಲ್ಲೇ ಇದ್ದು ಪ್ರವಚನದ ನಂತರ ಅವರು ಮಾತನಾಡಿದರು. ಇವರ ಮಾತುಗಳು ಕೆಲವು ಇಂದಿಗೂ ನನ್ನ ನೆನಪಿನಲ್ಲಿವೆ. "ನನಗೆ ಎಲ್ಲರೂ ಲಿಂಗಾಯತ ಮುಖ್ಯಮಂತ್ರಿಗಳು ಅನ್ನುತ್ತಾರೆ. ನಾನು ಪಿ.ಡಬ್ಲ್ಯೂ.ಡಿ. ಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಹೆದ್ದಾರಿಗಳನ್ನು, ರಸ್ತೆಗಳನ್ನು ಮಾಡಿಸಿದೆ. ನಾನು ಕೇವಲ ಲಿಂಗಾಯತರು ಓಡಾಡಲಿ ಅಂತ ಮಾಡಿಸಲಿಲ್ಲ. ಅದರ ಬದಲು ಎಲ್ಲಾ ಜನರು ಓಡಾಡಲಿ ಅಂತ ಮಾಡಿಸಿದೆ, ಹಾಗೇನೆ ಕೆಲವೊಬ್ಬರು ನನ್ನ ಹತ್ತಿರ ನಾನು ಇಷ್ಟು ಓದಿದ್ದೇನೆ, ಅಷ್ಟು ಓದಿದ್ದೇನೆ, ನನಗೆ ಕೆಲಸ ಕೊಡಿಸಿರಿ ಅಂತ ಬರುತ್ತಾರೆ, ಅವರಿಗೆ ನಾನು ಹೇಳಬಯಸುವುದೇನೆಂದರೆ ನಾನು ನನ್ನ ಸ್ವಂತ ಪ್ರಯತ್ನದಿಂದ ಇಂತಿಂಥ ಖಾತೆಯಲ್ಲಿ ಇಂತಿಂಥ ಪದವಿಯಲ್ಲಿ ಇದ್ದೇನೆ ಅಂತ ಹೇಳಿದರೆ ನಮ್ಮವರ ಬಗ್ಗೆ ನಾನು ಹೆಮ್ಮೆ ಪಡುತ್ತೇನೆ" ಅಂತ ಹೇಳಿದರು. ಇವರ ಈ ಮಾತಿನ ಅರ್ಥದಿಂದ ಅಮೆರಿಕಾದ ಹಿಂದಿನ ಅಧ್ಯಕ್ಷರಾದ John.F. Kennedyಯವರ ಒಂದು ಮಾತು ನನಗೆ ನೆನಪು ಬರುತ್ತದೆ. ಅದೇನೆಂದರೆ "THINK THAT ONE CAN DO WHAT FOR HIS NATION. DON'T THINK THAT NATION CAN DO WHAT FOR ME" ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರಾಗಲೀ ಅಥವಾ ವೀರೇಂದ್ರ ಪಾಟೀಲರಾಗಲೀ ಅವರ ಮನಸ್ಸಿನ ವಿಚಾರಧಾರೆಗಳು ಬಹಳಷ್ಟು ವಿಸ್ತಾರವಾಗಿದ್ದವೆಂದು ತಿಳಿಯುತ್ತವೆ.

ಮತ್ತೊಂದು ಪ್ರಸಂಗ, ಸನ್ 2008 ಉತ್ತರಾರ್ಧದಲ್ಲಿ ಶ್ರೀ ಬಸವ ಸೇವಾ ಸಮಿತಿ ಬಿ.ಇ.ಎಲ್. ಇವರು ಸದಸ್ಯರಿಗೆ ಮತ್ತು ಅವರ ಕುಟುಂಬದವರಿಗೆ ಸತ್ಕಾರೂಟವನ್ನು ಏರ್ಪಡಿಸಿದ್ದರು. ಅಂದಿನ ಸಮಾರಂಭಕ್ಕೆ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಮಾಜಿ ಸದಸ್ಯರಾದ ಶ್ರೀ ಶಿವರಾಜ್ ಪಾಟೀಲರು ಮುಖ್ಯ ಅತಿಥಿಗಳಾಗಿದ್ದರು. ಅವರು ಬಸವಣ್ಣನವರ ಬಗ್ಗೆ ಈ ರೀತಿ ಹೇಳಿದರು. "ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಬರೆದ ವಚನಗಳು ಅಂದೇ ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದರೆ ಬಹುಶಃ ಕ್ರೈಸ್ತ ಧರ್ಮದ ಹಾಗೆ ಲಿಂಗಾಯತ ಧರ್ಮವೂ ಜಗತ್ತಿನ ಮೂಲೆ ಮೂಲೆಯಲ್ಲಿ ಬೆಳೆಯುತ್ತಿತ್ತೇನೋ ಅಂತ ಅನ್ನಿಸುತ್ತದೆ" ಅವರು ಇದರಲ್ಲಿ ಇರುವ ಸಮಾನತೆ ಹಾಗೂ ಉದಾರತೆ ಬಗ್ಗೆ ಮಾತನಾಡಿದರು.

ಇವೆಲ್ಲವುಗಳನ್ನು ಅವಲೋಕಿಸಿದಾಗ ಲಿಂಗಾಯತ ಧರ್ಮವು ಒಂದು ಜಾತಿಯಲ್ಲ, ಅದು ಒಂದು ಸ್ವತಂತ್ರ ಧರ್ಮದ ಸಾಲಿನಲ್ಲಿ ನಿಲ್ಲುವ ಎಲ್ಲಾ ಅರ್ಹತೆಗಳನ್ನು ಹೊಂದಿದೆ ಅಂದರೆ ತಪ್ಪಾಗಲಾರದು ಎನ್ನುವುದು ನನ್ನ ಅನಿಸಿಕೆ. ಇದರ ಬಗ್ಗೆ ನಮ್ಮ ಮಠಾಧೀಶರು, ಮುತ್ಸದ್ದಿಗಳು ಮತ್ತು ಸಂಘ ಸಂಸ್ಥೆಗಳು ಇನ್ನಾದರೂ ಮನಸ್ಸು ಮಾಡಲಿ ಎಂದು ನನ್ನ ಆಶಯ.

- ಸದಾನಂದ ಹತ್ಯಾಳ, ನಂ.234, 6ನೇ ಬ್ಲಾಕ್
ಬಿ.ಇ.ಎಲ್. ಬಡಾವಣೆ, ವಿದ್ಯಾರಣ್ಯಪುರ, ಬೆಂಗಳೂರು -97
ದೂ : 080- 23640227

ಲಿಂಗಾಯತ ಸಮಾಜದ ಶುದ್ಧೀಕರಣ - ಇಂದಿನ ಅಗತ್ಯ

- ಸು. ಮಲ್ಲಿಕಾರ್ಜುನಪ್ಪ, ಮತ್ತೀಪುರ

ಪೂಜ್ಯ ಮಾತಾಜಿಯವರಿಗೆ ಶರಣು ಶರಣಾರ್ಥಿಗಳು. ಈಗಾಗಲೇ ಲಿಂಗಾಯತ ಸಮಾಜವು ವೈದಿಕೀಕರಣಗೊಂಡು, ತನ್ನ ಸ್ವತಂತ್ರ ಅಸ್ತಿತ್ವವನ್ನೇ ಕಳೆದುಕೊಳ್ಳುವಂತಿದೆ. ಇದು ತನ್ನ ರೋಗ ನಿರೋಧಕ ಶಕ್ತಿಯನ್ನು ಕಳೆದುಕೊಂಡು, ಬೇಲಿ, ಕಾವಲುಗಾರ ಎರಡೂ ಇಲ್ಲದ ಸರ್ಕಾರಿ ಗೋಮಾಳದಂತಿದೆ. ಗುರು ಬಸವಣ್ಣನವರ ಆಶಯದಂತೆ ಒಂದು ಕೇಂದ್ರ ಬಿಂದುವಿನ ಸುತ್ತ ಹಬ್ಬದೆ ಮೇಟಿಗೂಟ ಕಿತ್ತ ಕಣದಂತೆ, ದಾರ ಕಿತ್ತ ಮಣಿಸರದಂತೆ ಇದರಲ್ಲಿ ಸಂಘಟನೆಯೇ ಇಲ್ಲ. ಹಿಂದೂ ಸಂಸ್ಕೃತಿಯ ಸಮುದ್ರದಲ್ಲಿ ಕರಗಿಹೋಗುವ ದ್ವೀಪದಂತಿದೆ ಲಿಂಗಾಯತ ಸಮಾಜ ಎಂದು ಓರ್ವ ಪಾಶ್ಚಿಮಾತ್ಯ ವಿದ್ವಾಂಸ ಬರೆದಿರುವುದು ಕಟು ಸತ್ಯವಾಗಿದೆ ಎಂದೆಲ್ಲ ತಾವು ಮಾರ್ಚ್ 2009 ಕಲ್ಯಾಣ ಕಿರಣದ ಸಂಪಾದಕೀಯದಲ್ಲಿ ಬರೆದಿರುವುದು ಸಂದರ್ಭೋಚಿತವಾಗಿದೆ. ಧಾರ್ಮಿಕ ಆಡಳಿತ, ಬಸವ ತತ್ವ ತರಬೇತಿ, ಮಾರ್ಗದರ್ಶನ ವ್ಯವಸ್ಥೆಗಳಿಲ್ಲದೆ ಅಸೂಯೆ, ಸಂಕುಚಿತ ಭಾವನೆ, ಮೂಢ ನಂಬಿಕೆ, ಒಳಪಂಗಡ ಭೇದಗಳಿಂದ ಆದರ್ಶ ವ್ಯಕ್ತಿಗಳ ಹಾಗೂ ಧರ್ಮ ಪ್ರಚಾರಕರ ಕೊರತೆಗಳಿಂದ ಇಂದು ಕರ್ನಾಟಕದ ಬಹು ದೊಡ್ಡ ಲಿಂಗಾಯತ ಸಮಾಜ ಮಂಕಾಗಿದೆ. ಜಗತ್ತನ್ನೇ ಎಚ್ಚರಿಸಬಲ್ಲ ಭವ್ಯ ಪರಂಪರೆ ಹೊಂದಿದ ಲಿಂಗಾಯತ ಸಮಾಜ ಇಂದು ಧಾರ್ಮಿಕ, ಸಾಮಾಜಿಕ, ರಾಜಕೀಯವಾಗಿಯೂ ತನ್ನ ಸಮಗ್ರ ಸಂಘಟನೆ ಕಳೆದುಕೊಂಡು ನಿಸ್ಸತ್ವಗೊಂಡಿದೆ.

ಕಾಶಿಯಲ್ಲಿ ವಿದ್ಯೆ ಕಲಿಸಿ ಮುಂದೆ ಮಠಾಧೀಶರಾಗುವವರಿಗೆ ಮೂಲದಲ್ಲಿಯೇ ಗುರುಕುಲಗಳಲ್ಲಿ ವೇದ, ಆಗಮ, ಸಂಸ್ಕೃತ, ವೈದಿಕ, ಶೈವ ವ್ಯವಹಾರಗಳನ್ನು ಬೋಧಿಸಿ ತರಬೇತಿ ಕೊಟ್ಟು ಕಳಿಸುತ್ತಿರುವುದರಿಂದ ಅವರು ಮಠಾಧೀಶರಾದ ಮೇಲೆ ಲಿಂಗಧಾರಣೆ, ಮದುವೆ, ನಾಮಕರಣ ಮುಂತಾದ ಶುಭಕಾರ್ಯಗಳಲ್ಲಿ ಹೋಮ, ಹವನ, ಗೃಹ ಪ್ರವೇಶದಲ್ಲಿ ಗೋವು ನುಗ್ಗಿಸುವುದು ಇತ್ಯಾದಿಯಾಗಿ ವೈದಿಕ ರೀತಿಯಲ್ಲಿಯೇ ಮಾಡುತ್ತಿರುವುದರಿಂದ ವೈದಿಕ ಆಚರಣೆಗಳೇ ಲಿಂಗಾಯತರ ಆಚರಣೆಗಳಾಗಿ ಸಮಾಜ ದಾರಿತಪ್ಪಿದೆ. ಬೇಲಿಯೇ ಎದ್ದು ಹೊಲ ಮೇಯುವಂತೆ, ಲಿಂಗಾಯತ ತತ್ವಗಳನ್ನು ಪ್ರಚಾರವಾಗದಂತೆ ಮರೆಮಾಚಿ, ಜನರನ್ನು ಅಜ್ಞಾನದಲ್ಲಿಟ್ಟು, ಏಕದೇವೋಪಾಸನೆಯನ್ನು ಮುಚ್ಚಿಟ್ಟು, ಬಹುದೇವತೋಪಾಸನೆಯನ್ನು ಬಿತ್ತನೆ ಮಾಡುತ್ತಿರುವುದರಿಂದ ಸಮಾಜ ನಶಿಸಿದೆ. ಇದರಿಂದ ಕೆಲವು ಲಿಂಗಾಯತರು ಬ್ರಹ್ಮಕುಮಾರಿ ಸಮಾಜ ಸೇರಿದರೆ, ಇನ್ನೂ ಕೆಲವರು ಅಯ್ಯಪ್ಪಸ್ವಾಮಿಗೆ ಹೋದರೆ, ಹಲವರು ಮಾರಿಮಸಣಿ, ತಿಮಪ್ಪ, ಗಣಪತಿ, ಆಂಜನೇಯ, ಮಂಜುನಾಥನಿಗೂ ಹೋಗುವರು. ಹೀಗಾಗಿ ನಮ್ಮ ಆಚಾರ -ವಿಚಾರಗಳೆಲ್ಲ ತೀರ ಹದಗೆಟ್ಟವೆ. ಇಂದಿನ ವಾತಾವರಣ ವೈದಿಕರನ್ನು ಮೆಚ್ಚಿಸುವಂತಿದೆ, ಲಿಂಗಾಯತರನ್ನು ನಾಚಿಸುವಂತಿದೆ. ಇದಕ್ಕೆಲ್ಲ ನಮ್ಮ ಧರ್ಮ ತತ್ವಗಳ ಅರಿವು ಇಲ್ಲದಿರುವುದೇ ಕಾರಣ. ನಮ್ಮ ಧರ್ಮದ ಮೂಲಭೂತ ತತ್ವಗಳನ್ನು ತಿಳಿಯದೆ ತಿಳಿದಿದ್ದರೂ ಒಪ್ಪದೆ ಇರುವುದರಿಂದ ನಮ್ಮ ಧರ್ಮ ಸಂಸ್ಕೃತಿ ಸರ್ವನಾಶದ ಅಂಚಿನಲ್ಲಿದೆ. ಇದು ಅತ್ಯಂತ ಕಳವಳಕಾರಿ, ಇದೇ ಪರಿಸ್ಥಿತಿ ಮುಂದುವರಿಯಬಿಟ್ಟಲ್ಲಿ ಲಿಂಗಾಯತ ಧರ್ಮವು ಹೇಳಹೆಸರಿಲ್ಲದಂತಾಗುತ್ತದೆ.

ಬಸವ ಧರ್ಮ ತತ್ವದಂತೆ ತರಬೇತಿಗೊಳಿಸಿ ಹೆಚ್ಚಿನ ಧರ್ಮಪ್ರಚಾರಕ ಜಂಗಮರನ್ನು ನೇಮಿಸಿ, ಮೂಢನಂಬಿಕೆಗಳನ್ನು ಹೋಗಲಾಡಿಸಿ, ಧರ್ಮಪ್ರಚಾರ ಮಾಡಿಸಿ ಲಿಂಗಾಯತ ತತ್ವಗಳನ್ನು ಬೋಧಿಸುವುದೇ ಧಾರ್ಮಿಕ ಸುಧಾರಣೆ. ಅಷ್ಟಾವರಣ, ಪಂಚಾಚಾರ, ಷಟಸ್ಥಲ, ಷಟ್‌ಸೂತ್ರಗಳನ್ನು ಜಾರಿಗೊಳಿಸುವುದೇ ಧರ್ಮ ಶುದ್ಧೀಕರಣ, ಬಸವ ಧರ್ಮ ತತ್ವಗಳಿಗೆ ವಿರುದ್ಧವಾದ ಆಚರಣೆಗಳನ್ನು ರಚನಾತ್ಮಕವಾಗಿ ಪ್ರಶ್ನಿಸುವುದು ಸಮಾಜ ಶುದ್ಧೀಕರಣವೇ ಹೊತು ಬೇರೇನೂ ಅಲ್ಲ. ಒಟ್ಟಿನಲ್ಲಿ ಸಮಾಜ ಬಸವ ತತ್ವದಂತೆ ನಡೆಯುವಂತೆ ಪ್ರಯತ್ನಿಸುವುದೊಂದೇ ದಾರಿ, ಉಳಿದುದೆಲ್ಲ ಮಾರಿ.

ಲಿಂಗಾಯತ ಧರ್ಮಗ್ರಂಥದ ಅಗತ್ಯವಿದೆ. ಆದರೆ ಅದನ್ನು ಬರೆಯುವುದು ಕಷ್ಟಸಾಧ್ಯ. ಗುರು ಬಸವಣ್ಣನವರು ವಚನಗಳ ಮೂಲಕ ಹೇಳಿರುವ ಲಿಂಗಾಯತ ಧರ್ಮ ತತ್ವಗಳ ಆಧಾರದ ಮೇಲೆಯೇ ಧರ್ಮಗ್ರಂಥ ರಚನೆಯಾಗಬೇಕು. ಅದು ಎಲ್ಲ ದೃಷ್ಟಿಯಿಂದಲೂ ಸಮರ್ಥನೀಯ.

(09ರ ಪುಟದಿಂದ ಮುಂದುವರಿದ ಭಾಗ..)

ಉಪಾಯವಿಲ್ಲ. ಹೀಗಾಗಿ ಎಷ್ಟೋ ಜನ ಮುಪ್ಪಿನವರ, ಅಶಕ್ತರ ಕ್ಷೇತ್ರ ದರ್ಶನದ ಹಂಬಲ ಹಾಗೆಯೇ ಉಳಿಯುತ್ತದೆ. ಈ ಹಿನ್ನೆಲೆಯಲ್ಲಿ ಒಮ್ಮೆ ಶರಣ ಮೇಳಕ್ಕೆ ಶ್ರೀ.ಎಂ.ವಿ.ರಾಜಶೇಖರನ್ ಮತ್ತೊಮ್ಮೆ ಶ್ರೀ. ಕೆ.ಹೆಚ್.ಮುನಿಯಪ್ಪನವರು ಕೇಂದ್ರದಲ್ಲಿ ರಾಜ್ಯ ಸಚಿವರಾಗಿದ್ದಾಗ ಬಂದು ಭಾಗವಹಿಸಿದಾಗ ಕೂಡಲ ಸಂಗಮ ಮತ್ತು ಬಸವ ಕಲ್ಯಾಣಕ್ಕೆ ರೇಲ್ವೆ ಲೈನ್ ಮಾಡಿಸಲು ಪ್ರಯತ್ನಿಸಬೇಕೆಂಬ ಬೇಡಿಕೆ ಸಲ್ಲಿಸಿದ್ದೆವು. ಮತ್ತು 2009ರ ಶರಣ ಮೇಳದಲ್ಲಿ ನಿರ್ಣಯ ತೆಗೆದುಕೊಂಡುದೇನೆಂದರೆ ಆಲಮಟ್ಟಿಯಿಂದ ಕೊಪ್ಪಳಕ್ಕೆ ರೇಲ್ವೆ ಲೈನ್ ಆಗಬೇಕು. ಇದು ಕೂಡಲ ಸಂಗಮದ ಮಾರ್ಗವಾಗಿ ಹೋಗಬೇಕು ಎಂಬುದು. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸಂಸದ್‌ಸದಸ್ಯರಾಗಿ ಪುನರಾಯ್ಕೆಯಾದ ಕೆ.ಹೆಚ್.ಮುನಿಯಪ್ಪನವರು ರೇಲ್ವೆ ಖಾತೆಯ ರಾಜ್ಯ ಸಚಿವರಾಗಿ ನಮಗೆಲ್ಲ ಸಂತೋಷವಾಯಿತಲ್ಲದೆ ರೇಲ್ವೆ ಸಂಪರ್ಕದ ಕನಸು ಚಿಗುರೊಡೆಯಿತು. ಹುನಗುಂದ ಶಾಸಕರಾದ ಶ್ರೀ ದೊಡ್ಡನಗೌಡರು ಮತ್ತು ಕೆಲವು ಪ್ರಮುಖರು ಕೂಡಲ ಸಂಗಮಕ್ಕೆ ರೇಲ್ವೆ ನಿಲ್ದಾಣದ ಬೇಡಿಕೆ ಮುಂದಿಟ್ಟುಕೊಂಡು ಹೋದಾಗ ಶ್ರೀ ಮುನಿಯಪ್ಪನವರು ನಮಗೆ ನೀಡಿದ ವಾಗ್ದಾನವನ್ನು ಸ್ಮರಿಸಿಕೊಂಡು, "ಶರಣ ಮೇಳಕ್ಕೆ ಬಂದಾಗ ಪೂಜ್ಯ ಮಾತೆಯವರು ಇದರ ಪ್ರಸ್ತಾಪ ಮಾಡಿದಾಗ ನಾನು ಮಾತುಕೊಟ್ಟಿದ್ದೇನೆ. ನನಗೆ ನೆನಪಿದೆ." ಎಂದರಂತೆ. ಶರಣ.ಎಲ್.ಎಂ. ಪಾಟೀಲರು ನನಗೆ ಫೋನ್ ಮಾಡಿ, "ಈ ರೀತಿ ಮುನಿಯಪ್ಪನವರು ಹೇಳಿದರು. ಈಗ ರೇಲ್ವೆ ಖಾತೆಗೇ ಬಂದಿದ್ದಾರೆ. ನೀವೂ ಮತ್ತಷ್ಟು ಒತ್ತಾಯ ಮಾಡಿರಿ" ಎಂದರು. ನಾನು ಮತ್ತೊಂದು ಮನವಿ ಬರೆದು ಕಳಿಸಿದೆ "ಮಮತಾ ಬ್ಯಾನರ್ಜಿಯವರ ಗಮನಕ್ಕೆ ತಂದು ಈ ಬಾರಿಯ ಬಡ್ಜೆಟ್‌ನಲ್ಲಿ ಸೇರ್ಪಡೆ ಮಾಡುವಂತೆ ಪ್ರೇರೇಪಿಸಿರಿ" ಎಂದು ತಿಳಿಸಿದೆ. ಆಗಲೂ ಈ ವಿಷಯ ನೆನಪಿದೆ ಎಂದು ಮುನಿಯಪ್ಪನವರು ಹೇಳಿ ಕಳಿಸಿದರು.

ಈಗ ಘೋಷಿಸಲ್ಪಟ್ಟ ಬಡ್ಜೆಟ್‌ನಲ್ಲಿ ಆಲಮಟ್ಟಿ - ಕೊಪ್ಪಳದ ರೇಲ್ವೆ ಮಾರ್ಗದ ಸಮೀಕ್ಷೆ ಮಾಡುವ ಪ್ರಸ್ತಾಪವಿದೆ. ಈ ಲೈನ್ ಕೂಡಲ ಸಂಗಮದ ಮೂಲಕ ಹೋಗುವಂತೆ ಆಗಬೇಕು. ಕೊಟ್ಟ ವಾಗ್ದಾನವನ್ನು ನೆನಪಿಡುವ ಅಪರೂಪದ ರಾಜಕಾರಣಿಯಾಗಿ ಮುನಿಯಪ್ಪನವರು ಪ್ರಶಂಸೆಗೆ ಪಾತ್ರರಾಗಿದ್ದಾರೆ. ಕುಮಾರಿ ಮಮತಾ ಬ್ಯಾನರ್ಜಿಯವರ ಗಮನಕ್ಕೆ ತಂದು ಪ್ರಸುತ್ತ ವಿಷಯದ ಪ್ರಸ್ತಾಪ ಮಾಡಿಸಿರುವುದರಲ್ಲಿ ಶ್ರೀ ಮುನಿಯಪ್ಪನವರ ಪಾತ್ರವನ್ನು ಖಂಡಿತಾ ಗುರುತಿಸಬಹುದು. ಇದಕ್ಕಾಗಿ ಅವರು ಅಭಿನಂದನಾರ್ಹರು. ಮುಂಗಡ ಪತ್ರದಲ್ಲಿ ಪ್ರಸ್ತಾಪವಾಗಿರುವ ಸಮೀಕ್ಷಾ ಕಾರ್ಯ ಬೇಗನೆ ಕ್ರಿಯಾ ರೂಪಕ್ಕೆ ಬರಬೇಕಂದು ಆಗ್ರಹಿಸುತ್ತ ಬಸವ ಕಲ್ಯಾಣಕ್ಕೆ ರೇಲ್ವೆ ಸಂಪರ್ಕ ಒದಗಿಸುವ ಬಗ್ಗೆಯೂ ಅವರು ಪ್ರಯತ್ನಿಸಬೇಕೆಂದು ಹೇಳುತ್ತಾ, ಅವರ ಅಧಿಕಾರಾವಧಿಯಲ್ಲಿ ರಾಜ್ಯಕ್ಕೆ ಇನ್ನೂ ಹೆಚ್ಚಿನ ಸೇವೆಯಾಗಲೆಂದು ಆಶಿಸುತ್ತ ಶುಭವನ್ನು ಹಾರೈಸೋಣ.

ವಾಚಕರ ವಾಣಿ:

ಗದಗ, ಚಿತ್ರದುರ್ಗ ಮಠಗಳು ವೀರಶೈವ ಮಠಗಳು

ಗದಗಿನ ಶ್ರೀ ತೋಂಟದಾರ್ಯ ಸಂಸ್ಥಾನ, ಚಿತ್ರದುರ್ಗದ ಶ್ರೀ ಮುರುಗ ರಾಜೇಂದ್ರ ಸಂಸ್ಥಾನಗಳ ಪೂಜ್ಯರು ಈಚಿನ ಕೆಲವು ವರ್ಷಗಳಲ್ಲಿ ತಮ್ಮವು ಲಿಂಗಾಯತ ಮಠಗಳೆಂದು ವೀರಶೈವ ಮಠಗಳು ಅಲ್ಲವೆಂದೂ ಹೇಳುತ್ತಿದ್ದಾರೆ. ವಾಸ್ತವ ಸಂಗತಿ ಹೀಗಿದೆ.

ಗದಗಿನ ಮಠದ ಮೂಲ ಪುರುಷರಾದ ಶ್ರೀ ತೋಂಟದ ಸಿದ್ಧಲಿಂಗಯತಿಗಳು ತಮ್ಮ ವಚನಗಳಲ್ಲಿ ವೀರಶೈವ ಪಂಥವನ್ನೇ ಎತ್ತಿ ಹೇಳಿ ತಾವು ವೀರಶೈವರೆಂಬುದನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ.(ವಚನ ಸಂಪುಟ11.ವಚನ 3,8,20 ಇತ್ಯಾದಿ)-ಎಲೆ ಶಿವನೆ ಸಾಕ್ಷಿಯಾಗಿ ಅಂಗಲಿಂಗ ಸಂಬಂಧಿಗಳಿಗೆ ಪರಮ ವೀರಶೈವಾಗಮವೇ ಪ್ರಮಾಣು" ಚಿತ್ರದುರ್ಗ ಮಠದ ಮೂಲ ಪುರುಷರಾದ ಶ್ರೀ ಮುರುಗಿಶಾಂತವೀರರು ತಮ್ಮ ಕೃತಿಗಳಲ್ಲಿ "ವೀರಶೈವ ಸಿದ್ಧಾಂತ ಸ್ಥಾಪಣಾಚಾರ್ಯ (-ವೀರಶೈವವನ್ನು ಜನಗಳ ಮನಸ್ಸಿನಲ್ಲಿ ನೆಲೆಯೂರಿಸಿದವರು '-ಏಕೋನ ವಿಂಶತಿ ಪ್ರಬಂಧ ಕೃತಿಯ ಕೊನೆಯ ವಾಕ್ಯ) ಎಂದು ಹೇಳಿಕೊಂಡಿದ್ದಾರೆ.

16-17 ನೇ ಶತಮಾನಗಳ ಅವರು ಅಪ್ಪಿ ತಪ್ಪಿಯೂ ತಮ್ಮನ್ನು "ಲಿಂಗಾಯತ" ರೆಂದು ವೀರಶೈವ ಪಂಥವನ್ನು "ಲಿಂಗಾಯತ ಪಂಥವೆಂದು ಕರೆದಿಲ್ಲವಾದರೂ, ಇಂದು ವೀರಶೈವ, ಲಿಂಗಾಯತ ಪದಗಳು ಸಮಾನಾರ್ಥಕಗಳಾಗಿರುವುದರಿಂದ ಆ ಎರಡು ಮಠಗಳನ್ನು ಲಿಂಗಾಯತ ಮಠಗಳೆಂದು ಕರೆದರೆ ತಪ್ಪಿಲ್ಲ. ಆದರೆ ಅವುಗಳ ಸ್ಥಾಪಕರೆ ತಮ್ಮನ್ನು ವೀರಶೈವರೆಂದು ಕರೆದುಕೊಂಡಿರುವಾಗ ಆ ಮಠಗಳ ಮುಖ್ಯಸ್ಥರಾಗಿ ಅವುಗಳ ಸಂಪ್ರದಾಯವನ್ನು ಒಪ್ಪಿರುವ ಈಗಿನ ಪೂಜ್ಯರಿಗೆ ತಮ್ಮನ್ನು ವೀರಶೈವರಲ್ಲವೆಂದು ಕರೆದುಕೊಳ್ಳುವ ಹಕ್ಕಿಲ್ಲ; ಅವರಿಗೆ ಹಾಗೆ ಕರೆದುಕೊಳ್ಳುವ ಸ್ವಾತಂತ್ರ್ಯ ಇಲ್ಲ. ಡಾ.ಎಂ.ಎಂ.ಕಲ್ಬುರ್ಗಿಯವರು ಸಂಪಾದಿಸಿರುವ ಬಸವಣ್ಣನವರ ವಚನಗಳಲ್ಲಿ (ವಚನ 1098) ಶೈವರಾಗಿದ್ದ ಅವರ ಅನುಯಾಯಿಗಳೆಲ್ಲ ವೀರಶೈವರೆಂಬುದರಲ್ಲಿ ಅನುಮಾನವಿಲ್ಲ (ಅವರು ಲಿಂಗಾಯತರೂ ಹೌದು).

ಸು.1720ರಲ್ಲಿ ರಚಿತವಾದ ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ ಮರಾಠಿ ಕೃತಿಯಲ್ಲಿ ಸೋದೆ ಸಂಸ್ಥಾನದ ಮಧುಲಿಂಗನಾಯಕನು ತನ್ನ ಮಗಳು ಮಲ್ಲಮ್ಮಾಜಿಯ ಮದುವೆಗೆ ಲಿಂಗಾಯತ ಧರ್ಮದ ಪಂಚಸಿಂಹಾಸನಾಧೀಶರನ್ನು ಆಹ್ವಾನಿಸಿ ಗೌರವಿಸಿದನೆಂದಿದೆ. ವಿರಕ್ತ ಪೀಠಗಳಾಗಲಿ ಪಂಚಪೀಠಗಳ ಗುರುಮಠಗಳಾಗಲಿ ಎಲ್ಲವು ವೀರಶೈವ ಅಥವಾ ಲಿಂಗಾಯತ ಮಠಗಳೆ ಆಗಿವೆ. ವೀರಶೈವ,ಲಿಂಗಾಯತ ಎರಡೂ ಬೇರೆ ಬೇರೆ ಎಂಬ ಭ್ರಮೆ ತೊಲಗುವದು ಅಗತ್ಯವಾಗಿದೆ.

ಡಾ.ಎಂ. ಚಿದಾನಂದ ಮೂರ್ತಿ, ಬೆಂಗಳೂರು
30/6/2009, ಪ್ರಜಾವಾಣಿ ವಾಚಕರ ವಾಣಿ

ಸ್ವತಂತ್ರ ಧರ್ಮವೇ?

ಗದಗ-ಚಿತ್ರದುರ್ಗ ಮಠಗಳು ವೀರಶೈವ ಮಠಗಳು ಎಂದು ಹೇಳಿರುವ ಹಿರಿಯ ಸಂಶೋಧಕ ಡಾ.ಎಂ.ಚಿದಾನಂದ ಮೂರ್ತಿಯವರು ಈ ಮಠಗಳ ಪೂಜ್ಯರು ಇದನ್ನು ಅಲ್ಲಗಳೆದು ತಮ್ಮವು ಲಿಂಗಾಯತ ಮಠಗಳೆಂದು ಹೇಳುತ್ತಿರುವದು ಸರಿಯಲ್ಲವೆಂದು (ವಾವಾ.ಜೂ 30)ಹೇಳಿದ್ದಾರೆ.

ವೀರಶೈವ, ಲಿಂಗಾಯತ ಎರಡೂ ಬೇರೆ ಬೇರೆ ಎಂಬ ಭ್ರಮೆ ತೊಲಗುವುದು ಅಗತ್ಯವಾಗುವುದೆಂದೂ ಈ ಇಬ್ಬರು ಮಠಾಧೀಶರಿಗೆ ಅವರು ಬುದ್ಧಿವಾದ ಹೇಳಿದ್ದಾರೆ ಮಠಗಳು ಧರ್ಮಪ್ರಚಾರದ ಕೇಂದ್ರಗಳು, ಭಾರತದಲ್ಲಿ ಹಲವಾರು ಧರ್ಮಗಳಿವೆ . ಅವುಗಳಿಗೆ ಪ್ರತ್ಯೇಕ ಮಠ ಮತ್ತು ಗುರುಗಳು ಇರುತ್ತಾರೆ.

ತಾವಾಗಿಯೇ ಎಲ್ಲ ಧರ್ಮಗಳ ಸಾರವನ್ನು ಅರಿತು ತಮ್ಮ ತಿಳಿವಳಿಕೆಗೆ ಒಪ್ಪಿಗೆಯಾಗುವ ಧರ್ಮ ಸ್ವೀಕರಿಸುವವರು ಹೆಚ್ಚಿಲ್ಲ; ತಾಯಿ-ತಂದೆ, ಬಂಧು ಬಳಗದವರು

ಆಚರಿಸುವ ಧರ್ಮವೇ ತಮ್ಮ ಧರ್ಮವೆಂದು ಆಚರಿಸುವವರೇ ಶೇ.99ಅದರಲ್ಲೂ ತಾನು ಒಂದು ಧರ್ಮಕ್ಕೇ ಸೇರಿದವನಾಗಿರಬೇಕಾದರೆ ಆ ಧರ್ಮ ಸ್ವೀಕಾರದ ವಿಧಿ-ವಿಧಾನಗಳನ್ನು ಪೂರೈಸುವುದು ಅಗತ್ಯ. ಉದಾ:ಉಪನಯನ-ಜನಿವಾರ ಧಾರಣೆ, ಲಿಂಗಧಾರಣೆ, ಮುದ್ರೆ ಶಿಲುಬೆಧಾರಣೆ-ಧರ್ಮಗ್ರಂಥ ಸ್ವೀಕರಿಸಿ ಪ್ರತಿಜ್ಞೆ ಮಾಡುವುದು.

ಆದರೆ ಹಿಂದುಧರ್ಮಕ್ಕೆ ಸೇರಿದವರು ಎಂದು ಕೊಳ್ಳಲು ಯಾವ ಕಟ್ಟುಪಾಡುಗಳು ಇರುವುದಿಲ್ಲ .ಹಿಂದೂ ಧರ್ಮ ಎಂದರೆ ಮುಖ್ಯವಾಗಿ ನಾಲ್ಕು ವಿಭಾಗಗಳನ್ನು ಕಡ್ಡಾಯವಾಗಿ ಒಪ್ಪಲೇಬೇಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ಕರೆಯಲ್ಪಡುತ್ತಾರೆ. ಅವರಿಗೆ ಧರ್ಮ ಸ್ವೀಕಾರದ ಅಧಿಕಾರವೇ ಇಲ್ಲವೆಂದು ಹಿಂದು ಧರ್ಮ ಗ್ರಂಥಗಳೇ ಹೇಳುತ್ತವೆ. ಬಹುತೇಕರು ಬಸವಣ್ಣನವರ ಉಪದೇಶ ವಚನಗಳನ್ನು ಬಹಳವಾಗಿ ಒಪ್ಪಿಕೊಳ್ಳುತ್ತಾರೆ ಮತ್ತು ಬಸವ ಧರ್ಮ ಸ್ವೀಕರಿಸಲು ಸಿದ್ಧರಾಗಿರುವುದು ಕಂಡುಬರುತ್ತದೆ.

ಇಂಥ ಸಂದರ್ಭದಲ್ಲಿ ಈ ದೇಶದ ಬಹುಸಂಖ್ಯಾತರಾದ ಶೂದ್ರರೆಂದು ಕರೆಯಲ್ಪಡುವವರಿಗೆ ಒಂದು ಧರ್ಮ ಸ್ವೀಕರಿಸುವ ಸದವಕಾಶ ಕಲ್ಪಿಸಿಕೊಡುವ ಮಠ ಮತ್ತು ಗುರುವಿನ ಅಗತ್ಯ ತುರ್ತು ಇದೆ. ಆದ್ದರಿಂದ ಈಗ ಯಾವ ಮಠಕ್ಕೆ ಯಾವ ಭ್ರಮೆ ಬಿಡಬೇಕು ಎನ್ನುವ ಬಗ್ಗೆ ಹೇಳುವದಕ್ಕಿಂತ ಯಾವ ಮಠ ಮತ್ತು ಗುರುಗಳು ಮಹಾತ್ಮ ಬಸವೇಶ್ವರರ ಉಪದೇಶ ವಚನಗಳನ್ನು ಸಂಪೂರ್ಣ ಸ್ವೀಕರಿಸಲು ಸಿದ್ಧರಿದ್ದಾರೆಂಬುದನ್ನು ಚಿದಾನಂದ ಮೂರ್ತಿ ಅವರಂಥ ವಿದ್ವಾಂಸರು ತಿಳಿಸಿಕೊಟ್ಟರೆ ಬಹು ಸಂಖ್ಯಾತ ಮುಗ್ಧ ಭಕ್ತ ಶಿಷ್ಯರಿಗೆ ಸಹಾಯ ಮಾಡಿದಂತಾಗುತ್ತದೆ. ವೀರಶೈವ - ಲಿಂಗಾಯತ ಎಂಬುದು ಹಿಂದೂ ಧರ್ಮದ ಒಂದು ಅಂಗವೇ ಅಥವಾ ಸ್ವತಂತ್ರ ಧರ್ಮವೇ?ಎಂಬುದೂ ಸಹ ಸ್ಪಷ್ಟಪಡಿಸಬೇಕಾಗಿದೆ.ಈ ಬಗೆಗೆ ಚಿಮೂ ಏನು ಹೇಳುತ್ತಾರೆ?

(ಪ್ರಜಾವಾಣಿ)

ಹೆಚ್. ಗಣಪತಿಯಪ್ಪ
ವಡ್ನಾಲ, ಸಾಗರ ತಾ.

ಲಿಂಗಾಯತ ಸ್ವತಂತ್ರ ಧರ್ಮ

\- ಮಾತಾಜಿ

ಶರಣ. ಹೆಚ್.ಗಣಪತಿಯಪ್ಪ, ವಡ್ನಾಲ, ಸಾಗರ ತಾಲ್ಲೋಕು ಇವರು ಬರೆದ ಒಂದು ಪತ್ರವು ಪ್ರಜಾವಾಣಿಯ ವಾಚಕರ ವಾಣಿಯಲ್ಲಿ ದಿ. 07-7-09ರಂದು ಪ್ರಕಟಗೊಂಡಿದೆ. ವೈಚಾರಿಕವೂ, ಅರ್ಥಗರ್ಭಿತವೂ ಆದ ಪತ್ರದಲ್ಲಿಶ್ರೀ ಗಣಪತಿಯಪ್ಪನವರು ಮಹತ್ವಪೂರ್ಣವಾದ ವಿಷಯ ಪ್ರಸ್ತಾಪಿಸಿ, ಒಂದು ಅಭಿಪ್ರಾಯವನ್ನು ನೀಡಿದ್ದಾರೆ ಮತ್ತು ಒಂದು ಪ್ರಶ್ನೆಯನ್ನು ಕೇಳಿದ್ದಾರೆ.

ಹಿಂದು ಧರ್ಮದ ಸಮಾಜ ಶಾಸ್ತ್ರದ ಪ್ರಕಾರ ವರ್ಣಗಳು ನಾಲ್ಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ಶೂದ್ರನಿಗೆ ಧರ್ಮ ಸಂಸ್ಕಾರವನ್ನು ಪಡೆಯಲು ಅವಕಾಶವಿಲ್ಲ. ಇನ್ನು ಪಂಚಮ ವರ್ಣವಾದ ದಲಿತ (ಅಸ್ಪೃಶ್ಯ)ರಂತೂ ದಯನೀಯ ಸ್ಥಿತಿ ಹೊಂದಿರುವರು. ಅಂಥ ಶ್ರದ್ಧೆಯ ಶೂದ್ರರು ಮತ್ತು ದಲಿತರು ಚಿಂತನೆಯನ್ನೇ ಮಾಡಲು ಹೋಗದೆ ನೆಮ್ಮದಿಯಿಂದ ಇರುವರು. ಚಿಂತನ ಶಕ್ತಿ ಇರುವವರು ಈ ಬಗ್ಗೆ ಗಂಭೀರವಾಗಿ ಆಲೋಚಿಸುವರು. ಧಾರ್ಮಿಕ ಅಭೀಪ್ಸೆ ಇರುವವರು ಒಂದು ಧರ್ಮದ ಆಶ್ರಯ ಬೇಕು ಎಂದು ಹಂಬಲಿಸುವರು.

ಇಂಥ ಚಿಂತನಶೀಲರಿಗೆ ಗಣಪತಿಯಪ್ಪನವರು ಹೇಳುವಂತೆ ಬಸವ ಧರ್ಮವು ಬಹಳ ಮೆಚ್ಚುಗೆಯಾಗುವುದು. ಕ್ರಾಂತಿ ಪುರುಷ ಬಸವಣ್ಣನವರ ಸಂದೇಶಗಳು ಬಹಳ ಹಿಡಿಸುತ್ತವೆ. ಮಡಿವಂತ ಲಿಂಗಾಯತರ ಭೇದ ಬುದ್ಧಿಯನ್ನು ಇಷ್ಟಪಡದವರು ಸಹ ಧರ್ಮಪಿತ ಬಸವಣ್ಣನವರು ಆರಾಧಿಸುವರು. ಹೀಗಿರುವಾಗ ಪಂಚ ಪೀಠಾಧೀಶರನ್ನೇ ಒಂದು ಮಾದರಿ ಎಂದು ಇರಿಸಿಕೊಂಡು ವೀರಶೈವವನ್ನು ಅರ್ಥಮಾಡಿಕೊಂಡರೆ ಅದು ಒಂದು ಮತಾಂಧ, ವೈದಿಕ ಶೈವ ಮಿಶ್ರಿತ ಪಂಥ, ಪುರೋಹಿತಶಾಹಿ, ಆಡಂಬರದ ಪ್ರತೀಕ ಎಂದು ಅನ್ನಿಸದೆ ಇರದು. ವಚನ ಸಾಹಿತ್ಯದಲ್ಲಿ ಪ್ರತಿಪಾದಿತವಾದ ಲಿಂಗಾಯತ ಧರ್ಮವು ಸರಳತೆ, ಸಮಾನತೆ, ಔದಾರ್ಯ, ಕಾಯಕ ಪ್ರಜ್ಞೆ ಮುಂತಾದ ಮೌಲ್ಯಗಳಿಂದ ಕೂಡಿದ ಧರ್ಮ ಎನ್ನಿಸದಿರದು. ಮಡಿವಂತ ಲಿಂಗಾಯತರು (ವೀರಶೈವ ವಾದಿಗಳು) ಅನ್ಯ ಜಾತಿಯವರನ್ನು ಆದರದಿಂದ ಕಾಣದೆ ಇದ್ದರೂ ಬಸವ ತತ್ವವನ್ನು ತಿಳಿದುಕೊಂಡ ಲಿಂಗಾಯತರು ಎಲ್ಲರನ್ನೂ ಆದರ ಭಾವದಿಂದ ಕಾಣುವರು.

ಗುರು ಬಸವಣ್ಣನವರು ಕೊಟ್ಟ ಲಿಂಗಾಯತವು ಒಂದು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮ. ಅದು ವೈಚಾರಿಕತೆಯ ಮೇಲೆ ನಿಂತುದು. ಲಿಂಗಾಯತವು ಹಿಂದು ಧರ್ಮದೊಳಗಣ ಒಂದು ಜಾತಿ ಅಥವಾ ಮತ ಅಥವಾ ಪಂಥವಲ್ಲ. ಡಾ|| ಚಿ.ಮೂ. ಲಿಂಗಾಯತ ಪಂಥ ಎಂದು ಬಳಸುವಲ್ಲಿ ಕುತಂತ್ರವಿದೆ. ಲಿಂಗಾಯತ ಧರ್ಮವನ್ನು ಹಿಂದೂ ಧರ್ಮದೊಳಗಣ ಒಂದು ಅಂಗವಾಗಿ, ಪಂಥವಾಗಿ ಮಾಡುವ ಧೂರ್ತ ಸಂಚಿದೆ. ಇಲ್ಲಿ ವೈಯಕ್ತಿಕ ವಿಷಯ ಪ್ರಸ್ತಾಪಿಸುವುದು ಸಮಂಜಸವಲ್ಲ; ಆದರೂ ವೈಯಕ್ತಿಕ ಜೀವನವು ವ್ಯಕ್ತಿಯ ವಿಚಾರಶೈಲಿಯ ಮೇಲೆ ಪ್ರಭಾವ ಬೀರುವುದರಿಂದ ಹೇಳಲೇಬೇಕಾಗಿದೆ. ಅವರ ಪತ್ನಿ ಹುಟ್ಟು ಬ್ರಾಹ್ಮಣರಿರುವುದರಿಂದ ವೈಚಾರಿಕವಾಗಿ ಡಾ|| ಚಿ.ಮೂರನ್ನು ಬ್ರಾಹ್ಮಣೀಕರಿಸಿದ್ದಾರೆ. ವೈದಿಕ ಧರ್ಮದಲ್ಲಿ ದ್ವಿಜೇತರರಿಗೆ ಜನಿವಾರಧಾರಣೆ ಇಲ್ಲದಿರುವುದರಿಂದ ಡಾ|| ಚಿ.ಮೂ ಜನಿವಾರ ಹಾಕದೆ ಶೂದ್ರರಾಗಿಯೇ ಉಳಿದಿದ್ದಾರೆ. ಇನ್ನು ಲಿಂಗಧಾರಣೆಯೂ ಇಲ್ಲದ್ದರಿಂದ ಭವಿಯೂ ಆಗಿದ್ದಾರೆ. ಆದ್ದರಿಂದ "ಗದಗ್, ಚಿತ್ರದುರ್ಗ ಶ್ರೀಗಳಿಗೆ ವೀರಶೈವರಲ್ಲವೆಂದು ಹೇಳುವ ಹಕ್ಕು ಇಲ್ಲ" ಎಂದು ಹಿತೋಪದೇಶ ಮಾಡುವ, ಲಿಂಗಾಯತ ಧರ್ಮ ಕುರಿತು ಮಾತನಾಡುವ ನೈತಿಕ ಅರ್ಹತೆಯನ್ನು ಚಿ.ಮೂ ಕಳೆದುಕೊಂಡಿದ್ದಾರೆಂದು ಹೇಳುವುದು ಅನಿವಾರ್ಯವಾಗಿದೆ.

ಕೆಲವೇ ವರ್ಷಗಳ ಹಿಂದೆ ಒಬ್ಬ ಲೇಖಕ - ಸಂಶೋಧಕರು ವೀರಶೈವ ಮಠಗಳು ಕುರಿತು ಒಂದು ಮಹಾಪ್ರಬಂಧವನ್ನು ರಚಿಸುತ್ತಿರುವುದಾಗಿಯೂ ನಮ್ಮ ಸಂಸ್ಥೆಯ ಹುಟ್ಟು -ಬೆಳವಣಿಗೆ ಕುರಿತು ಮಾಹಿತಿ ಕಳಿಸಬೇಕೆಂದು ಕೋರಿ ಪತ್ರ ಬರೆದಿದ್ದರು. ನಮ್ಮದು ವೀರಶೈವ ಮಠವಾಗದೆ ಲಿಂಗಾಯತ ಮಠವಾದ್ದರಿಂದ ವೀರಶೈವ ಮಠಗಳ ಸಾಲಿನಲ್ಲಿ ನಮ್ಮದು ಸೇರುವುದು ಬೇಡವೆಂದು ನಾನು ಯಾವ ಮಾಹಿತಿಯನ್ನು ಕೊಡಲಿಲ್ಲ. ಈಗೊಂದು ಪ್ರಶ್ನೆಯನ್ನು ನೀವು ಕೇಳಬಹುದು. "ಆ ಲೇಖಕರಿಗೆ ವೀರಶೈವ - ಲಿಂಗಾಯತ ಈ ಎರಡರ ವ್ಯತ್ಯಾಸವನ್ನು ನೀವು ತಿಳಿಸಬಹುದಿತ್ತಲ್ಲ. ಆಗ ಅವರು ತಮ್ಮ ತಪ್ಪು ಕಲ್ಪನೆಯನ್ನು ಹೋಗಲಾಡಿಸಿಕೊಳ್ಳುತ್ತಿದ್ದರು" ಎಂದು. ಆ ವ್ಯಕ್ತಿಯ ಹೆಸರು, ಅಡ್ಡಹೆಸರು ನೋಡಿಯೇ ನಾವು ಕೆಲವು ನಿರ್ಧಾರ ತೆಗೆದುಕೊಳ್ಳಬಹುದು. ಏಕೆಂದರೆ ನಮ್ಮ ದೇಶದಲ್ಲಿ ಜಾತಿಯ ಅಭಿಮಾನದ ಮೇಲೆ ಸತ್ಯವು ನಿಶ್ಚಯಿಸಲ್ಪಡುತ್ತದೆ. ಡಾ|| ಚಿದಾನಂದ ಮೂರ್ತಿ, ಡಾ|| ಸಾ.ಶಿ. ಮರುಳಯ್ಯ, ಡಾ|| ಶಿವಕುಮಾರ ಸ್ವಾಮಿ, ಷಣ್ಮುಖಯ್ಯ ಅಕ್ಕೂರಮಠ, ಡಾ|| ವೃಷಭೇಂದ್ರ ಸ್ವಾಮಿ-ಹೀಗೆ ಹೆಸರಿನ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಸದ್ಯ ಪತ್ರಿಕೆಯಲ್ಲಿ ಸದಾ ಸುದ್ದಿ ಮಾಡುತ್ತ ಜೀವಂತವಾಗಿರಲು ಬಯಸಿ ವೀರಶೈವಕ್ಕೆ ಲಿಂಗಾಯತದ ಆಕ್ಸಿಜನ್ ಆಪರೇಟಸ್ ಮೂಲಕ ಉಸಿರು ತುಂಬಲು ಹೆಣಗಾಡುತ್ತಿರುವವರು ಡಾ|| ಚಿ.ಮೂ ಮಾತ್ರ. ಬೌದ್ಧಿಕ ಪ್ರಾಮಾಣಿಕತೆ ಎನ್ನುವುದು ಲಿಂ. ಶರಣ.ಎಸ್.ಎಸ್.ಭೂಸನೂರು ಮಠ (ವಚನ ಸಾಹಿತ್ಯ ಸಂಗ್ರಹದ ಸಂಪಾದಕರು. ಶೂನ್ಯ ಸಂಪಾದನೆಯ ಪರಾಮರ್ಶೆಯ ಲೇಖಕರು) ಅಂಥವರ ಕಾಲಕ್ಕೇ ಮಾಯವಾಗಿದೆ. ಈ ಹಿನ್ನೆಲೆ ಅರಿತು ನಾನು "ವೀರಶೈವ ಮಠಗಳು" ಕೃತಿಯ ಲೇಖಕರಿಗೆ ಉತ್ತರಿಸುವ ಗೋಜಿಗೆ ಹೋಗಲಿಲ್ಲ.

ಲಿಂಗಾಯತ ಮಠಗಳು

ಡಾ|| ಚಿ.ಮೂ ಅವರ ಒಂದು ಪತ್ರ ಪ್ರಜಾವಾಣಿಯ ದಿ. 30-6-2009ರ ಸಂಚಿಕೆಯ ವಾಚಕರ ವಾಣಿ ವಿಭಾಗದಲ್ಲಿ ಪ್ರಕಟಗೊಂಡಿದೆ. ನಾಡಿನ ಎಲ್ಲ ಪ್ರಮುಖ ಪತ್ರಿಕೆಗಳಲ್ಲೂ ಬಂದಿದೆ ಎಂದು ಕೇಳಿದ್ದೇನೆ. ಅದನ್ನು ಕಲ್ಯಾಣಕಿರಣದಲ್ಲೂ ಇದೇ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. "ಗದಗಿನ ಶ್ರೀ ತೋಂಟದಾರ್ಯ ಸಂಸ್ಥಾನ ಮತ್ತು ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಸಂಸ್ಥಾನಗಳ ಪೂಜ್ಯರು ಈಚಿನ ಕೆಲವು ವರ್ಷಗಳಲ್ಲಿ ತಮ್ಮವು ಲಿಂಗಾಯತ ಮಠಗಳೆಂದೂ ವೀರಶೈವ ಮಠಗಳು ಅಲ್ಲವೆಂದೂ ಹೇಳುತ್ತಿದ್ದಾರೆ" ಎಂದು ಆಕ್ಷೇಪಿಸಿದ್ದಾರೆ.

ಎಚ್ಚೆತ್ತುಕೊಂಡು ಈಗಲಾದರೂ ಸತ್ಯವನ್ನು ಹೇಳುತ್ತಿದ್ದಾರಲ್ಲ ಎಂದು ಹೆಮ್ಮೆಪಡುವ ಬದಲು ಆಕ್ಷೇಪಿಸುತ್ತಿರುವುದು ಖಂಡನಾರ್ಹ. 1973ರವರೆಗೆ ನಾನೂ ಸಹ ನಮ್ಮ ಧರ್ಮ ವೀರಶೈವ ಎಂಬ ಭ್ರಾಂತಿಗೊಳಗಾಗಿದ್ದು ತಮಿಳುನಾಡಿನ ವೀರಶೈವ ಮಠ ಮತ್ತು ಆ ಮಠಗಳ ಸ್ವಾಮಿಗಳನ್ನು ನೋಡಿದಾಗ ಎಚ್ಚರಗೊಂಡು ಚಿಂತನೆ ಮಾಡಲಾರಂಭಿಸಿದೆ. ಅಂದಿನಿಂದ ಪುಸ್ತಕ, ಲೇಖನಗಳ

ಮೂಲಕ ಸಾರಿಸಾರಿ ಹೇಳಿದರೂ ಕೆಲವು ಸ್ವಾಮಿಗಳ ಬಾಯಿಯಿಂದ, ಸಾಹಿತಿಗಳ ಲೇಖನಿಯಿಂದ ವೀರಶೈವ ತೊಲಗಲೇ ಇಲ್ಲ. ಅಂತೂ ಇತ್ತೀಚಿನ ದಿನಗಳಲ್ಲಿ ಮೇಲೆ ಉಲ್ಲೇಖಿಸಿದ ಮಠಾಧೀಶರು, ಇಳಕಲ್ ಶ್ರೀಗಳು, ನಾಗನೂರು ಶ್ರೀಗಳು ಮುಂತಾದ ವಿರಕ್ತ ಮಠಗಳ ಪೂಜ್ಯರು, ಡಾ|| ಎಂ.ಎಂ ಕಲಬುರ್ಗಿ, ಡಾ|| ಎನ್.ಜಿ.ಮಹಾದೇವಪ್ಪ ಮುಂತಾದ ಲೇಖಕರು, ಸಂಶೋಧಕರು ಲಿಂಗಾಯತ ಧರ್ಮ ಕುರಿತು ಗಟ್ಟಿಯಾಗಿ ಮಾತನಾಡಲು ತೊಡಗಿದಾಗ ಎಷ್ಟೋ ಸಮಾಧಾನವೆನಿಸ ತೊಡಗಿತು. ಗದಗಿನ ಶ್ರೀಗಳು ವೀರಶೈವ ಅಧ್ಯಯನ ಕೇಂದ್ರವನ್ನು ಲಿಂಗಾಯತ ಅಧ್ಯಯನ ಕೇಂದ್ರ ಎಂದು ಪರಿವರ್ತಿಸಿದಾಗ ನಮಗೆ ವರ್ಣಿಸಲಾರದಷ್ಟು ಸಂತೋಷವಾಯಿತು. ಶ್ರೀ ತೋಂಟದ ಸಿದ್ಧಲಿಂಗ ಯತಿಗಳ ಉಲ್ಲೇಖ ಮಾಡಿ ಅವರ ವಚನಗಳಲ್ಲಿ ವೀರಶೈವ ಪಂಥದ ಪ್ರಸ್ತಾಪ ಸ್ಪಷ್ಟವಾಗಿದೆ ಎಂದು ಡಾ||ಚಿ.ಮೂ ತಿಳಿಸಿದ್ದಾರೆ. ಜೂನ್ ಕಲ್ಯಾಣಕಿರಣದಲ್ಲಿನ ಚಂದ್ರಶೇಖರಯ್ಯನವರ ಲೇಖನವನ್ನು ಓದಿ ಚಿ.ಮೂರ ಪತ್ರ ಓದಬೇಕು. ಕಲ್ಯಾಣ ಕ್ರಾಂತಿಯ ಫಲಶ್ರುತಿಯಾಗಿ ಶರಣರು ಚದುರಿದರು. ವಚನ ಸಾಹಿತ್ಯ ಗವಿಗಳಲ್ಲಿ ಆಶ್ರಯ ಪಡೆಯಿತು. ಲಿಂಗಾಯತ ಧರ್ಮ ಅಂಧಕಾರ ಯುಗವನ್ನು ಪ್ರವೇಶಿಸಿದಾಗ ಆಂಧ್ರ ಮೂಲದ ಜನಿವಾರಧಾರಿಗಳು ಶಿವದಾರ ಕಟ್ಟಿಕೊಂಡು ಒಳಸೇರಿ ಲಿಂಗಾಯತ ಸಮಾಜದ ಶಿಶುವಿನ ಕೈಕಾಲು ತಿರುಚಿ ವಿಕೃತಗೊಳಿಸಿದರು. ಬಸವ ಪುರಾಣಗಳು, ಚನ್ನಬಸವ ಪುರಾಣ -ಇತ್ಯಾದಿ ಮೂಲಕ ವೀರಶೈವವು ಸಾಹಿತ್ಯದ ದ್ವಾರಾ ಲಿಂಗಾಯತ ಸಮಾಜದ ಒಳಹೊಕ್ಕಿತು. ಹೀಗಾಗಿ ಶ್ರೀ ಸಿದ್ಧಲಿಂಗೇಶ್ವರರು ವೀರಶೈವ ಪದ ಬಳಸಿದುದರಲ್ಲಿ ಆಶ್ಚರ್ಯವೇನಿದೆ? 1876ರವರೆಗೆ ಗುರು ವಿರಕ್ತರು, ವಿರಕ್ತರು -ಪಂಚಾಚಾರ್ಯರು ಎಂಬ ಭೇದವಿಲ್ಲದೆ ಎಲ್ಲರೂ ಲಿಂಗಾಯತರೇ ಆಗಿದ್ದರು ಎಂದು ಗೆಜೆಟಿಯರ್‌ಗಳ ಉಲ್ಲೇಖದ ಮೂಲಕ ಎಂ.ಎಸ್.ಚಂದ್ರಶೇಖರಯ್ಯನವರು ಅಧಿಕೃತವಾಗಿ ಬರೆದಿದ್ದಾರೆ. ಅಂದಾಗ 1720ರಲ್ಲಿ ರಚಿತವಾದ "ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ" ಮರಾಠಿ ಕೃತಿಯಲ್ಲಿ ಸೋದೆ ಸಂಸ್ಥಾನದ ಮಧುಲಿಂಗ ನಾಯಕನು ತನ್ನ ಮಗಳು ಮಲ್ಲಮ್ಮಾಜಿಯ ಮದುವೆಗೆ ಲಿಂಗಾಯತ ಧರ್ಮದ ಪಂಚಸಿಂಹಾಸನಾಧೀಶರನ್ನು ಆಹ್ವಾನಿಸಿ ಗೌರವಿಸಿದನೆಂದಿದೆ ಎಂದು ಬರೆದಿರುವುದರಲ್ಲಿ ವಿಶೇಷವೇನಿದೆ? ಡಾ|| ಚಿ.ಮೂ ಆಧಾರಗಳನ್ನು ಅರ್ಧಂಬರ್ಧ ಉಲ್ಲೇಖಿಸಿ ಸತ್ಯವನ್ನು ತಿರುಚುವುದರಲ್ಲಿ ಸಿದ್ಧಹಸ್ತರು. ಪಂಚ ಪೀಠಗಳ ಮೂಲ ಸ್ಥಾಪಕರಾದ ರುದ್ರಮುನಿ ದೇವರು (ರೇವಣಸಿದ್ಧರ ಮಗ), ಮರುಳಸಿದ್ಧರು -ಇವರು ಶರಣ ಪರಂಪರೆಯವರೇ! ಮೂಲತಃ ಲಿಂಗಾಯತ ಶರಣ ಪರಂಪರೆಯವರಾದ ಪಂಚ ಪೀಠಗಳವರು ಕಾಶೀನಾಥ ಶಾಸ್ತ್ರಿಗಳ ಕಾಲದಿಂದ ಆದಿ ಪಂಚಾಚಾರ್ಯರನ್ನು ಹುಟ್ಟು ಹಾಕಿ ವೀರಶೈವರಾಗಿ, ಬಸವ ತತ್ವದ ವಿರೋಧಿಗಳಾಗಿದ್ದಾರೆಂಬುದು ಪರಮ ಸತ್ಯ.

ಲಿಂಗಾಯತ ಮತ್ತು ವೀರಶೈವ ಹೇಗೆ ಸಮಾನವಾಗಲು ಸಾಧ್ಯ?

1. ಲಿಂಗಾಯತವು ಕ್ರಾಂತಿಪುರುಷ ಬಸವಣ್ಣನವರನ್ನು ಆದಿಗುರುವೆಂದು, ಸ್ಥಾಪಕರೆಂದು ಒಪ್ಪುತ್ತದೆ. ಆಂಧ್ರ ವೀರಶೈವವು ಶಿವನನ್ನು, ತಮಿಳುನಾಡಿನ ವೀರಶೈವ ಮಾಣಿಕವಾಚಕರ್ ಮುಂತಾದವರನ್ನು ಆದಿ ಎಂದು ಒಪ್ಪುತ್ತದೆ. ಕರ್ನಾಟಕದ ಪಂಚ ಪೀಠಗಳವರು ಮಾತ್ರ 5 ಜನ ಕಾಲ್ಪನಿಕ ಆಚಾರ್ಯರನ್ನು ಸೃಷ್ಟಿ ಮಾಡಿಕೊಂಡಿದ್ದಾರೆ.
2. ಲಿಂಗಾಯತವು ವಚನ ಶಾಸ್ತ್ರಾಧಾರಿತ ಧರ್ಮ. ವೀರಶೈವವು ವೇದಾಗಮಾಧಾರಿತ ಪಂಥ
3. ಲಿಂಗಾಯತವು ಸ್ವತಂತ್ರ ಧರ್ಮ, ವೀರಶೈವವು ಹಿಂದು ಶೈವದೊಳಗಣ ಒಂದು ಪಂಥ
4. ಲಿಂಗಾಯತವು ಏಕದೇವೋಪಾಸಕ ಧರ್ಮ, ವೀರಶೈವವು ಬಹುದೇವತೋಪಾಸಕ ಪಂಥ
5. ಲಿಂಗಾಯತ ಧರ್ಮವು ಸಮಾನತೆ ಬೋಧಿಸುವ ಧರ್ಮವಾದರೆ ವೀರಶೈವವು ವರ್ಣಾಶ್ರಮಾಧಾರಿತ ಸಾಮಾಜಿಕ ವ್ಯವಸ್ಥೆಯನ್ನು ಒಪ್ಪುತ್ತದೆ.
6. ಲಿಂಗಾಯತ ಧರ್ಮದ ಆರಾಧ್ಯವಸ್ತು ಸೃಷ್ಟಿಕರ್ತನಾದ ಲಿಂಗದೇವ, ವೀರಶೈವದ ಆರಾಧ್ಯವಸ್ತು ಕೈಲಾಸಪತಿ ಶಿವ.
7. ತಮಿಳುನಾಡು, ಕೇರಳಗಳಲ್ಲಿರುವ ವೀರಶೈವರು ಶವವನ್ನು ಸುಡುವರು, ಕರ್ನಾಟಕದ ಲಿಂಗಾಯತರು ಶವವನ್ನು ಹೂಳುವರು.

(ಪುಟ 20ರಲ್ಲಿ ಮುಂದುವರಿದಿದೆ)

ಮಾದೇಶ್ವರ ಬೆಟ್ಟದಲ್ಲಿ ಇಷ್ಟಾರ್ಥ ಸಿದ್ಧಿ ಪೀಠ ರದ್ದು ಪಡಿಸಿ

ಧ್ಯಾನ ಪೀಠ ಎಂದು ಹೆಸರಿಡಲು ಒತ್ತಾಯ

ಮಾದೇಶ್ವರ ಬೆಟ್ಟವು ಕರ್ನಾಟಕದ ದಕ್ಷಿಣ ಭಾಗದ ಪೂರ್ವ ಘಟ್ಟಗಳ ಮಧ್ಯದಲ್ಲಿ ಕೊಳ್ಳೇಗಾಲದಿಂದ 80 ಕಿ.ಮೀ ದೂರದಲ್ಲಿರುವ ಒಂದು ಪುಣ್ಯ ಸ್ಥಳ. ಶ್ರೀ ಮಾದೇಶ್ವರರು ಲಿಂಗೈಕ್ಯರಾಗಿರುವ ಸ್ಥಾನವಾದ ಗದ್ದುಗೆ ಇರುವ ಪವಿತ್ರ ಕ್ಷೇತ್ರ. ಅದು ಮಾದೇಶ್ವರರ ಪಾದ ಧೂಳಿನಿಂದ ತಪೋನುಷ್ಠಾನಗಳಿಂದ ಪಾವನವಾದ ಮಹಾಕ್ಷೇತ್ರವೆಂದು ಪರಿಗಣಿತವಾದ ಜಾಗೃತ ಸ್ಥಾನ. ಅಂತಹ ಕ್ಷೇತ್ರದಲ್ಲಿ ಮಧ್ಯಪಾನ, ಮಾಂಸಾಹಾರ, ಪ್ರಾಣಬಲಿ, ಅನೈತಿಕ ಚಟುವಟಿಕೆಗಳು ನಿಷಿದ್ಧ. ಶ್ರೀ ಕ್ಷೇತ್ರವು ಅವರು ತಪಸ್ಸು ಮಾಡಿದ ತಪೋವನ, ತಪೋಭೂಮಿ, ಜಂಗಮಕ್ಷೇತ್ರ.

ಮಾದೇಶ್ವರರು ಶ್ರೀ ಶೈಲದ ಕಡೆಯಿಂದ ಬಂದು, ಸುತ್ತೂರಿನಲ್ಲಿದ್ದು ಕುಂತೂರಿಗೆ ಬಂದಾಗ, ಗುರು ಬಸವಣ್ಣನವರು ಸ್ಥಾಪಿಸಿ, ಅಲ್ಲಮಪ್ರಭುದೇವರ ಅಧ್ಯಕ್ಷತೆಯಿಂದ ಪ್ರಾರಂಭವಾದ ಶೂನ್ಯಪೀಠದ ಆರನೆಯ ಜಗದ್ಗುರುವಾಗಿ ಅಧಿಕಾರ ಹೊಂದಿದರು. ನಂತರ ಧರ್ಮ ಪ್ರಸಾರ ಕಾರ್ಯ ಮುಂದುವರಿಸಲು, ಶೂನ್ಯಪೀಠದ ಅಧಿಕಾರವನ್ನು 7ನೆಯ ಜಗದ್ಗುರು ನಿರಂಜನ ಸ್ವಾಮಿಯವರಿಗೆ ಅನುಗ್ರಹಿಸಿ, ಶಿಷ್ಯ ಸಂಗಪ್ಪನವರ ಜೊತೆ, ಏಳು ಮಲೆಯ ಮಧ್ಯದ ನಡುಮಲೆಗೆ ಬಂದರು. ಅಲ್ಲಿ ಧ್ಯಾನ, ತಪಸ್ಸು ಮಾಡಿ, ಆ ಕಾಡು ಜನರಿಗೆ ಅಹಿಂಸಾ ತತ್ವ ಹೇಳಿ, ಕೃಷಿ ಕಾಯಕ ಕಲಿಸಿ, ಅವರನ್ನು ಸಸ್ಯಾಹಾರಿಗಳನ್ನಾಗಿ ಪರಿವರ್ತಿಸಿ, ಅವರ ಉದ್ಧಾರಕ್ಕಾಗಿ ಸಾಲೂರು ಮಠ ಸ್ಥಾಪಿಸಿ, ದಾಸೋಹ ನಡೆಯಿಸಿ, ಅಷ್ಟಾವರಣ, ಪಂಚಾಚಾರ, ಷಟಸ್ಥಲ, ಲಿಂಗವಂತ ಧರ್ಮ ತತ್ವಗಳನ್ನು ಉಪದೇಶಿಸಿ, ಸೋಲಿಗರು, ಕುರುಬರು, ಬೇಡರಿಗೆಲ್ಲ ಲಿಂಗಧಾರಣೆ ಮಾಡಿಸಿದರು. ಒಟ್ಟಿನಲ್ಲಿ ಅವರು ಬಸವ ಪಥದಲ್ಲಿ ನಡೆದ ಶುದ್ಧ ಶರಣ ಮಾರ್ಗಿಗಳೂ, ಕ್ರಾಂತಿಕಾರಿ ಧರ್ಮ ಪ್ರಚಾರಕರೂ, ಮಹಾಮಹಿಮರೂ, ಐತಿಹಾಸಿಕ ಪುರುಷರು, ವೈರಾಗ್ಯ ಸಂಪನ್ನರೂ, ಕನ್ನಡಿಗರೂ ಆಗಿದ್ದಾರೆ. ಅಲ್ಲಮ ಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಅನಾದಿಗಣನಾಥ, ಆದಿಗಣೇಶ್ವರರಂತಹ ಉಜ್ವಲ ಗುರು ಪರಂಪರೆಯನ್ನು, ನಿರಂಜನ ಸ್ವಾಮಿ, ಜ್ಞಾನಾನಂದ ಸ್ವಾಮಿಗಳಂತಹ ಶಿಷ್ಯ ಪರಂಪರೆಯನ್ನೂ ಹೊಂದಿದವರು.

ಆಗ ಈ ಭಾಗಕ್ಕೆ ಬೇಡಗಂಪಣ ರಾಜ್ಯ ಎಂಬ ಹೆಸರಿತ್ತು. ಅದಕ್ಕೆ ರಾಯಣ್ಣ ರಾಜ. ಆಲಂಬಾಡಿ ಅದರ ರಾಜಧಾನಿ, ರಾಯಣ್ಣನ ಮಗಳು ದೇವಕಿ ಅತ್ಯಂತ ಸುಂದರಿ. ಅವಳನ್ನು ಬಯಸಿ ತಮಿಳುನಾಡಿನ ರಾಜನೊಬ್ಬನು ಬರಲು, ಮಾದೇಶ್ವರರ ದಿವ್ಯ ಕೃಪೆಯಿಂದ ರಾಯಣ್ಣನು ಕೊಂಗರ ಸೈನ್ಯವನ್ನು ಹಿಮ್ಮೆಟ್ಟಿಸಿ, ದೇವಕಿಯನ್ನು ರಕ್ಷಿಸಿದನು. ಈ ಜಯವು ಮಾದೇಶ್ವರರ ಮಹಿಮೆಯನ್ನು ಇನ್ನೂ ಹೆಚ್ಚಿಸಿತು. ಲಿಂಗಧಾರಿಗಳಾದ ಕುರುಬರ ಬಿಲ್ಲಯ್ಯ, ಅವನ ಪತ್ನಿ ಅನ್ನಸಾಲಮ್ಮ, ಮಗ ಶೋಷಣ್ಣೊಡೆಯ, ಅವರ ವಂಶಸ್ಥರೇ ತಮ್ಮಡಿಗಳು. ದೇವಸ್ಥಾನಕ್ಕೆ ಸ್ವಲ್ಪ ದೂರದಲ್ಲಿ ದೇವರಹಳ್ಳಿ ಗ್ರಾಮವಿದ್ದು ಅಲ್ಲಿ ತಮ್ಮಡಿಗಳು ವಾಸವಾಗಿದ್ದು ಅವರೆಲ್ಲರೂ ಲಿಂಗಾಯತರಾಗಿದ್ದಾರೆ. ದೇವಸ್ಥಾನವು ಕೆಲವು ಶತಮಾನಗಳು ಸಾಲೂರು ಮಠದ ಸ್ವಾಮಿಗಳು ಮತ್ತು ದೇವಸ್ಥಾನದ ತಮ್ಮಡಿಗಳ ವಶದಲ್ಲಿತ್ತು. ಆದರೆ ಮಾದೇಶ್ವರರ ಗದ್ದಿಗೆಯನ್ನು ದೇವಸ್ಥಾನೀಕರಿಸಲಾಗಿದೆ. ಹೀಗಾಗಿ ಅವರ ಗುಡಿ ಒಂದು ಸ್ಥಾವರ ಕ್ಷೇತ್ರವಾಗಿ ಮಾದೇಶ್ವರರ ಬೋಧನೆಗೆ ಹೊರತಾದ ಆಚರಣೆ, ಉತ್ಸವಗಳನ್ನು ಹೊಂದಿದೆ.

ದೇವಸ್ಥಾನದ ಸುತ್ತಲೂ ಒಂದು ಕಲ್ಲು ಗೋಡೆ ಮಾತ್ರ ಇತ್ತೆಂದು, ಆಲಂಬಾಡಿ ಜುಂಜೇಗೌಡ ಗರ್ಭಗುಡಿ ಕಟ್ಟಿಸಿದರೆಂದು, ಬಂಡಳ್ಳಿಯ ಆಚಾರಿ ಮಾದೇಶ್ವರ ಲಿಂಗದ ಮುಂದೆ ವೃಷಭನನ್ನು ಸ್ಥಾಪಿಸಿದರೆಂದು, ಡಾ.ಬಿ. ಶಿವಮೂರ್ತಿ ಶಾಸ್ತ್ರಿಯವರು ಬರೆದ ಶ್ರೀ ಮಾದೇಶ್ವರ ಚರಿತ್ರೆ ಎಂಬ ಪುಸ್ತಕದಲ್ಲಿ ಹೇಳಿದೆ. ವೃಷಭ ಎಂದರೆ ಎತ್ತು, ಗೂಳಿ, ನಂದಿ. ಬಸವ, ಈಶ್ವರನ ವಾಹನ ಎಂಬ ಅರ್ಥಗಳಿದ್ದು ಎತ್ತು ಸಾಮಾನ್ಯ ಮಾನವನಿಗಿಂತಲೂ ಕೆಳಗಿನ ಸ್ತರದಲ್ಲಿರುವ

ಜೀವಿ. ಪ್ರಾಣಿ ಪೂಜೆಯು ಲಿಂಗಾಯತ ಧರ್ಮದಲ್ಲಿ ವರ್ಜ್ಯ. ಐತಿಹಾಸಿಕ ಪುರುಷ ಮಾದೇಶ್ವರರ ಗದ್ದುಗೆಯಲ್ಲಿ ನಾಲ್ಕು ಕಾಲಿನ ಎರಡು ಕೊಂಬಿನ ಒಂದು ಬಾಲದ ನಂದಿಯನ್ನು ಕೂರಿಸಿರುವುದು ಅವರಿಗೆ ಮಾಡುವ ಘೋರ ಅಪಚಾರ. ಮಾದೇಶ್ವರರು ಮಹಾತ್ಮರಾದರೆ ಎತ್ತು ವಿಚಾರಶೂನ್ಯ ಮೂಕ ಪ್ರಾಣಿ. ಮಾದೇಶ್ವರರು ಐತಿಹಾಸಿಕ ವ್ಯಕ್ತಿ ಎಂಬುದನ್ನು ತಿಳಿಯದೆ, ಮಾದೇಶ್ವರ ಪರಂಪರೆಯನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡದೆ, ದೇವಸ್ಥಾನಗಳಲ್ಲಿ ಸ್ಥಾಪಿಸುವಂಥ ಪೌರಾಣಿಕ ಹಿನ್ನೆಲೆಯ ವೃಷಭನನ್ನು, ಶರಣ ಪರಂಪರೆಯ ಮಾದೇಶ್ವರರು ಲಿಂಗೈಕ್ಯರಾಗಿರುವ ಸ್ಥಾನವಾದ ಗದ್ದುಗೆಯಲ್ಲಿ ಸ್ಥಾಪಿಸಿರುವುದು ಸರಿಯಲ್ಲ. ಹಾಗಾಗಿ ಗದ್ದುಗೆ ಶೈವಮಯವಾಗಿದೆ.

ದೇವಸ್ಥಾನ ಕಟ್ಟಿಸಿ, ವೃಷಭ ಸ್ಥಾಪಿಸಿ, ಗೋಪುರಗಳನ್ನು ನಿರ್ಮಿಸಿ, ಮೂರ್ತಿಗಳನ್ನು ಕೂರಿಸಿರುವುದರಿಂದ, ಬಹುಪಾಲು ಜನರು ಮಾದೇಶ್ವರ ಎಂದರೆ ಶಿವನ ಒಂದು ರೂಪ ಅಥವಾ ಅವತಾರ ಎಂದು ತಿಳಿದಿದ್ದಾರೆ. ಇದರಿಂದ ಅವರ ಗದ್ದುಗೆ ದೇವಸ್ಥಾನದಂತೆ ಒಂದು ಸ್ಥಾವರ ಕ್ಷೇತ್ರವಾಗಿ. ಅಲ್ಲಿ ಮಾದೇಶ್ವರರ ಪರಂಪರೆಗೆ ಹೊರತಾದ ಆಚರಣೆಗಳೇ ನಡೆಯುತ್ತಿವೆ. ಇಂತಹ ಆಚರಣೆಗಳ ಅವರೊಬ್ಬ ಲಿಂಗಾಂಗಯೋಗಿ, ಶರಣ ಪರಂಪರೆಯ ಮಹಾನುಭಾವಿ, ಸಮಾಜ ಸುಧಾರಕ ಧಾರ್ಮಿಕ ಪುರುಷ ಎಂಬ ಸಂಗತಿಗಳನ್ನು ಅನುಯಾಯಿಗಳಿಗೆ ತಿಳಿಸುವುದೇ ಇಲ್ಲ. ಹೀಗಾಗಿ ಗದ್ದುಗೆ ವೈದಿಕಮಯವಾಗಿದೆ.

ದೇವಸ್ಥಾನದ ಮಹಾದ್ವಾರದಲ್ಲಿರುವ ಗಣಪತಿಯನ್ನು ಮೈಸೂರಿನ ತಿಮ್ಮಣ್ಣಾಚಾರ್ ಎಂಬುವವರು 1930ರಲ್ಲಿ ಸ್ಥಾಪಿಸಿದರೆಂದು ಹೇಳಲಾಗಿದೆ. ಎಲ್ಲ ಕಾರ್ಯಕ್ರಮಗಳಿಗೆ ಪ್ರಾರಂಭದಲ್ಲಿ ಗಣಪತಿ ಪೂಜೆ, ಪ್ರಾರ್ಥನೆ ಮಾಡಬೇಕೆಂಬ ನಂಬಿಕೆ ಸಾಂಪ್ರದಾಯಿಕ ಹಿಂದುಗಳಲ್ಲಿರುವುದು ನಿಜ. ಆದರೆ ಅದು ಬಸವ ಪರಂಪರೆಯ ಮಾದೇಶ್ವರರಿಗೆ ಅನ್ವಯಿಸುವುದಿಲ್ಲ. ಏಕೆಂದರೆ, ಆಯಾ ಧರ್ಮದ ಗಣಪತಿ ಬೇರೆಬೇರೆ ಇರುತ್ತಾರೆ. ಗಣ ಎಂದರೆ ಸಮಾಜ, ಪತಿ ಎಂದರೆ ಒಡೆಯ, ಗಣಪತಿ ಎಂದರೆ ಇಲ್ಲಿ ಸಮಾಜದ ಒಡೆಯ ಎಂಬ ಅರ್ಥವಿದ್ದು, ಐತಿಹಾಸಿಕ ಪುರುಷ ಮಾದೇಶ್ವರರಿಗೂ, ವೈದಿಕ ಸಂಪ್ರದಾಯದ ಕಾಲ್ಪನಿಕ ದೈವ ಗಣಪತಿಗೂ ಯಾವುದೇ ಸಂಬಂಧವಿಲ್ಲ. ಆದ್ದರಿಂದ ಯಾವುದೇ ಕಾರ್ಯಗಳನ್ನು ಮಾಡುವಾಗ, ಮಾದೇಶ್ವರರ ಮೂಲ ಪರಂಪರೆಯವರಾದ ಆದಿ ಪ್ರಮಥ ಗುರು ಬಸವಣ್ಣನವರನ್ನು ಪೂಜಿಸಿ, ಸ್ತುತಿಸಿ, ಧ್ಯಾನಿಸಿ ಕಾರ್ಯಾರಂಭ ಮಾಡಬೇಕು. ಆದರೆ ಮಾದೇಶ್ವರ ಗದ್ದಿಗೆ - ಗರ್ಭಗುಡಿಯಲ್ಲೇ ಗಣಪತಿ ಇಡಲಾಗಿದೆ. ಗರ್ಭಗುಡಿಯ ದ್ವಾರದಲ್ಲಿ ಸಹ ಗಣಪತಿ ಕೆತ್ತಲಾಗಿದೆ. ಮುಖಮಂಟಪದಲ್ಲಿಯೂ ಗಣಪತಿ ಇದೆ. ಗಣಪತಿಗೆ ಬೆಳ್ಳಿಯ ಕವಚವನ್ನು ತೊಡಿಸಲಾಗಿದೆ. ಒಟ್ಟಿನಲ್ಲಿ ಮಾದೇಶ್ವರರ ಗದ್ದಿಗೆ ಗಣಪತಿಮಯವಾಗಿದೆ.

ಭಾರತದಲ್ಲಿ ಸಂಸ್ಕೃತವು ಮಡಿವಂತ ಭಾಷೆಯಾಗಿ ಪುರೋಹಿತರ ಸ್ವತ್ತಾಯಿತು. ದೇವರನ್ನು ಸಂಸ್ಕೃತ ಭಾಷೆಯಲ್ಲಿ ಮಾತನಾಡಿಸಬೇಕು ಆ ಭಾಷೆಯೇ ದೇವರಿಗೆ ಅರ್ಥವಾಗುವಂತಹದ್ದು ಎಂಬ ನಂಬುಗೆ ಕೆಲವರಲ್ಲಿತ್ತು. ದೇವರಿಗೆ ಕನ್ನಡವೂ ಅರ್ಥವಾಗುತ್ತದೆ ಎಂದು ಅವನನ್ನು ಕನ್ನಡದಲ್ಲೇ ಸ್ತುತಿಸಿ ಪ್ರಾರ್ಥಿಸಿ ಎಂದು ಕನ್ನಡಕ್ಕೆ ಪೂಜನೀಯ ಸ್ಥಾನ ಕೊಟ್ಟವರು ಬಸವಣ್ಣನವರು, ಶರಣ ಭಾಷೆಯೂ ಕೂಡ ಕನ್ನಡ. ಮೇಲಾಗಿ ಮಾದೇಶ್ವರರು ಸಹ ಕನ್ನಡಿಗರೇ. ಕನ್ನಡ ನಾಡಿನಲ್ಲಿ ಮೆರೆದು ಕರ್ನಾಟಕದ ಬೆಟ್ಟದಲ್ಲಿಯೇ ಲಿಂಗೈಕ್ಯರಾಗಿರುವುದು ಕನ್ನಡ ನಾಡಿನ ಪುಣ್ಯ ವಿಶೇಷ. ಆದರೆ ಇಂದು ಅದೇ ಕ್ಷೇತ್ರದಲ್ಲಿ ಸಂಸ್ಕೃತ ಪಾಠಶಾಲೆಯಾಗಿ, ಸಂಸ್ಕೃತದಲ್ಲಿ ಶೈವಾಗಮದಂತೆ ಎಲ್ಲ ಪೂಜೆಗಳನ್ನು ಮಾಡಲಾಗುತ್ತಿದೆ. ಹಾಗಾಗಿ ದೇವಸ್ಥಾನದ ಪೂಜಾ ವಿಧಾನ ಸಂಸ್ಕೃತಮಯವಾಗಿದೆ.

ಇಷ್ಟೆಲ್ಲ ಸಾಲದೆಂಬಂತೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ 11-2-08ರಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಯವರು ಇಲ್ಲಸಲ್ಲದ ಬಲಿಪೀಠ ಪ್ರತಿಷ್ಠಾಪಿಸಿದರು. ಪ್ರಾಣಿ ಬಲಿ ಕೊಡದೇ ಇದ್ದರೂ ಬಲಿ ಪದ ಬಳಸಿರುವುದೇ ತಪ್ಪು. ಬಲಿ ಎಂದರೆ ಆಹುತಿಯಾಗಿ ಅರ್ಪಿಸುವ ಜಗಲಿ ಎಂದೂ ಅರ್ಥವಾಗುವುದರಿಂದ ಅದು ಪ್ರಾಣಬಲಿ ಕೊಡಲು ಪ್ರೇರೇಪಣೆಯಾಗುತ್ತದೆ. ಆದ್ದರಿಂದ ಬಲಿಪೀಠ ಹೆಸರನ್ನು ಧ್ಯಾನಪೀಠವೆಂದು ಬದಲಾಯಿಸ

ಬೇಕೆಂದು 25-2-08ರಂದು ಪತ್ರ ಬರೆದೆ. ಈ ನನ್ನ ಸಲಹೆ ಬಗ್ಗೆ, ಧಾರ್ಮಿಕ ಚಿಂತಕರೊಡನೆ ಚರ್ಚಿಸಿ, ಅವರ ಸಲಹೆ ಪಡೆದು, ಅದನ್ನು ದೇವಾಲಯ ಸಮಿತಿ ಸಭೆಯಲ್ಲಿಟ್ಟು, ಸೂಕ್ತ ಅಭಿಪ್ರಾಯ ಪಡೆದು, ಭಕ್ತಾದಿಗಳೆಲ್ಲರಿಗೂ ಒಪ್ಪಿಗೆಯಾಗುವಂತಹ ನಾಮಾಂಕಿತ ಮಾಡುವುದಾಗಿ ಕಾರ್ಯ ನಿರ್ವಾಹಕ ಅಧಿಕಾರಿಯವರು 16-3-08ರಲ್ಲಿ ನನಗೆ ಪತ್ರದ ಮೂಲಕ ತಿಳಿಸಿದ್ದರು. ಖುದ್ದಾಗಿ ಚರ್ಚಿಸಿದ ಮೇಲೆ ಧಾರ್ಮಿಕ ಚಿಂತಕರು ಧ್ಯಾನಪೀಠ ಮುಂತಾದ 4 ಹೆಸರುಗಳನ್ನು ಸೂಚಿಸಿ ಲಿಖಿತ ಸಲಹೆ ಕೊಟ್ಟಿರುವುದನ್ನು ಗಣನೆಗೆ ತೆಗೆದುಕೊಳ್ಳದೆ, 29-3-2008ರಂದು ನಡೆದ ದೇವಾಲಯ ವ್ಯವಸ್ಥಾಪನ ಸಮಿತಿಯ ಸಭೆಯಲ್ಲಿ ಬಲಿಪೀಠ ಬದಲಾಗಿ ಇಷ್ಟಾರ್ಥಸಿದ್ಧಿ ಪೀಠ ಎಂದು ಮತ್ತೆ ತಪ್ಪಾಗಿ ಮರುನಾಮಕರಣ ಮಾಡಿರುವುದು ಮಾದೇಶ್ವರರಿಗೆ ಮಾಡಿದ ಅಪಮಾನ.

ಏಕೆಂದರೆ, ಬಲಿಪೀಠ ಮತ್ತು ಇಷ್ಟಾರ್ಥ ಸಿದ್ಧಿ ಪೀಠ ಎರಡೂ ವೈದಿಕ ಶೈವ ಮೂಲದವುಗಳೇ. ಆದರೆ ಮಾದೇಶ್ವರರದು ವೈದಿಕ ಮೂಲವಲ್ಲ, ಶರಣ ಸಂಸ್ಕೃತಿ. ಜನರಿಗೆ ಉದ್ಯೋಗ - ಲಿಂಗ -ಜಾತಿ ಭೇದಗಳಿಲ್ಲದೆ, ಲಿಂಗ -ಧರ್ಮ -ಸಂಸ್ಕಾರ ನೀಡಿದುದು ಅವರ ಅತ್ಯದ್ಭುತ ಸಾಧನೆ. ಮಾದೇಶ್ವರರು ಧ್ಯಾನ, ತಪಸ್ಸು ಮಾಡಿದುದನ್ನು ಆಧರಿಸಿ ಧ್ಯಾನಪೀಠವೆಂದಾದರೂ ಹೆಸರಿಸದೆ ಅಥವಾ ಯಾವ ಹೆಸರೂ ಬೇಡವೆಂದು ಸುಮ್ಮನಿರದೆ ತರಾತುರಿಯಲ್ಲಿ ಅದನ್ನು ಇದನ್ನು ನೋಡಿ ಅವರನ್ನು ಇವರನ್ನು ಕೇಳಿ, ಎಲ್ಲೋ ವೈದಿಕ ಶೈವ ದೇವಸ್ಥಾನಗಳಲ್ಲಿ ಸ್ಥಾಪಿಸಿರಬಹುದಾದ ಪೀಠಗಳನ್ನು ಅನುಕರಿಸಿ, ಶರಣ ಪರಂಪರೆಯ ಮಾದೇಶ್ವರರು ಐಕ್ಯರಾಗಿರುವ ಸ್ಥಾನವಾದ ಗದ್ದುಗೆಯ ಪಕ್ಕದಲ್ಲಿ ಇಷ್ಟಾರ್ಥಸಿದ್ಧಿ ಪೀಠವೆಂದು ಮರುನಾಮಕರಣ ಮಾಡಿರುವುದು ಮಾದೇಶ್ವರರ ಪರಂಪರೆಗೆ ಸಂಪೂರ್ಣವಾಗಿ ವಿರುದ್ಧ.

ದೇಶ ಹಿಂದುಳಿಯಲು ಮೂಢನಂಬಿಕೆಯೂ ಕಾರಣ. ಗದ್ದುಗೆಯ ಮುಂಭಾಗದಲ್ಲಿ ಕಲ್ಲಿನ ಪೀಠಕ್ಕೆ ಇಷ್ಟಾರ್ಥ ಸಿದ್ಧ ಪೀಠವೆಂದು ಹೆಸರಿಸಿರುವುದು ಅವೈಜ್ಞಾನಿಕ, ಅವೈಚಾರಿಕ, ಅಸಹಜ, ಶರಣ ಸಂಸ್ಕೃತಿಗೂ ವಿರುದ್ಧ. ಇಂತಹ ನಾಮಾಂಕಿತಗಳಿಂದ ಇಷ್ಟಾರ್ಥಸಿದ್ಧಿಯಾಗುತ್ತದೆಂಬ ತಪ್ಪು ಸಂದೇಶ ನೀಡಿದಂತಾಗಿ, ಮೂಢ ಭಾವನೆ ಬೆಳೆಯಲು ಕಾರಣವಾಗಿ, ವ್ಯಾಪಾರೀಕರಣಕ್ಕೆ ದಾರಿಯಾಗಿ ಮೂಲ ಮಾದೇಶ್ವರರ ಗದ್ದುಗೆಗೆ ಪ್ರಾಮುಖ್ಯತೆ ಕಡಿಮೆಯಾಗಿ, ಶೋಷಣೆಗೆ ಅವಕಾಶವಾಗಿ ಜನರ ಸರ್ವತೋಮುಖ ಪ್ರಗತಿಗೆ ಅಡ್ಡಿಯುಂಟು ಮಾಡಿ, ಮೂಢನಂಬಿಕೆ ಬೆಳೆಸುವುದು ಭಾರತ ಸಂವಿಧಾನದ ಆಶಯಗಳಿಗೂ ವ್ಯತಿರಿಕ್ತ.

ಮಾದೇಶ್ವರರಂಥ ಪವಿತ್ರಾತ್ಮರ ಕ್ಷೇತ್ರದಲ್ಲಿ ಅವರ ಆಲೋಚನೆ, ಭಾವನೆ, ಧ್ಯಾನ, ತಪಸ್ಸು, ಉಪದೇಶ, ತತ್ವಗಳಿಗೆ ಪೂರ್ಣ ವಿರುದ್ಧವಾದ ಆಚರಣೆ, ಪ್ರತಿಷ್ಠಾಪನೆ, ವ್ಯವಹಾರಗಳನ್ನು ತಪ್ಪಿಸಿ ಮಾದೇಶ್ವರರ ಉಪದೇಶಗಳಿಗೆ ಅನುಗುಣವಾದ ಆಚಾರ ವಿಚಾರಗಳನ್ನು ತರಬೇಕು. ನಾನು ಈ ಬಗ್ಗೆ ಅರ್ಜಿಗಳನ್ನು ಕಳಿಸಿದ್ದಾಗ್ಯೂ ಅವರು ನನ್ನನ್ನಾಗಲಿ, ನನ್ನಂತೆ ಅರ್ಜಿ ಕೊಟ್ಟಿದ್ದ ಇತರರನ್ನಾಗಲಿ ಆಹ್ವಾನಿಸದೆ ಮರುನಾಮಕರಣ ಮಾಡಿರುವುದು ಸರಿಯಲ್ಲ. ಮಾದೇಶ್ವರರ ಜೀವನ, ಸಾಧನೆ, ಬೋಧನೆ, ಪರಂಪರೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಮುಕ್ತ ಮನಸ್ಸಿನಿಂದ ಪರಿಶೀಲಿಸಿಲ್ಲ. ಸಮಿತಿ ಗದ್ದುಗೆಯ ರಕ್ಷಣೆಗಾಗಿ ಇರುವುದೇ ವಿನಾ ಆ ಗದ್ದುಗೆಯ ಆಚರಣೆ ವಿಧಿವಿಧಾನಗಳಲ್ಲಿ ಹಸ್ತಕ್ಷೇಪ ಮಾಡುವ ಸ್ವಾತಂತ್ರ್ಯವಿಲ್ಲ. ಹೀಗಾಗಿ ಅಂಥ ಪೀಠ ಇರುವುದು ಸೂಕ್ತವಲ್ಲ.

ಅವರೇ ಚರ್ಚಿಸಿದ ಧಾರ್ಮಿಕ ಚಿಂತಕರು ಸೂಚಿಸಿರುವ ಹೆಸರುಗಳಲ್ಲಿ ಮೊದಲನೆಯದಾದ ಧ್ಯಾನಪೀಠ ಅತ್ಯಂತ ಸೂಕ್ತವಾಗಿದೆ. ಆದುದರಿಂದ ಇಷ್ಟಾರ್ಥ ಸಿದ್ಧಿ ಪೀಠವನ್ನು ರದ್ದುಪಡಿಸಿ, ಮಾದೇಶ್ವರರು ಧ್ಯಾನ, ತಪಸ್ಸು ಮಾಡುತ್ತಿದ್ದುದನ್ನು ಅನುಸರಿಸಿ, ಧ್ಯಾನಪೀಠ ಎಂದು ಹೆಸರಿಡಬೇಕು; ಇಲ್ಲದಿದ್ದರೆ ಯಾವ ಹೆಸರೂ ಬೇಡವೆಂದು ಆಗ್ರಹಿಸುತ್ತೇನೆ.

- ಸು. ಮಲ್ಲಿಕಾರ್ಜುನಪ್ಪ

ಮುತ್ತೀಪುರ



ಶ್ರೀ ಕ್ಷೇತ್ರ ಉಳಿವಿಯ ಮಹಾಮನೆ- ಆಕಳಗವಿಗಳನ್ನು ರಕ್ಷಿಸಬೇಕೆಂದು ಆಗ್ರಹಿಸಿ ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳು ಧಾರವಾಡ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು



ಅಥಣಿಯಲ್ಲಿ ನಡೆದ ಜಗದ್ಗುರು ಮಾತೆ ಗಂಗಾದೇವಿಯವರ ವಿಶ್ವಧರ್ಮ ಪ್ರವಚನ ಸಮಾರಂಭದ ಅತಿಥಿಗಳಾಗಿ ಉಪಸ್ಥಿತರಿದ್ದ ಶರಣ ದುಂಡಪ್ಪ ಐಗಳಿ ಹಾಗೂ ಶರಣೆ. ಸುರೇಖಾ ಜಕನೂರ್

CPMG/KA/BGW-50/2009-2011 WPP(W)-17 R.

Lord Basava IAS Academy
Mahavir Enclave, New Delhi

IAS coaching classes for the second batch will be commence from 20-7-2009 in Basava Mantapa, Mahavir Enclave, New Delhi. Highly qualified professionals give good coaching.

Duration of coaching : 22 Weeks

Prospectus : Rs.100 [One Hundred] Only

Hostel facility is also available

Counselling in Bangalore Basava Mantap 13-9-2009,11 AM
Mahavir Enclave is very near to airport and Dwaraka Extension and as well to Sulabh International office. Metro station is in walkable distance.

Bank Drafts shall be written in favour of Basava Mahamane Charitable Trust payable at New Delhi / Bangalore

For fees and other details please contact :

Pujya Sri Channabasavananda Swamiji
Secretary, Basava Mantapa
H-3/82, Bengali Colony Mahavir Enclave
New Delhi-110045
Ph: 011-64563860 09212627150

Bangalore Address:
Secretary, Basava Mantapa ,20th Main,
2nd Block, Rajajinagar
Bangalore -560010
Ph: 080 -23131476, 9663385657

ಲಾರ್ಡ್ ಬಸವ ಐ.ಎ.ಎಸ್ ಕೋಚಿಂಗ್ ಅಕಾಡೆಮಿ.
ಮಹಾವೀರ ಎನ್‌ಕ್ಲೇವ್, ನವದೆಹಲಿ

ಐ.ಎ.ಎಸ್ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ

ಐ. ಎ. ಎಸ್. ಕೋಚಿಂಗ್ ತರಗತಿಗಳು
ದಿ.8-9-2009 ರಿಂದ ಪ್ರಾರಂಭ

ಜುಲೈ 20ರಂದು ಮೊದಲನೆಯ ತಂಡದ ತರಬೇತಿ ಆರಂಭವಾಗಲಿದ್ದು ಎರಡನೆ ತಂಡದ ತರಬೇತಿಯು ಸೆಪ್ಟಂಬರ್ 8 ರಂದು ಆರಂಭವಾಗಲಿದೆ. ಆಸಕ್ತರು ಸಂಪರ್ಕಿಸಲು ವಿಳಾಸವನ್ನು ಕೊಡಲಾಗಿದೆ. 22 ವಾರಗಳ ಕೋಚಿಂಗ್. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಸಹ ಒದಗಲಿದೆ.